1	ಒಟ್ಟು ಸಂಬಳ : ಎ. ಆದಾಯ ತೆರಿಗೆ ಅಧಿನಿಯಮ 1961ರ ಪರಿಚ್ಛೇದ 17(1)ರಲ್ಲಿ ಒಳಗೊಂಡಿರುವ ಅನುವುಗಳ ಪ್ರಕಾರ ಸಂಬಳ	-	ರೂ.11,86,349.00
	ಬಿ. ಆದಾಯ ತೆರಿಗೆ ಅಧಿನಿಯಮ, 1961ರ ಪರಿಚ್ಛೇದ 17(2)ರ ಅಡಿಯಲ್ಲಿ ಇತರೆ ಸವಲತ್ತುಗಳ ಮೌಲ್ಯ	-	-
	ಸಿ. ಆದಾಯ ತೆರಿಗೆ ಅಧಿನಿಯಮ, 1961ರ ಪರಿಚ್ಛೇದ 17(3)ರ ಅಡಿಯಲ್ಲಿ ಸಂಬಳದ ಬದಲಿಗೆ ಲಾಭಗಳು	-	-
2	ದಾಸ್ತಾನು ಆಯ್ಕೆ	-	-
3	ಸ್ವೆಟ್ ಈಕ್ವಿಟಿ	-	-
4	ಕಮಿಷನ್ನು -ಲಾಭದ ಶೇಕಡಾವಾರಿನಂತೆ -ಇತರವುಗಳು	-	-
5	ಇತರವುಗಳು, ದಯವಿಟ್ಟು ನಿರ್ದಿಷ್ಟವಾಗಿ ತಿಳಿಸುವುದು	-	-
	ಒಟ್ಟು (ಎ)	-	ರೂ.11,86,349.00
	ಅಧಿನಿಯಮದ ಪ್ರಕಾರ ಮಿತಿಗೊಳಿಸಿರುವುದು	--ಅನ್ವಯ ಗೊಳ್ಳುವುದಿಲ್ಲ-	-

ಬಿ. ನಿರ್ದೇಶಕರುಗಳಿಗೆ ಸಂಭಾವನೆ

ಕ್ರಮ ಸಂಖ್ಯೆ	ಸಂಭಾವನೆಯ ವಿವರಗಳು	ನಿರ್ದೇಶಕರ ಹೆಸರು			ಒಟ್ಟು ಮೊತ್ತ
1	ಸ್ವತಂತ್ರ ನಿರ್ದೇಶಕರುಗಳು	-	-	-	-
	★ನಿರ್ದೇಶಕರುಗಳ ಮಂಡಳಿಯ ಸಭೆ,	★ಟಿಪ್ಪಣಿ 1ರಲ್ಲಿ ನೀಡಲಾಗಿದೆ.			

	ಸಮಿತಿ ಸಭೆಗಳಿಗೆ ಹಾಜರಾದುದಕ್ಕಾಗಿ ಶುಲ್ಕ				
	★ಕಮಿಷನ್ನು	-	-	-	-
	★ಇತರವು, ನಿರ್ದಿಷ್ಟವಾಗಿ ತಿಳಿಸುವುದು				
	ಒಟ್ಟು (1)	-	-	-	-
2	ಇತರೆ ಕಾರ್ಯನಿರ್ವಹಕರಲ್ಲದ ನಿರ್ದೇಶಕರುಗಳು	-	-	-	-
	★ನಿರ್ದೇಶಕರುಗಳ ಮಂಡಳಿಯ ಸಭೆ, ಸಮಿತಿ ಸಭೆಗಳಿಗೆ ಹಾಜರಾದುದಕ್ಕಾಗಿ ಶುಲ್ಕ	ಟಿಪ್ಪಣಿ 2ರಲ್ಲಿ ನೀಡಲಾಗಿದೆ.			
	ಕಮಿಷನ್ನು	-	-	-	-
	ಇತರರುಗಳು ಸಂಬಳ	-	-	-	-
	ಒಟ್ಟು (2)				
	ಒಟ್ಟಾರೆ ವ್ಯವಸ್ಥಾಪನಾ ಸಂಭಾವನೆ	-	-	-	-
	ಅಧಿನಿಯಮದ ಅನುಸಾರ ಒಟ್ಟಾರೆ ಮಿತಿ	-ಅನ್ವಯ ಗೊಳ್ಳುವುದಿಲ್ಲ-	-ಅನ್ವಯ ಗೊಳ್ಳುವುದಿಲ್ಲ -	-ಅನ್ವಯ ಗೊಳ್ಳುವುದಿಲ್ಲ -	

★ **ಟಿಪ್ಪಣಿ-1 :**

ಕ್ರಮ ಸಂಖ್ಯೆ	ನಿರ್ದೇಶಕರುಗಳ ಹೆಸರು	ಮೊತ್ತ
1	ಶ್ರೀ ಎಸ್.ಬಿ. ಶೆಟ್ಟಿ	3000
2	ಶ್ರೀಮತಿ ವಿಮಲಾ ಸ್ವಾಮಿ	1000

★ **ಟಿಪ್ಪಣಿ-2 :**

ಕ್ರಮ ಸಂಖ್ಯೆ	ನಿರ್ದೇಶಕರುಗಳ ಹೆಸರು	ಮೊತ್ತ
1	ಶ್ರೀ ರವಿಕುಮಾರ್ ಸುರಪುರ, ಭಾಆಸೇ	3000
2	ಶ್ರೀ ವಿಶಾಲ್ ರವಿ, ಭಾಆಸೇ	1000
3	ಶ್ರೀ ನಿತೇಶ್ಪ ಾಟೀಲ್, ಭಾಆಸೇ	4,000
4	ಶ್ರೀ ಸುರೇಶ್ ಬಿ. ಐತಾಳ್, ಭಾಆಸೇ	3000
5	ಶ್ರೀ ಕೆ.ಪಿ. ಮೋಹನ್ ರಾಜ್, ಭಾಆಸೇ	1000
6	ಶ್ರೀ ಎಂ.ಟಿ. ರೇಜು, ಭಾಆಸೇ	3000
7	ಶ್ರೀಮತಿ ಎಂ.ಎಸ್. ಅರ್ಚನಾ, ಭಾಆಸೇ	1000
8	ಶ್ರೀ ರಾಜ್‌ಕುಮಾರ್ ಗೌತಮ್, ಭಾಆಸೇ	1000
9	ಶ್ರೀ ಗೋಪಾಲ ಕೃಷ್ಣ ಬಿ, ಭಾಆಸೇ	1000

ಸಿ. ವ್ಯವಸ್ಥಾಪಕ ನಿರ್ದೇಶಕರು, ವ್ಯವಸ್ಥಾಪಕರು/ಮ್ಯಾನೇಜರ್/ಡಬ್ಲ್ಯೂಟಿಡಿಗಳಲ್ಲದ ಪ್ರಮುಖ ಅಧಿಕಾರಿಗಳಿಗೆ ಸಂಭಾವನೆ:

ಕ್ರಮ ಸಂಖ್ಯೆ	ಸಂಭಾವನೆಯ ವಿವರಗಳು	ಪ್ರಮುಖ ವ್ಯವಸ್ಥಾಪನಾ ಅಧಿಕಾರಿಗಳು			
		ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯವರು	ಪವನ್ ಪಿಸೆ ಕಾರ್ಯದರ್ಶಿ ಯವರು	ಮುಖ್ಯ ಹಣಕಾಸು ಅಧಿಕಾರಿಯವರು	ಒಟ್ಟು
1	ಒಟ್ಟು ಸಂಬಳ	-	7,20,000.00	-	7,20,000.00
	(ಎ) ಆದಾಯ ತೆರಿಗೆ ಅಧಿನಿಯಮ 1961ರ ಪರಿಚ್ಛೇದ 17(1)ರಲ್ಲಿ ಒಳಗೊಂಡಿರುವ ಅನುವುಗಳ ಪ್ರಕಾರ ಸಂಬಳ	-	-	-	-
	(ಬಿ) ಆದಾಯ ತೆರಿಗೆ ಅಧಿನಿಯಮ, 1961ರ ಪರಿಚ್ಛೇದ 17(2)ರ ಅಡಿಯಲ್ಲಿ ವಿಶೇಷ-ಸವಲತ್ತುಗಳ ಮೌಲ್ಯ	-	-	-	-
	(ಸಿ)ಆದಾಯ ತೆರಿಗೆ ಅಧಿನಿಯಮ, 1961ರ ಪರಿಚ್ಛೇದ 17(3)ರ ಅಡಿಯಲ್ಲಿ ಸಂಬಳದ ಬದಲಾಗಿನ ಲಾಭಗಳು	-	-	-	-
2	ದಾಸ್ತಾನು ಆಯ್ಕೆ	-	-	-	-
3	ಸ್ವೆಟ್ ಈಕ್ವಿಟಿ	-	-	-	-
4	ಕಮಿಷನ್ನು -ಲಾಭದ ಶೇಕಡಾವಾರಿನಂತೆ -ಇತರವುಗಳೂ	-	-	-	-
5	ಇತರವುಗಳು, ದಯವಿಟ್ಟು ನಿರ್ದಿಷ್ಟವಾಗಿ ತಿಳಿಸುವುದು	-	-	-	-
	ಒಟ್ಟು	-	7,20,000.00	-	7,20,000.00

V. ದಂಡಗಳು/ದಂಡನೆ/ಶಿಕ್ಷೆಗಳು/ಅಪರಾಧ/ಉಲ್ಲಂಘನೆಗಳ ಸಂಯೋಜನೆ :

ಮಾದರಿ	ಕಂಪನಿಗಳ ಅಧಿನಿಯಮದ ಪರಿಚ್ಛೇದ	ಸಂಕ್ಷಿಪ್ತ ವಿವರಣೆ	ದಂಡ/ದಂಡನೆ/ ಶಿಕ್ಷೆಯನ್ನು ಸಂಯೋಜನಾ ಶುಲ್ಕಕ್ಕೆ ಪರಿವರ್ತಿಸಿರುವುದು	ಪ್ರಾಧಿಕಾರ (ಆರ್‌ಡಿ/ ಎನ್‌ಸಿಎಲ್‌ಟಿ / ನ್ಯಾಯಾಲಯ	ಮಾಡಿಕೊಳ್ಳಲಾಗಿರುವ ಮನವಿ , ಯಾವುದಾದರೂ ಇದ್ದಲ್ಲಿ (ವಿವರಗಳನ್ನು ನೀಡುವುದು)
ಎ. ಕಂಪನಿ					
ದಂಡ	-	-	-	-	-
ದಂಡನೆ/ಶಿಕ್ಷೆ	-	-	-	-	-
ಸಂಯೋಜನೆಗೊಳಿಸಿರುವುದು	-	-	-	-	-

ಬಿ. ನಿರ್ದೇಶಕರುಗಳು					
ದಂಡ	-	-	-	-	-
ದಂಡನೆ/ಶಿಕ್ಷೆ	-	-	-	-	-
ಸಂಯೋಜನೆಗೊಳಿಸಿರುವುದು	-	-	-	-	-
ಸಿ. ತಪ್ಪಿತಸ್ಥಗೊಂಡಿರುವ ಇತರೆ ಅಧಿಕಾರಿಗಳು :					
ದಂಡ	-	-	-	-	-
ದಂಡನೆ/ಶಿಕ್ಷೆ	-	-	-	-	-
ಸಂಯೋಜನೆಗೊಳಿಸಿರುವುದು	-	-	-	-	-

ನಿರ್ದೇಶಕರುಗಳ ಮಂಡಳಿಯ ಆದೇಶದ ಮೇರೆಗೆ

ಹುಬ್ಬಳ್ಳಿ-ಧಾರವಾಡ ಸ್ಮಾರ್ಟ್ ಸಿಟಿ ನಿಯಮಿತದ
ನಿರ್ದೇಶಕರುಗಳ ಮಂಡಳಿಗಾಗಿ ಹಾಗೂ ಅದರ ಪರವಾಗಿ

--ಸಹಿ ಮಾಡಲಾಗಿದೆ--
ಸಿ.ಡಬ್ಲ್ಯು. ಶಕೀಲ್ ಅಹ್ಮದ್
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್ : 08168997

ಸ್ಥಳ : ಹುಬ್ಬಳ್ಳಿ
ದಿನಾಂಕ : 07.11.2022

--ಸಹಿ ಮಾಡಲಾಗಿದೆ—
ಎಸ್.ಬಿ. ಶೆಟ್ಟಿ
ಸ್ವತಂತ್ರ ನಿರ್ದೇಶಕರು
ಡಿಐಎನ್ : 08302682

ಸ್ಥಳ : ಹುಬ್ಬಳ್ಳಿ
ದಿನಾಂಕ : 07.11.2022

ಅನುಬಂದ II

ನಮೂನೆ ಸಂಖ್ಯೆ ಎಒಸಿ-2

{ಅಧಿನಿಯಮದ ಪರಿಚ್ಛೇಡ 134 ಉಪ-ಪರಿಚ್ಛೇದ (3)ರ ಷರತ್ತು (ಎಚ್) ಹಾಗೂ ಕಂಪನಿಗಳ ನಿಯಮಗಳು, 2014ರ ನಿಯಮ 8(2)ರ ಅನುಸರಣೆಯಂತೆ}

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 188 ಉಪ-ಪರಿಚ್ಛೇದ (1)ರ ಅಡಿಯಲ್ಲಿ ಅದರ ಮೂರನೇ ಷರತ್ತಿನ ಅಡಿಯಲ್ಲಿನ ಕೆಲವು ಸ್ವತಂತ್ರ ತಂಡಗಳ ನಡುವಿನ ವ್ಯವಹಾರಗಳನ್ನೂ (ಆರ್ಮ್ಸ್ ಲೆಂತ್ ಟ್ರಾನ್ಸಾಕ್ಷನ್ಸ್) ಸೇರಿದಂತೆ ಕಂಪನಿಯು ಮಾಡಿಕೊಂಡಿರುವ ಗುತ್ತಿಗೆಗಳು/ವ್ಯವಸ್ಥೆಗಳ ಒಡಂಬಡಿಕೆಯ ವಿವರಗಳನ್ನು ಬಹಿರಂಗಪಡಿಸುವ ಸಲುವಾಗಿ ನಮೂನೆ

1. ಸ್ವತಂತ್ರ ತಂಡಗಳ ನಡುವಿನ ವ್ಯವಹಾರಗಳ ಆಧಾರದ ಮೇರೆಗೆ ಆಗಿರದ ಗುತ್ತಿಗೆಗಳು ಅಥವಾ ವ್ಯವಸ್ಥೆಗಳು ಅಥವಾ ವ್ಯವಹಾರಗಳ ವಿವರಗಳು : -- ಅನ್ವಯಿಗೊಳ್ಳುವುದಿಲ್ಲ.

2. ಸ್ವತಂತ್ರ ತಂಡಗಳ ನಡುವಿನ ವ್ಯವಹಾರಗಳ ಆಧಾರದ ಮೇರೆಗಿನ ಗುತ್ತಿಗೆಗಳು ಅಥವಾ ವ್ಯವಸ್ಥೆಗಳು ಅಥವಾ ವ್ಯವಹಾರಗಳ ವಿವರಗಳು

ಕ್ರಮ ಸಂಖ್ಯೆ	ವಿವರಗಳು	ವಿವರಗಳು
ಎ	ಸಂಬಂಧಿತ ತಂಡದ ಹೆಸರು (ಗಳು) ಹಾಗೂ ಸಂಬಂಧದ ಸ್ವರೂಪ	ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ (ಎಚ್‌ಡಿಎಂಸಿ) ಪ್ರಧಾನ ಷೇರುದಾರರು
ಬಿ	ಗುತ್ತಿಗೆಗಳು/ವ್ಯವಸ್ಥೆಗಳು/ವ್ಯವಹಾರಗಳ ಸ್ವರೂಪ	ಯೋಜನೆ ಸಂಬಂಧಿತ ವೆಚ್ಚಗಳು
ಸಿ	ಗುತ್ತಿಗೆಗಳು/ವ್ಯವಸ್ಥೆಗಳು/ವ್ಯವಹಾರಗಳ ಅವಧಿ	ಅವಿರತ/ಮುಂದುವರೆದುಕೊಂಡು ಹೋಗುತ್ತಿರುವ
ಡಿ	ಗುತ್ತಿಗೆಗಳು ಅಥವಾ ವ್ಯವಸ್ಥೆಗಳು ಅಥವಾ ವ್ಯವಹಾರಗಳ ಪ್ರಮುಖ ಷರತ್ತುಗಳು , ಮೌಲ್ಯವೂ ಸೇರಿದಂತೆ, ಯಾವುದಾದರೂ ಇದ್ದಲ್ಲಿ	ಸಾಮಾನ್ಯ ವ್ಯವಹಾರದ ಅವಧಿಯಲ್ಲಿ
ಇ	ನಿರ್ದೇಶಕರುಗಳ ಮಂಡಳಿಯು ಅನುಮೋದಿಸಿದ ದಿನಾಂಕ	-
ಎಫ್	ಮುಂಗಡವಾಗಿ ಪಾವತಿಸಲಾಗಿರುವ ಮೊತ್ತ, ಯಾವುದಾದರೂ ಇದ್ದಲ್ಲಿ	--ಯಾವುದೂ ಇರುವುದಿಲ್ಲ--

ನಿರ್ದೇಶಕರುಗಳ ಮಂಡಳಿಯ ಆದೇಶದ ಮೇರೆಗೆ

ಹುಬ್ಬಳ್ಳಿ-ಧಾರವಾಡ ಸ್ಮಾರ್ಟ್ ಸಿಟಿ ನಿಯಮಿತದ
ನಿರ್ದೇಶಕರುಗಳ ಮಂಡಳಿಗಾಗಿ ಹಾಗೂ ಅದರ ಪರವಾಗಿ

--ಸಹಿ ಮಾಡಲಾಗಿದೆ--	--ಸಹಿ ಮಾಡಲಾಗಿದೆ—
ಸಿ.ಡಬ್ಲ್ಯು. ಶಕೀಲ್ ಅಹ್ಮದ್	ಎಸ್.ಬಿ. ಶೆಟ್ಟಿ
ವ್ಯವಸ್ಥಾಪಕ ನಿರ್ದೇಶಕರು	ಸ್ವತಂತ್ರ ನಿರ್ದೇಶಕರು
ಡಿಐಎನ್ : 08168997	ಡಿಐಎನ್ : 08302682
ಸ್ಥಳ : ಹುಬ್ಬಳ್ಳಿ	ಸ್ಥಳ : ಹುಬ್ಬಳ್ಳಿ
ದಿನಾಂಕ : 07.11.2022	ದಿನಾಂಕ : 07.11.2022

ಅನುಬಂಧ III

ಪೂರ್ಣಗೊಂಡಿರುವಂತಹ ಯೋಜನೆಗಳ ವಿವರಗಳು

1. ಸ್ಮಾರ್ಟ್ ಶಾಲೆ:

ಈ ಯೋಜನೆಯ ಪ್ರಮುಖ ಉದ್ದೇಶವು ಪ್ರಸಕ್ತ ಇರುವಂತಹ ಲ್ಯಾಮಿಂಗ್ಟನ್ ಪ್ರೌಢ ಶಾಲೆಯು 106 ವರ್ಷಗಳಷ್ಟು ಹಳೆಯದಾಗಿದ್ದು ಹುಬ್ಬಳ್ಳಿ – ಧಾರವಾಡ ಮಹಾನಗರಪಾಲಿಕೆಯ ಸ್ವಾಮ್ಯದಲ್ಲಿದ್ದು, ಇದನ್ನು ಇತ್ತೀಚಿನ ಐಸಿಟಿ ಅನುಕೂಲತೆಗಳು ಹಾಗೂ ಮೂಲಸೌಕರ್ಯಗಳೊಂದಿಗೆ ಹೊಸ ಸ್ಮಾರ್ಟ್ ಶಾಲೆಯನ್ನಾಗಿ ಮೇಲ್ದರ್ಜೆಗೇರಿಸುವುದಾಗಿದ್ದಿತು. ತರಗತಿ ಕೊಠಡಿಗಳನ್ನು ಒಂದು ವಿಸ್ತೃತ ಜ್ಞಾನಭಂಡಾರದ ಡೊಮೈನಿಗೆ ಸಂಪರ್ಕಿಸುವ ಉದ್ದೇಶದಿಂದ ಹಾಗೂ ಸೌಕರ್ಯ-ಸವಲತ್ತುಗಳಿಂದ ವಂಚಿತರಾದಂತಹ ವಿದ್ಯಾರ್ಥಿಗಳಿಗೆ ಒಂದು ಸರಳೀಕೃತ ಪರಿಮಕಾರಿತ್ವದಿಂದ ಕೂಡಿದ ಭೋಧನೆ, ಗುಣಮಟ್ಟದ ಶಿಕ್ಷಣವನ್ನು ನೀಡುವುದಾಗಿರುವುದು. ಅಭಿಯಾನದ ಅಡಿಯಲ್ಲಿ 2 ಸಂಖ್ಯೆಗಳಷ್ಟು ಸ್ಮಾರ್ಟ್ ತರಗತಿ ಕೊಠಡಿಗಳನ್ನು ಈ ಕೆಳಗಿನ ಶಾಲಾ ನಿರ್ವಹಣೆ-ವ್ಯವಸ್ಥಾಪನೆ ತಂತ್ರಾಂಶ ಅನ್ವಯಿ, ಅನುಕರಣಾ ಮೋಡ್ (ಸಿಮ್ಯುಲೇಷನ್ ಮೋಡ್), ತಡಿ ಮಾಡೆಲಿಂಗ್ ಮತ್ತು ಅನಿಮೇಷನ್, ಸ್ಥೂಲ ಚಿತ್ರ ಮತ್ತು ರೇಖಾಚಿತ್ರ ಮೋಡ್‌ಗಳು, ಇ-ವಾಚನಾಲಯ ಮುಂತಾದ ಐಸಿಟಿ ತಂತ್ರಜ್ಞಾನಗಳೊಂದಿಗೆ ಅಭಿವೃದ್ಧಿಪಡಿಸಲಾಗಿರುವುದು.

2. ಸ್ಮಾರ್ಟ್ ಆರೋಗ್ಯಪಾಲನೆ:

"ಅತ್ಯುತ್ತಮ ಸ್ಮಾರ್ಟ್ ಆರೋಗ್ಯ ಯೋಜನೆ" ಅಡಿಯಲ್ಲಿ ಅತ್ಯುತ್ತಮ ಶ್ರೇಣಿಯ ಪ್ರಮಾಣಪತ್ರ ನೀಡಿಕೆಗಾಗಿ ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯವು ಹುಬ್ಬಳ್ಳಿ ಯೋಜನೆಯನ್ನು ಆಯ್ಕೆ ಮಾಡಿರುವುದು.

ಸ್ಮಾರ್ಟ್ ಆರೋಗ್ಯಪಾಲನೆ ಯೋಜನೆಯ ಅಡಿಯಲ್ಲಿ ಚಿತ್ತಗುಪ್ಪಿ ಆಸ್ಪತ್ರೆಯನ್ನು ಅಭಿವೃದ್ಧಿಪಡಿಸಲಾಗಿರುವುದು, ಇದರ ಅಡಿಯಲ್ಲಿ ವಿದ್ಯುನ್ಮಾನ ಆರೋಗ್ಯ ದಾಖಲೆಗಳು (ಇಎಂಆರ್), ವರ್ಚುಯಲ್ ಆರೋಗ್ಯಪಾಲನೆ, ಸ್ಮಾರ್ಟ್ ರೋಗ ಪತ್ತೆಹಚ್ಚುವಿಕೆ (ಡಯಾಗ್ನೋಸ್ಟಿಕ್ಸ್), ಸ್ಮಾರ್ಟ್ ಆಸ್ಪತ್ರೆ ನಿರ್ವಹಣಾ ವ್ಯವಸ್ಥೆ, ಔಷದಿ ನಿರ್ವಹಣಾ ವ್ಯವಸ್ಥೆ ಹಾಗೂ ಇತರೆ ಅನುಕೂಲತೆಗಳನ್ನು ಸೃಷ್ಟಿಸುವುದನ್ನು ಒಳಗೊಂಡಿರುವುದು.

3. ಮಹಾತ್ಮಾ ಗಾಂಧಿ ಉದ್ಯಾನವನ : ಸಂಗೀತ ಕಾರಂಜಿ :

ಸಂಗೀತ ಕಾರಂಜಿಯನ್ನು ಮಹಾತ್ಮಾ ಗಾಂಧಿ ಉದ್ಯಾನವನದಲ್ಲಿ ಮನೋರಂಜನಾ ಉದ್ದೇಶಗಳಿಗಾಗಿ ಸ್ಥಾಪಿಸಲಾಯಿತು, ಇದು ಡಿಎಂಎಕ್ಸ್ ನಿಯಂತ್ರಣ ವ್ಯವಸ್ಥೆಗಳಿಂದ ನೀರಿನ ಸೌಂದರ್ಯಭರಿತ ವಿನ್ಯಾಸಗಳನ್ನು ಸೃಷ್ಟಿಸುವುದು. ಸಂಗೀತ ಕಾರಂಜಿ ಪ್ರದರ್ಶನವು ಬಣ್ಣದ ಕಾರಂಜಿ, ಲೇಸರ್ ಪ್ರದರ್ಶನ, ನಳಿಕೆಗಳೊಂದಿಗೆ ನೀರಿನ ಪರದೆ, ಪುನರ್-ಪರಿಶುದ್ಧಗೊಳಿಸಲ್ಪಟ್ಟಂತಹ ನೀರಿನಿಂದ ಮೂಡಲ್ಪಡುವ ಲೇಸರ್ ಪ್ರದರ್ಶನಕ್ಕಾಗಿ ನೀರಿನ ಪರದೆ, ಇವುಗಳನ್ನು ಒಳಗೊಂಡಿರುತ್ತದೆ.

4. ಘನ ತ್ಯಾಜ್ಯ ನಿರ್ವಹಣೆ (ಕಸ ಸಾಗಣೆಗಾಗಿ ಆಟೋ ಟಿಪ್ಪರುಗಳು ಮತ್ತು ಜೆಟ್ಟಿಂಗ್ ಯಂತ್ರಗಳು):

ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ಪ್ರದೇಶದಲ್ಲಿನ ಘನ ತ್ಯಾಜ್ಯ ಸಂಗ್ರಹಣೆಗಾಗಿ ಮನೆಯಿಂದ ಮನೆಗೆ ಕಸ ಸಂಗ್ರಹಣಾ ವ್ಯವಸ್ಥೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವ ಸಲುವಾಗಿ 15 ಸಂಖ್ಯೆಗಳಷ್ಟು ಆಟೋ ಟಿಪ್ಪರುಗಳನ್ನು ಹಾಗೂ 3 ಸಂಖ್ಯೆಗಳಷ್ಟು ಜೆಟ್ಟಿಂಗ್ ಯಂತ್ರಗಳನ್ನು ಖರೀದಿಸಲಾಯಿತು ಹಾಗೂ ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಗೆ ವಹಿಸಿಕೊಡಲಾಯಿತು.

5. ಕಟ್ಟೆಗಳು ಮತ್ತು ಮಳಿಗೆಗಳ ಪುನರ್-ವ್ಯವಸ್ಥೆ : ಜನತಾ ಬಜಾರ್ :

ಅಭಿಯಾನದ ಅಡಿಯಲ್ಲಿ, ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಸ್ಥಳೀಯ ಆರ್ಥಿಕತೆಯನ್ನು ಪ್ರೋತ್ಸಾಹಿಸುವ ಹಾಗೂ ಉತ್ತಮಗೊಳಿಸುವ ಸಲುವಾಗಿ, ಮಾರುಕಟ್ಟೆ ಪ್ರದೇಶವನ್ನು ಅಭಿವೃದ್ಧಿಪಡಿಸಲಾಯಿತು. ಈ ಯೋಜನೆಯ ಅಡಿಯಲ್ಲಿ, ಮಳಿಗೆಗಳು ಮತ್ತು ಕಟ್ಟೆಗಳಿಗಾಗಿ ಸ್ಥಳವನ್ನು ಒದಗಿಸಲಾಯಿತು. 49 ಸಂಖ್ಯೆಗಳಷ್ಟು ಮಳಿಗೆಗಳು ಹಾಗೂ 20 ಸಂಖ್ಯೆಗಳಷ್ಟು ಕಟ್ಟೆಗಳಿಗೆ ಸ್ಥಳವನ್ನು ಒದಗಿಸಲಾಯಿತು.

6. ಅತೀಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ (ಎಂಎಸ್‌ಎಂಇ) ಪ್ರದೇಶ:

ಅತೀಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ (ಎಂಎಸ್‌ಎಂಇ) ಪ್ರದೇಶವನ್ನು ಅತೀಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ (ಎಂಎಸ್‌ಎಂಇ) ರಸ್ತೆ ಪ್ಯಾಕೇಜು ಯೋಜನೆ ಮೂಲಕ ಮೇಲ್ದರ್ಜೆಗೇರಿಸಲಾಯಿತು, ಇದು ಸುಮಾರು 350 ಸಂಖ್ಯೆಗಳಷ್ಟು ಕೈಗಾರಿಕೆಗಳಿಗೆ ಸುಲಭಗಮ್ಯತೆ / ಪ್ರವೇಶಸಾಧ್ಯತೆಯನ್ನು ಹೆಚ್ಚಳಗೊಳಿಸುವುದು ಹಾಗೂ ಯೋಜನೆಯ ಭಾಗಗಳು ಇವುಗಳನ್ನು ಒಳಗೊಂಡಿರುತ್ತವೆ : ಎಲ್‌ಯಿಂದ ಯಿಜಿಗೆ ಪರಿವರ್ತನೆ, ಬೀದಿ ದೀಪಗಳು, ರಸ್ತೆಗಳ ಮೇಲೆ ಗುರುತಿಸುವಿಕೆಗಳು (ಮಾರ್ಕಿಂಗ್), ಪಾದಚಾರಿ ಮಾರ್ಗ ಹಾಗೂ ಜಂಕ್ಷನ್ನುಗಳ ಸುಧಾರಣೆಗಳು, ಮಳೆ ನೀರು ಚರಂಡಿ ಹಾಗೂ ರಸ್ತೆಗಳಿಗೆ ಹೊಸ ಮೇಲ್ಮೈ/ಮೇಲ್ಪದರ ಹಾಕುವಿಕೆ.

7. ಮಹಾತ್ಮಾ ಗಾಂಧಿ ಉದ್ಯಾನವನ : ಗಾಜಿನ ಮನೆಯ ಪುನರ್-ಅಭಿವೃದ್ಧಿ/ನವೀಕರಣ:

1977ರಲ್ಲಿ ಸ್ಥಾಪಿತವಾದಂತಹ ಮಹಾತ್ಮಾ ಗಾಂಧಿ ಉದ್ಯಾನವನವು ಹುಬ್ಬಳ್ಳಿ-ಧಾರವಾಡ ನಗರದ ಪ್ರಮುಖ ಆಕರ್ಷಣಾ ಸ್ಥಳಗಳ ಪೈಕಿ ಒಂದು ಆಗಿರುತ್ತದೆ. ಇಲ್ಲಿ ಲಭ್ಯವಿರುವಂತಹ ಬಹಳಷ್ಟು ಸಂಖ್ಯೆ ಮರಗಳ ಕಾರಣ ಲಭ್ಯವಿರುವ ಪರಿಶುದ್ಧ ಗಾಳಿ ಸೇವನೆಗಾಗಿ ಜನತೆ ಇಲ್ಲಿಗೆ ಭೇಟಿ ನೀಡುತ್ತಾರೆ.

ಈ ಅಭಿಯಾನದ ಅಡಿಯಲ್ಲಿ, ಮಹಾತ್ಮಾ ಗಾಂಧಿ ಉದ್ಯಾನದಲ್ಲಿ ಇರುವಂತಹ ಇಂದಿರಾ ಗಾಜಿನ ಮನೆಯ ಪುನರ್-ಅಭಿವೃದ್ಧಿ/ನವೀಕರಣವು ಒಳಗೊಂಡಿರುತ್ತದೆ, ಇದು ಈ ಪ್ರದೇಶಕ್ಕೆ ಬಣ್ಣ ಹಚ್ಚುವಿಕೆ, ಎಂಎಸ್ ಟ್ರಸ್ಸ್‌ಗಳನ್ನು, ಜಿಐ ಶೀಟುಗಳನ್ನು ಬದಲಾಯಿಸುವುದನ್ನು ಒಳಗೊಂಡಿರುತ್ತದೆ, ಸ್ಲೈಡಿಂಗ್ ಗೇಟುಗಳು, ಟಫನ್ಡ್ ಗಾಜು ಹಾಗೂ ದೀಪದ ವ್ಯವಸ್ಥೆಗಳನ್ನು ಸ್ಥಾಪಿಸಲಾಯಿತು. ಈ ಸ್ಥಳವನ್ನು/ಪ್ರದೇಶವನ್ನು ಚಿತ್ರ ಬರೆಯುವಿಕೆ ಪ್ರದರ್ಶನಗಳು, ಯೋಗ ತರಗತಿ, ಸಭೆಸಮಾರಂಭಗಳು, ಸಾಮಾಜಿಕವಾಗಿ ಒಟ್ಟುಗೂಡುವಿಕೆ, ಇತ್ಯಾದಿಗಳಿಗಾಗಿ ಉಪಯೋಗಿಸಿಕೊಳ್ಳಬಹುದು.

8. ಬುದ್ಧಿಚಾತುರ್ಯತೆಯಿಂದ ಕೂಡಿದ (ಪಝಲ್) ವಾಹನ ನಿಲುಗಡೆ ವ್ಯವಸ್ಥೆ:

ರಾಜ್ಯದಲ್ಲಿ ತನ್ನದೇ ಆದಂತಹ ರೀತಿಯಲ್ಲಿ ಪ್ರಪ್ರಥಮವಾಗಿರುವಂತಹ, ಒಂದು ವಿದ್ಯುನ್ಮಾನ ಆಯಸ್ಕಾಂತ ಅನುಕೂಲತೆಯು ವಾಹನಗಳನ್ನು ಮೇಲಕ್ಕೆ ಎತ್ತಲು ಹಾಗೂ ಯಾವುದೇ ತೊಂದರೆಯಿಲ್ಲದೆಯೇ ಒಂದು ಸೀಮಿತ ಪ್ರದೇಶದಲ್ಲಿ ನಿಲುಗಡೆಗೊಳಿಸಲು ಸಹಾಯ ಮಾಡುತ್ತದೆ. ಈ ಅಭಿಯಾನದ ಅಡಿಯಲ್ಲಿ, ಮಹಾತ್ಮಾ ಗಾಂಧಿ ಉದ್ಯಾನವನದಲ್ಲಿ ಸ್ಥಾಪಿಸಲಾಗಿರುವಂತಹ ಬುದ್ಧಿಚಾತುರ್ಯತೆಯಿಂದ ಕೂಡಿದ (ಪಝಲ್) ವಾಹನ ನಿಲುಗಡೆ ವ್ಯವಸ್ಥೆಯು, ಮಹಾತ್ಮಾ ಗಾಂಧಿ ಉದ್ಯಾನವನಕ್ಕೆ ಬಹಳಷ್ಟು ಸಂಖ್ಯೆಯಲ್ಲಿ ಭೇಟಿ ನೀಡುವಂತಹ ಪ್ರವಾಸಿಗರ ಕಾರಣ, ಒಂದು ಸೀಮಿತ ಪ್ರದೇಶದಲ್ಲಿ ವಾಹನ ನಿಲುಗಡೆ ಸ್ಥಳವನ್ನು ಒದಗಿಸುವ ಸಲುವಾಗಿ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಯಿತು. ಅದು 6 ಸಂಖ್ಯೆಗಳ ಹಂತಗಳನ್ನು/ಅಂತಸ್ತುಗಳನ್ನು ಒಳಗೊಂಡಿದ್ದು 80 ಚದರ ಮೀಟರುಗಳ ಪ್ರದೇಶದಲ್ಲಿ 36 ಸಂಖ್ಯೆಗಳಷ್ಟು ವಾಹನಗಳ ನಿಲುಗಡೆಗೆ ಅವಕಾಶ ಮಾಡಿಕೊಡುತ್ತದೆ.

9. ಗುಣಮಟ್ಟ ನಿಯಂತ್ರಣ ಪ್ರಯೋಗಶಾಲೆಯ ಸ್ಥಾಪನೆ:

ಗುಣಮಟ್ಟ ನಿಯಂತ್ರಣ ಪ್ರಯೋಗಶಾಲೆ ಕಟ್ಟಡ ಮುಂತಾದ ಅತೀಸಣ್ಣ ವ್ಯಾಪಾರವ್ಯವಹಾರ ಕೇಂದ್ರಗಳ ಸ್ಥಾಪನೆ, ಪರೀಕ್ಷೆಗಳನ್ನು ನಡೆಸುವ ಸಲುವಾಗಿ ಪ್ರಯೋಗಶಾಲೆಗೆ ಉಪಕರಣಗಳು. ಈ ಕೆಳಗಿನ ಪರೀಕ್ಷೆಗಳನ್ನು ನಡೆಸಬಹುದು.

ಎ) ಮಣ್ಣಿನ ಗುಣಗಳು
ಬಿ) ಸಿಬಿಆರ್ ಪರೀಕ್ಷೆ
ಸಿ) ಕೋರ್ ಕಟ್ಟಿಂಗ್ ಯಂತ್ರ
ಡಿ) ಮರಳು, ಬಿಟುಮಿನ್, ಡಾಂಬರು ಮಿಶ್ರಣ ಪರೀಕ್ಷೆ
ಇ) ಕೋರ್ಸ್ ಅಗ್ರಿಗೇಟ್/ಫೈನ್ ಅಗ್ರಿಗೇಟ್ ಪರೀಕ್ಷೆ
ಎಫ್) ಸಿಮೆಂಟು ಪರೀಕ್ಷೆ
ಜಿ) ಕಾಂಕ್ರೀಟು ಕ್ಯೂಬ್ ಪರೀಕ್ಷೆ
ಹೆಚ್) ಅಡಚಣೆರಹಿತವಾಗಿರುವಿಕೆಗಾಗಿನ ಪರೀಕ್ಷೆಗಳು ಮತ್ತು ಇತ್ಯಾದಿಗಳು

10. ಐಸಿಸಿಸಿ (ಪ್ಯಾಕೇಜು – 01 ಸಿವಿಲ್), 11.ಐಸಿಸಿಸಿ – ಸೇವೆಗಳು, 12.ಐಸಿಸಿಸಿ-ಆಂತರಿಕ, 13. ಮಾಸ್ಟರ್ ಸಿಸ್ಟಮ್ ಇಂಟಗ್ರೇಟರ್, 14.ಐಸಿಸಿಸಿ (ಸ್ಥಳೀಯ ವ್ಯವಸ್ಥೆ ಇಂಟಗ್ರೇಟರ್) ಅಭಿವೃದ್ಧಿ:

ಐಸಿಸಿಸಿ ಕೇಂದ್ರವು ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಗೆ ಹಾಗೂ ಅಲ್ಲದೆಯೇ ಹುಬ್ಬಳ್ಳಿ-ಧಾರವಾಡ ನಗರಗಳ ನಾಗರೀಕರಿಗೆ ವಿವಿಧ ರೀತಿಗಳಲ್ಲಿ ಪ್ರಯೋಜನಕಾರಿಯಾಗಿರುತ್ತದೆ.

ಅದು ಅಸಾಮಾನ್ಯ ಘಟನೆಗಳನ್ನು ಗುರುತಿಸಲು ಹಾಗೂ ಅದಕ್ಕಾಗಿ ಸರಿಪಡಿಸುವಿಕೆ/ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತದೆ.

- ಇಲಾಖೆಗಳ ನಡುವಿನ ಸಮನ್ವಯತೆಯು ಸೇವೆಯ ಗುಣಮಟ್ಟವನ್ನು ಉತ್ತಮಗೊಳಿಸಲು ಸಹಾಯಕವಾಗುತ್ತದೆ.
- ದೂರಿನ ತ್ವರಿತ ಗುರುತಿಸುವಿಕೆಯು ತ್ವರಿತ ಪರಿಹಾರಕ್ಕೆ ಸಹಾಯಕವಾಗುತ್ತದೆ.
- ಘನತ್ಯಾಜ್ಯ ಸಂಗ್ರಹಣೆಯನ್ನು ಮೇಲ್ವಿಚಾರಣೆ ಮಾಡುತ್ತದೆ.



ತ್ಯಾಜ್ಯ ಸಂಗ್ರಹಣಾ ಪರಿಸ್ಥಿತಿಯು ಉತ್ತಮಗೊಂಡಿರುವುದು ಹಾಗೂ ನಾವು ಸಿಸಿಟಿವಿ ಕ್ಯಾಮೆರಾ ಸ್ಥಾಪಿಸಿರುವುದರಿಂದ ಜಂಕ್ಷನ್ನಿನ ವಿಚಕ್ಷಣೆಯು ಉತ್ತಮಗೊಂಡಿರುವುದು ಹಾಗೂ ಅಲ್ಲದೆಯೇ ಸ್ವಚ್ಛತೆಯು ಉತ್ತಮ ಸ್ಥಿತಿಯಲ್ಲಿರುವುದು ಹಾಗೂ ನಗರವನ್ನು ಸ್ವಚ್ಛವಾಗಿರಿಸಿರುವುದು. ಸಮಸ್ಯೆಗಳ ಪರಿಹಾರಕ್ಕಾಗಿ ಹಾಗೂ ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆಯ ದೈನಂದಿನ ಕಾರ್ಯಾಚರಣೆಗಳನ್ನು ಉತ್ತಮಗೊಳಿಸುವ ಸಲುವಾಗಿ ನಾಗರೀಕರು ಅರ್ಜಿಗಳನ್ನು ಸಲ್ಲಿಸುವ ಮೂಲಕ ನೇರವಾಗಿ ತಮ್ಮ ಕುಂದುಕೊರತೆಗಳನ್ನು ವ್ಯಕ್ತಪಡಿಸಬಹುದು.

- ಐಸಿಸಿಸಿ ಸಾಧನೆಯ ಪ್ರದೇಶದ ಭಾಗಗಳು
- ಚದರ ಮೀಟರುಗಳ ನೆಲ ಪ್ರದೇಶ
- ತತ ನಿರ್ವಾಹಕರುಗಳು ಕುಳಿತುಕೊಳ್ಳಲು ಅನುವು.
- ಅತೀ ಪ್ರಮುಖ ವ್ಯಕ್ತಿಗಳು ಕುಳಿತುಕೊಳ್ಳುವ ಸ್ಥಳ/ಸಭಾ ಕೊಠಡಿ
- ವಿಡಿಯೋ ಗೋಡೆ
- ಕರೆ ಕೇಂದ್ರ/ಕಾಲ್ ಸೆಂಟರ್ ಸ್ಥಾಪಿಸಿರುವುದು
- ಐಸಿಓಪಿ ವೇದಿಕೆ
- ಎಸ್‌ಡಬ್ಲ್ಯುಎಂ ಅನ್ವಯ ಹಾಗೂ ಮೇಲ್ವಿಚಾರಣಾ ವ್ಯವಸ್ಥೆ
- ಐಸಿಸಿಸಿ ಮೇಲ್ವಿಚಾರಣೆ
    - ಜಿಪಿಎಸ್ ಜಾಡುಹಿಡಿಯುವುದು, ಆರ್‌ಎಫ್‌ಐಡಿ ಟ್ಯಾಗುಗಳು, ಫ್ಯೂಯಲ್ ಸೆನ್ಸಾರುಗಳು, ಆರ್‌ಎಫ್‌ಐಡಿ ಓದುಗ ಹಾಗೂ ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆಯ ತ್ಯಾಜ್ಯ ಸಂಗ್ರಹಣೆಯನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ವಿಚಕ್ಷಣಾ ವ್ಯವಸ್ಥೆ
    - ಐಸಿಸಿಸಿ -ಹುಬ್ಬಳ್ಳಿ ಧಾರವಾಡ ನಾಗರೀಕರುಗಳಿಂದ ಬರುವಂತಹ ಕುಂದುಕೊರತೆಗಳಿಗೆ ಪ್ರತಿಕ್ರಿಯೆ ನೀಡುವ ಸಲುವಾಗಿ ಕರೆ ಕೇಂದ್ರ/ಕಾಲ್ ಸೆಂಟರ್ ಸ್ಥಾಪನೆ.
    - ಸಿಸಿಟಿವಿ ವಿಚಕ್ಷಣಾ ವ್ಯವಸ್ಥೆ

- ಐಸಿಓಪಿ ಪ್ಲಾಟ್‌ಫಾರಂ ಎಕ್ಸಿಕ್ಯೂಟೀವ್ ಡ್ಯಾಷ್‌ಬೋರ್ಡ್
- ಜಿಐಎಸ್‌ಲೇಯರ್
- ಸಾರ್ವಜನಿಕ ಬೈಸಿಕಲ್ಲು ಸೇವೆ ಹಂಚಿಕೊಳ್ಳುವಿಕೆ

15. ಎಸ್‌ಪಿವಿ ಜಾಲತಾಣದ ಸೃಷ್ಟಿ ಹಾಗೂ ನಿರ್ವಹಣೆ:



ಅಭಿಯಾನದ ಅಡಿಯಲ್ಲಿ, ಹುಬ್ಬಳ್ಳಿ-ಧಾರವಾಡ ಸ್ಮಾರ್ಟ್ ಸಿಟಿ ನಿಯಮಿತವು ತನ್ನ ಆಡಳಿತ ವ್ಯವಹಾರಗಳಿಗಾಗಿ ಹಾಗೂ ನಾಗರಿಕರಿಗೆ ತನ್ನ ಆಡಳಿತಾತ್ಮಕ ವಿವರಗಳನ್ನು ಓದಗಿಸುವುದನ್ನು ಸುಲಭಗೊಳಿಸುವ ಸಲುವಾಗಿ, ಯೋಜನೆಗಳ ಪಾರದರ್ಶಕತೆ ಮತ್ತು ಉತ್ತರದಾಯಿತ್ವಕ್ಕಾಗಿ ಯೋಜನೆಗಳ ಸ್ಥಿತಿಗತಿಗಳನ್ನು ನಿಯತವಾಗಿ ಇಂದಿನದಿನದನ್ನಾಗಿ ಮಾಡುವ ಸಲುವಾಗಿ, ತನ್ನ ಸ್ವಂತ ಜಾಲತಾಣವನ್ನು ಸೃಷ್ಟಿಸಿರುವುದು.

16. ಸ್ಮಾರ್ಟ್ ಶೌಚಾಲಯ (ಇ-ಶೌಚಾಲಯ):

ಜನಜೀವನ ಹಾಗೂ ಆರೋಗ್ಯದ ಗುಣಮಟ್ಟವನ್ನು ಸುಧಾರಿಸುವಲ್ಲಿ ಶೌಚಾಲಯಗಳು ಪ್ರಮುಖ ಮೂಲ ಅಗತ್ಯ ಸೌಲಭ್ಯವಾಗಿರುತ್ತವೆ. ಅಭಿಯಾನದ ಅಡಿಯಲ್ಲಿ, ಸಂಚಾರಿ ಜನಸಂಖ್ಯೆಯ ಅಗತ್ಯತೆಯನ್ನು ಪೂರೈಸುವ ಸಲುವಾಗಿ, ವಿಪರೀತವಾದಂತಹ ಜನಗಳು ಸೇರುವ ಸ್ಥಳಗಳಿಗೆ ಸಮೀಪವಾಗಿ ಹಾಗೂ ತ್ವರಿತವಾಗಿ ಬೆಳೆಯುತ್ತಿರುವ ಹಾಗೂ ವಾಣಿಜ್ಯ ಪ್ರದೇಶಗಳಲ್ಲಿ 15 ಸಂಖ್ಯೆಗಳಷ್ಟು ಸ್ಮಾರ್ಟ್ ಶೌಚಾಲಯಗಳನ್ನು ಕಾರ್ಯಗತಗೊಳಿಸಲಾಗಿರುವುದು.

17. ರಾಜಾಕಾಲುವೆ (ಉತ್ತರ) ಹೂಳು ತೆಗೆಯುವಿಕೆ:

18. ರಾಜಾಕಾಲುವೆ (ದಕ್ಷಿಣ) ಹೂಳು ತೆಗೆಯುವಿಕೆ:

ಹೂಳು ತುಂಬಿಕೊಂಡು ಹರಿಯುವ ನೀರನ್ನು ತಡೆಹಿಡಿದಿರುವ ಮುಕ್ತ ನಾಲೆಗಳ ಹೂಳು ತೆಗೆಯುವುದು ಕೊಳಚೆ ನೀರು ತುಂಬಿ ಹರಿಯುವುದು ಹಾಗೂ ಮಳೆಗಾಲದಲ್ಲಿ ಪ್ರವಾಹ ಪರಿಸ್ಥಿತಿಯನ್ನು ತಪ್ಪಿಸುವ ಉದ್ದೇಶದಿಂದ ಒಂದು ಪ್ರಮುಖ ಕಾರ್ಯವಾಗಿರುತ್ತದೆ. ಹೂಳು ತೆಗೆಯುವ ಕಾಮಗಾರಿಗಳು ನದಿಯ ಜಲಚಲನೆಯನ್ನು ಉತ್ತಮಗೊಳಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ.

19. ಸ್ಯಾನಿಟರಿ ನ್ಯಾಪ್ಕಿನ್ ನೀಡಿಕೆ ಯಂತ್ರ:

ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆಯ ಸ್ವಾಮ್ಯದಲ್ಲಿರುವಂತಹ ಲ್ಯಾಮಿಂಗ್‌ಟನ್ ಹೆಣ್ಣು ಮಕ್ಕಳ ಪ್ರೌಢ ಶಾಲೆಯಲ್ಲಿ ವಿದ್ಯಾರ್ಥಿನಿಯರಿಗೆ ಹಾಗೂ ಚಿತಗುಪ್ಪಿ ಆಸ್ಪತ್ರೆಯ ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆಯ ಮಹಿಳೆಯರ ವಿಶ್ರಾಂತಿ ಕೊಠಡಿಯಲ್ಲಿ ಹಾಗೂ ಇತರೆ 3 ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ಸ್ಯಾನಿಟರಿ ನ್ಯಾಪ್ಕಿನ್ ನೀಡಿಕೆ ಮೂಲಕ ಮೂಲ ನೈರ್ಮಲ್ಯ ಅನುಕೂಲತೆಗಳನ್ನು ಒದಗಿಸುವುದು.

20. ಮಳೆ ನೀರು ಕೋಯ್ಲು:

ಮಳೆ ನೀರು ಹರಿದು ಹೋಗುವುದಕ್ಕಿಂತ, ಅದನ್ನು ಪುನರ್-ಉಪಯೋಗಿಸಿಕೊಳ್ಳುವ ಉದ್ದೇಶಕ್ಕಾಗಿ ಕೂಡಿಡುವ ಹಾಗೂ ಸಂಗ್ರಹಿಸುವ ಸಲುವಾಗಿ. ಅಭಿಯಾನದ ಅಡಿಯಲ್ಲಿ ಮಳೆ ನೀರು ಕೋಯ್ಲು ಯೋಜನೆಯನ್ನು ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ಕ್ಯಾಂಪಸ್ಸಿನಲ್ಲಿ ಹಾಗೂ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸ್ವಾಮ್ಯದಲ್ಲಿರುವಂತಹ ಲ್ಯಾಮಿಂಗ್‌ಟನ್ ಶಾಲಾ ಕ್ಯಾಂಪಸ್ಸಿನಲ್ಲಿ ಕಾರ್ಯಗತಗೊಳಿಸಲಾಗಿರುವುದು, ಯೋಜನಾ ಭಾಗಗಳು 500 ಮೀಟರುಗಳು ಉದ್ದದ ಮಳೆ ನೀರು ಕಾಲುವೆ ಹಾಗೂ 21 ಸಂಖ್ಯೆಗಳ ಗುಂಡಿಗಳನ್ನು ಒಳಗೊಂಡಿರುತ್ತವೆ.

21. ಹುಬ್ಬಳ್ಳಿಯಲ್ಲಿರುವ ಈಜುಕೊಳದ ಪುನರ್-ಅಭಿವೃದ್ಧಿ:

ಅಭಿಯಾನದ ಅಡಿಯಲ್ಲಿ, ಮನೋರಂಜನೆ ಮತ್ತು ಕ್ರೀಡಾ ಚಟುವಟಿಕೆಗಳಿಗಾಗಿ, ಒಂದು ಉತ್ಕೃಷ್ಟ ಪ್ರಮಾಣಕಗಳವರೆಗೆ ಕ್ರೀಡೆಯನ್ನು ಅಭ್ಯಾಸ ಮಾಡುವ ಸಲುವಾಗಿ ಯುವಜನತೆಗೆ ಶಕ್ತಿಸಾಮರ್ಥ್ಯ ತುಂಬುವ ಸಲುವಾಗಿ ಪ್ರಸಕ್ತ ಇರುವಂತಹ ಈಜು ಕೊಳವನ್ನು ಭಾರತೀಯ ಕ್ರೀಡಾ ಪ್ರಾಧಿಕಾರದ ಪ್ರಮಾಣಕಗಳ ಮಟ್ಟಕ್ಕೆ ತರುವ ಸಲುವಾಗಿ ಪುನರ್-ಅಭಿವೃದ್ಧಿಗೊಳಿಸಲಾಗಿರುವುದು. ಈಜು ಕೊಳವು ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಯ ಸ್ವಾಮ್ಯದಲ್ಲಿರುವುದು.

22. ಸ್ಮಾರ್ಟ್ ರಸ್ತೆ ಪ್ಯಾಕೇಜು-04:

ಒಂದು ಅರ್ಪಿತ ಮನೋಭಾವದ ಪಾದಚಾರಿ ಮಾರ್ಗವನ್ನು ಒದಗಿಸುವ ಮೂಲಕ ಸ್ಮಾರ್ಟ್ ರಸ್ತೆ ಪ್ಯಾಕೇಜುಗಳ ಅಡಿಯಲ್ಲಿ ಜನತೆಗೆ ಹೆಚ್ಚಿನ ಪ್ರಮಾಣದಲ್ಲಿ ಸುಲಭ ಗಮ್ಯತೆಯನ್ನು ಒದಗಿಸುವುದು. ಅಭಿಯಾನದ ಅಡಿಯಲ್ಲಿ ಪ್ಯಾಕೇಜು-04ರಲ್ಲಿ ರಸ್ತೆಯನ್ನು ಸ್ಮಾರ್ಟ್ ರಸ್ತೆಯನ್ನು ನಿರ್ಮಿಸಲಾಗಿರುವುದು. ಯೋಜನಾ ಭಾಗಗಳು ಈ ಕೆಳಗಿನವುಗಳನ್ನು ಒಳಗೊಂಡಿರುತ್ತವೆ: ಎಲ್‌ಟಿ ವಿದ್ಯುತ್ ಮಾರ್ಗವನ್ನು ಭೂಮಿಯೊಳಗಿನ ಕೇಬಲ್ಲು ವ್ಯವಸ್ಥೆಗೆ ಪರಿವರ್ತಿಸುವುದು, ಬೀದಿ ದೀಪ ರಸ್ತೆಗಳಿಗೆ ನಿರ್ದೇಶನಾ ಗುರುತುಗಳನ್ನು ಮಾಡುವುದು, ಪಾದಚಾರಿ ಮಾರ್ಗಗಳು ಹಾಗೂ ಜಂಕ್ಷನ್ನುಗಳ ಸುಧಾರಣೆಗಳು, ಚರಂಡಿಗಳು ಹಾಗೂ ರಸ್ತೆಗಳಿಗೆ ಪುನರ್-ಮೇಲ್ಪದರ ಹಾಕುವುದು, 5 ವರ್ಷಗಳ ಅವಧಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆ.

23. ಸ್ಮಾರ್ಟ್ ರಸ್ತೆ ಪ್ಯಾಕೇಜು -05:

ಒಂದು ಅರ್ಪಿತ ಮನೋಭಾವದ ಪಾದಚಾರಿ ಮಾರ್ಗವನ್ನು ಒದಗಿಸುವ ಮೂಲಕ ಸ್ಮಾರ್ಟ್ ರಸ್ತೆ ಪ್ಯಾಕೇಜುಗಳ ಅಡಿಯಲ್ಲಿ ಜನತೆಗೆ ಹೆಚ್ಚಿನ ಪ್ರಮಾಣದಲ್ಲಿ ಸುಲಭ ಗಮ್ಯತೆಯನ್ನು ಒದಗಿಸುವುದು. ಅಭಿಯಾನದ ಅಡಿಯಲ್ಲಿ ಪ್ಯಾಕೇಜು-05ರಲ್ಲಿ ರಸ್ತೆಯನ್ನು ಸ್ಮಾರ್ಟ್ ರಸ್ತೆಯನ್ನು ನಿರ್ಮಿಸಲಾಗಿರುವುದು. ಯೋಜನಾ ಭಾಗಗಳು ಈ ಕೆಳಗಿನವುಗಳನ್ನು ಒಳಗೊಂಡಿರುತ್ತವೆ: ಎಲ್‌ಟಿ ವಿದ್ಯುತ್ ಮಾರ್ಗವನ್ನು ಭೂಮಿಯೊಳಗಿನ ಕೇಬಲ್ಲು ವ್ಯವಸ್ಥೆಗೆ ಪರಿವರ್ತಿಸುವುದು, ಬೀದಿ ದೀಪ ರಸ್ತೆಗಳಿಗೆ ನಿರ್ದೇಶನಾ ಗುರುತುಗಳನ್ನು ಮಾಡುವುದು, ಪಾದಚಾರಿ ಮಾರ್ಗಗಳು ಹಾಗೂ ಜಂಕ್ಷನ್ನುಗಳ ಸುಧಾರಣೆಗಳು, ಚರಂಡಿಗಳು ಹಾಗೂ ರಸ್ತೆಗಳಿಗೆ ಪುನರ್-ಮೇಲ್ಪದರ ಹಾಕುವುದು, 5 ವರ್ಷಗಳ ಅವಧಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆ.

24. <u>ನಗರದ ಬಡ ಜನತೆಗೆ ಮೂಲಸೌಕರ್ಯ ಸೇವೆಗಳು-01, 25. ನಗರದ ಬಡ ಜನತೆಗೆ ಮೂಲಸೌಕರ್ಯ ಸೇವೆಗಳು-03:</u>

ಅಭಿಯನದ ಅಡಿಯಲ್ಲಿ, ಯೋಜನೆಯು ನಗರ ಪ್ರದೇಶಗಳಲ್ಲಿನ ಬಡವರಿಗೆ ಅನುಕೂಲತೆಗಳನ್ನು ಒದಗಿಸುವ ದೃಷ್ಟಿಯಿಂದ ವಸತಿ, ಮೂಲಸೌಕರ್ಯ ಸೇವೆಗಳು ಹಾಗೂ ಹಾಗೂ ಇತರೆ ಸಂಬಂಧಿತ ನಾಗರಿಕ ಅನುಕೂಲತೆಗಳನ್ನು ಒದಗಿಸುವುದನ್ನು ಗುರಿಯಾಗಿಸಿಕೊಂಡಿರುವುದು.

ನಗರ ಪ್ರದೇಶಗಳಲ್ಲಿನ ಬಡ ಜನತೆಗೆ ಮೂಲಸೌಕರ್ಯ ಸೇವೆಗಳು ಪ್ಯಾಕೇಜು-01ರ ಅಡಿಯಲ್ಲಿ ಹಾಗೂ ´ನಗರ ಪ್ರದೇಶಗಳಲ್ಲಿನ ಬಡ ಜನತೆಗೆ ಮೂಲಸೌಕರ್ಯ ಸೇವೆಗಳು ಪ್ಯಾಕೇಜು-03ರ ಅಡಿಯಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿರುವುದು. ಯೋಜನೆಯ ಭಾಗಗಳು ತೊರ್ವಿಗಲ್ಲಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ, ಸರ್ಕಾರಿ ಶಾಲೆಯನ್ನು ಪುನರ್-ಅಭಿವೃದ್ಧಿಪಡಿಸುವುದು (ಸಂಖ್ಯೆ 1 ಮತ್ತು ಸಂಖ್ಯೆ 5), ಎಲ್‌ಟಿ ವಿದ್ಯುತ್ ಮಾರ್ಗವನ್ನು ಭೂಮಿಯೊಳಗಿನ ಕೇಬಲ್ಲು ವ್ಯವಸ್ಥೆಗೆ ಪರಿವರ್ತಿಸುವುದು, ಬೀದಿ ದೀಪಗಳು, ಬೀದಿ ದೀಪ ರಸ್ತೆಗಳಿಗೆ ನಿರ್ದೇಶನಾ ಗುರುತುಗಳನ್ನು ಮಾಡುವುದು, ಪಾದಚಾರಿ ಮಾರ್ಗಗಳು ಹಾಗೂ ಜಂಕ್ಷನ್ನುಗಳ ಸುಧಾರಣೆಗಳು, ಚರಂಡಿಗಳು ಹಾಗೂ ರಸ್ತೆಗಳಿಗೆ ಪುನರ್-ಮೇಲ್ಪದರ ಹಾಕುವುದು, 5 ವರ್ಷಗಳ ಅವಧಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆ.

26. <u>ಬದಲಾವಣೆಗಾಗಿ ಬೈಸಿಕಲ್ಲು:</u>

ಬದಲಾವಣೆಗಾಗಿ ಬೈಸಿಕಲ್ಲು ಮುಂತಾದ ಯೋಜನೆಯನ್ನು ಕಾರ್ಯಗತಗೊಳಿಸುವ ಮೂಲಕ ಬದಲಾವಣೆಗಾಗಿ ಬೈಸಿಕಲ್ಲು ಮುಂತಾದ ಯೋಜನೆಯನ್ನು ಕಾರ್ಯಗತಗೊಳಿಸುವ ಮೂಲಕ ಮೋಟಾರು ವಾಹನೇತರ ಸಂಪರ್ಕತೆಯು ಹೆಚ್ಚಳಗೊಂಡಿತು. ಯೋಜನೆಯ ಅಡಿಯಲ್ಲಿ, ಬೈಸಿಕಲ್ಲು ಸವಾರರುಗಳಿಗೆ ಉತ್ತಮ ಗಮ್ಯತೆಗಾಗಿ ಸಮರ್ಪಿತ ಮನೋಭಾವದ ಮೋಟಾರು ವಾಹನೇತರ ಕಾರಿಡಾರಿನಲ್ಲಿ ನಿರ್ದೇಶನ ಫಲಕಗಳನ್ನು ಹಾಕಲಾಗಿರುವುದು.

27. ಉಣಕಲ್ ಮಾರುಕಟ್ಟೆಯ ಪುನರ್-ಅಭಿವೃದ್ಧಿ:

ಸ್ಥಳೀಯ ವ್ಯಾಪಾರಗಳನ್ನು ಪ್ರೋತ್ಸಾಹಿಸುವ ಸಲುವಾಗಿ, ವಿವಿಧ ಉಪಯುಕ್ತತೆ ಸ್ಥಳದೊಂದಿಗೆ ಪುನರ್-ಅಭಿವೃದ್ಧಿಪಡಿಸಲಾಗಿರುವುದು, ಅದನ್ನು ಮಾರುಕಟ್ಟೆ ಸ್ಥಳ ಮತ್ತು ಪರಸ್ಪರ ಸಂಭಾಷಣಾ ಸ್ಥಳವನ್ನಾಗಿ ಉಪಯೋಗಿಸಲಾಗುವುದು. ಅಭಿಯಾನದ ಅಡಿಯಲ್ಲಿ, ಉಣಕಲ್ ಮಾರುಕಟ್ಟೆಯನ್ನು 1820 ಚದರ ಮೀಟರುಗಳ ಪ್ರದೇಶದೊಂದಿಗೆ ಪುನರ್-ಅಭಿವೃದ್ಧಿಪಡಿಸಲಾಗಿರುವುದು, ಅದು 200 ವ್ಯಕ್ತಿಗಳಿಗೆ ಸ್ಥಳಾವಕಾಶ ಮಾಡಿಕೊಡಬಲ್ಲದು.

ಉಣಕಲ್ ಮಾರುಕಟ್ಟೆಯನ್ನು ಭಾನುವಾರದ ಸಂತೆ / ಮಾರುಕಟ್ಟೆಯಾಗಿ ಉಪಯೋಗಿಸಲಾಗುವುದು ಹಾಗೂ ಈ ಸ್ಥಳವನ್ನು ಒಂದು ವಾರದಲ್ಲಿ 1 ದಿನ ಮಾತ್ರ ಉಪಯೋಗಿಸಿಕೊಳ್ಳಲಾಗುವುದು. ಈ ಸ್ಥಳವನ್ನು ವಿವಿಧ ಉಪಯುಕ್ತತೆಯ ಸ್ಥಳವನ್ನಾಗಿ ಅಭಿವೃದ್ಧಿಪಡಿಸಲಾಗಿರುವುದರಿಂದ, ಅದನ್ನು ಸಾಂಸ್ಕೃತಿಕ ಕಾರ್ಯಕ್ರಮಗಳು, ಕುಟುಂಬ ಕಾರ್ಯಕ್ರಮಗಳು, ವಸ್ತು ಪ್ರದರ್ಶನ, ಯೋಗ, ಧ್ಯಾನ, ಮುಂತಾದವುಗಳಿಗೆ ಒಂದು ವೇದಿಕೆಯನ್ನಾಗಿ ಉಪಯೋಗಿಸಿಕೊಳ್ಳಬಹುದು.

28. ಸಿಸಿಟಿವಿ ಕಂಪಗಳ ಸರಬರಾಜು ಮತ್ತು ಸ್ಥಾಪನೆ:

ಮೇಲ್ವಿಚಾರಣಾ ಉದ್ದೇಶಗಳಿಗಾಗಿ ಉಪಯೋಗಿಸಲ್ಪಡುವಂತಹ ಸುರಕ್ಷತಾ/ಸುಭದ್ರತಾ ಕ್ಯಾಮರಾಗಳ ಸ್ಥಾಪನೆಗಾಗಿ ಕ್ಯಾಮರಾ ಕಂಬಗಳನ್ನು ಉಪಯೋಗಿಸಲಾಗುವುದು. ಅಭಿಯಾನದ ಅಡಿಯಲ್ಲಿ, ಹುಬ್ಬಳ್ಳಿ-ಧಾರವಾಡದಲ್ಲಿ ಮಹಾನಗರಪಾಲಿಕೆ ಪ್ರದೇಶ ಹಾಗೂ ಸ್ಮಾರ್ಟ್ ಸಿಟಿ ಅಭಿಯಾನ ಪ್ರದೇಶ ಆಧಾರಿತ ಅಭಿವೃದ್ಧಿ ಪ್ರದೇಶದಲ್ಲಿ ಘನ ತ್ಯಾಜ್ಯ ನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ 160 ಸಂಖ್ಯೆಗಳಷ್ಟು ಸಿಸಿಟಿವಿ ಕ್ಯಾಮೆರಾ ಕಂಬಗಳನ್ನು ಸ್ಥಾಪಿಸಲಾಯಿತು.

29. ಪ್ರಮುಖ ಮಾರುಕಟ್ಟೆಗಳ ನವೀಕರಣ – ಹಳೆಯ ನಗರ ತರಕಾರಿ ಮಾರುಕಟ್ಟೆ ಬಿ: ಕಟ್ಟೆಗಳು ಮತ್ತು ಮಳಿಗೆಗಳ ಪುನರ್ವಸತಿ:

ಅಭಿಯಾನದ ಅಡಿಯಲ್ಲಿ, ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಸ್ಥಳೀಯ ಆರ್ಥಿಕತೆಯನ್ನು ಪ್ರೋತ್ಸಾಹಿಸುವ ಹಾಗೂ ವರ್ಧಿಸುವ/ಹೆಚ್ಚಿಸುವ ಸಲುವಾಗಿ ಮಾರುಕಟ್ಟೆ ಪ್ರದೇಶವನ್ನು ಅಭಿವೃದ್ಧಿಪಡಿಸಲಾಯಿತು. ಈ ಯೋಜನೆಯ ಅಡಿಯಲ್ಲಿ ಮಳಿಗೆಗಳು ಮತ್ತು ಕಟ್ಟೆಗಳಿಗೆ ಸ್ಥಳವನ್ನು ಒದಗಿಸಲಾಗಿರುವುದು. 8 ಸಂಖ್ಯೆಗಳಷ್ಟು ಮಳಿಗೆಗಳು ಹಾಗೂ 64 ಸಂಖ್ಯೆಗಳಷ್ಟು ಕಟ್ಟೆಗಳಿಗೆ ಸ್ಥಳವನ್ನು ಒದಗಿಸಲಾಗಿರುವುದು.

30. ಬೂಮ್ ಬ್ಯಾರಿಯರ್‌ಗಳ ಖರೀದಿ ಹಾಗೂ ಸ್ಥಾಪನೆ:

ಸುರಕ್ಷತೆ/ಭದ್ರತೆಯ ಹೆಚ್ಚುವರಿ ಸ್ತರವನ್ನು ಒದಗಿಸುವ ಸಲುವಾಗಿ ಹಾಗೂ ವಾಹನ ಗಮ್ಯತೆ/ಚಲನೆಯನ್ನು ನಿರ್ಬಂಧಿಸುವ ಸಲುವಾಗಿ ಸ್ಥಾಪಿಸಲಾಗಿರುವುದು. ಅಭಿಯಾನದ ಅಡಿಯಲ್ಲಿ ಖಾಸಗಿ ವಾಹನಗಳ ಪ್ರವೇಶವನ್ನು ನಿರ್ಬಂಧಿಸುವ ಉದ್ದೇಶದಿಂದ ಬಸ್ಸುಗಳ ತ್ವರಿತ ಸಾರಿಗೆ ಸೇವೆಗಳ (ಬಿಆರ್‌ಟಿಎಸ್) ಕಾರಿಡಾರಿನ ಉದ್ದಗಲಕ್ಕೂ 68 ಸಂಖ್ಯೆಗಳಷ್ಟು ಬೂಮ್ ಬ್ಯಾರಿಯರ್‌ಗಳನ್ನು ಸ್ಥಾಪಿಸಲಾಗಿರುವುದು.

31. ತೋಳನಕೆರೆ ಕೆರೆ ಅಭಿವೃದ್ಧಿ, 32. ಸೌರ ಬಟರ್‌ಫ್ಲೈ ಗ್ರಿಡ್ ಖರೀದಿ, 33. ತೋಳನಕೆರೆ ಕೆರೆ ಅಭಿವೃದ್ಧಿ ಹಂತ-02, 34. ಇಪಿಡಿಎಂ ನೆಲವನ್ನು ಅಳವಡಿಸುವಿಕೆ/ಹಾಕುವಿಕೆ:

ಅಭಿಯಾನದ ಅಡಿಯಲ್ಲಿ, ಯೋಜನೆಯು ಸಾರ್ವಜನಿಕ ಸ್ಥಳಗಳ ಮೂಲಕ ನಗರ ಜೀವನದ ಗುಣಮಟ್ಟವನ್ನು ಪುನರ್-ವರ್ಣಿಸಿರುವುದು. ಅದು ಒಂದು ಕೆರೆಯನ್ನು ಪುನರ್ಚೈತನ್ಯಗೊಳಿಸುವ ಯೋಜನೆಯಾಗಿದ್ದು, ಅದರಲ್ಲಿ ನಗರ ಪ್ರದೇಶಗಳಲ್ಲಿನ ಜೀವನದ ಗುಣಮಟ್ಟದ ಮೇಲೆ ಪ್ರಭಾವವನ್ನು ಬೀರುವಂತಹ ಮನೋರಂಜನಾ ಅನುಕೂಲತೆಗಳೊಂದಿಗೆ ಸಕ್ರಿಯ ಸಮುದಾಯ ಸಾರ್ವಜನಿಕ ಸ್ಥಳಗಳನ್ನು ಸೃಷ್ಟಿಸುವ ಸಲುವಾಗಿ

ತೋಳನಕೆರೆ ಕೆರೆಯನ್ನು ಪುನರ್-ಅಭಿವೃದ್ಧಿಪಡಿಸಲಾಗಿರುವುದು. ಈ ಪ್ರದೇಶವು 32.64 ಎಕರೆಗಳಷ್ಟು ವಿಸ್ತೀರ್ಣ ಹೊಂದಿರುತ್ತದೆ, ಅದರಲ್ಲಿ ಪ್ರಮುಖ/ಪ್ರಧಾನ ನಡುಗೆ ದಾರಿ, ಆಂತರಿಕ ನಡುಗೆ ದಾರಿ, ಭೂ ಇಳಿಜಾರು ಪ್ರದೇಶ, ಆಂಫೀಥಿಯೆಟರ್, 50 ಸಂಖ್ಯೆಗಳಷ್ಟು ನಾಲ್ಕು ಚಕ್ರಗಳ ವಾಹನಗಳು, 50 ಸಂಖ್ಯೆಗಳಷ್ಟು ದ್ವಿಚಕ್ರ ವಾಹನಗಳಿಗೆ ಅವಕಾಶವಾಗುವಂತಹ ವಾಹನ ನಿಲುಗಡೆ, ಚರಂಡಿ, ಧ್ಯಾನ ಸ್ಥಳ, ಮಕ್ಕಳ ಆಟದ ಪ್ರದೇಶ, ತೆರೆದ ಜಿಮ್ ಪ್ರದೇಶ, ಸಂಪು ಟ್ಯಾಂಕು, ಆಹಾರ ಕಿಯಾಸ್ಕೋ, ವೀಕ್ಷಣಾ ಗೋಪುರ -2, ಐಸಿಸಿಸಿ ಕೇಂದ್ರಕ್ಕೆ ಅಂತರ-ಸಂಪರ್ಕಹೊಂದಿರುವಂತಹ ಸಿಸಿಟಿವಿ ಕ್ಯಾಮರಗಳು, ಭದ್ರತಾ ಸಿಬ್ಬಂದಿಯ ಕೊಠಡಿ, ದೈಹಿಕವಾಗಿ ವಿಕಲಚೇತನ ವ್ಯಕ್ತಿಗಳ ಆಟದ ಪ್ರದೇಶಕ್ಕೆ ಇಪಿಡಿಎಂ ನೆಲವನ್ನು ಹಾಕಿರುವುದು, ಕ್ರೀಡೆಗಳನ್ನು ಆಡುವ ಸ್ಥಳ, ವರ್ಮಿಕಾಂಪೋಸ್ಟ್, ದೀಪದ ಕಂಬಗಳು ತೋಳನಕೆರೆ ಕೆರೆಯಲ್ಲಿ ಸ್ಥಾಪಿಸಲಾಗಿರುವಂತಹ ಹೈ ಮಾಸ್ಟ್ ದೀಪಗಳನ್ನು ಬೆಳಗಿಸಬಲ್ಲಂತಹ ಸೌರ ಬಟರ್‌ಫ್ಲೈ ಗ್ರಿಡ್, ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

35. <u>ಬೆಂಗೇರಿ ಮಾರುಕಟ್ಟೆಯ ಪುನರ್-ಅಭಿವೃದ್ಧಿ:</u>

ಸ್ಥಳೀಯ ವ್ಯಾಪಾರವ್ಯವಹಾರಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ, ಮಾರುಕಟ್ಟೆ ಸ್ಥಳವನ್ನುವಿವಿಧ ಉಪಯುಕ್ತತೆಯ ಸ್ಥಳವನ್ನಾಗಿ ಉಪಯೋಗಿಸಬಹು ಸ್ಥಳವನ್ನಾಗಿ ಪುನರ್-ಅಭಿವೃದ್ಧಿಪಡಿಸಲಾಗಿರುವುದು ಹಾಗೂ ಅದನ್ನು ಮಾರುಕಟ್ಟೆ ಸ್ಥಳ ಮತ್ತು ಪರಸ್ಪರ ಕಾರ್ಯ ನಡೆಸುವ ಸ್ಥಳವನ್ನಾಗಿ ಉಪಯೋಗಿಸಲಾಗುವುದು. ಈ ನಿವೇಶನವನ್ನು ವಾರದ ಮಾರುಕಟ್ಟೆಯಾಗಿ ಉಪಯೋಗಿಸಲಾಗುತ್ತಿರುವುದು ಹಾಗೂ ಬೆಂಗೇರಿ ಸಂತೆಬೈಲು ಎಂಬುದಾಗಿ ಹೆಸರುವಾಸಿಯಾಗಿದ್ದು, ಬೆಂಗೇರಿ ಪ್ರದೇಶದಲ್ಲಿನ ಪ್ರಸಕ್ತ ಇರುವಂತಹ ಮಾರುಕಟ್ಟೆಯು ಶನಿವಾರದ ಮಾರುಕಟ್ಟೆಯಾಗಿರುತ್ತದೆ.

ಮಾರುಕಟ್ಟೆ ಪ್ರದೇಶವು 12700 ಚದರ ಮೀಟರುಗಳ ವಿಸ್ತೀರ್ಣವನ್ನು ಒಳಗೊಂಡಿರುತ್ತದೆ ಹಾಗೂ ಒಂದೇ ವೇಳೆಯಲ್ಲಿ 300 ಕಟ್ಟೆಗಳಿಗೆ 800 ವ್ಯಕ್ತಿಗಳು ಸುಲಭವಾಗಿ ಭೇಟಿ ನೀಡಬಹುದಾಗಿರುತ್ತದೆ. ಈ ಸ್ಥಳವನ್ನು ವಿವಿಧ ಉಪಯುಕ್ತತೆಯ ಸ್ಥಳವನ್ನಾಗಿ ಅಭಿವೃದ್ಧಿಪಡಿಸಲಾಗಿರುವುದರಿಂದ, ಅದನ್ನು ಸಾಂಸ್ಕೃತಿಕ ಕಾರ್ಯಕ್ರಮಗಳು, ಕುಟುಂಬ ಕಾರ್ಯಕ್ರಮಗಳು, ವಸ್ತು ಪ್ರದರ್ಶನ, ಯೋಗ, ಧ್ಯಾನ, ಮುಂತಾದವುಗಳಿಗೆ ಒಂದು ವೇದಿಕೆಯನ್ನಾಗಿ ಉಪಯೋಗಿಸಿಕೊಳ್ಳಬಹುದು ಹಾಗೂ ಯೋಜನೆಯ ಭಾಗಗಳು ಸಿಸಿಟಿವಿ ಕಂಬಗಳು, ದೀಪದ ಕಂಬಗಳು, ಶೌಚಾಲಯಗಳು, ಭದ್ರತಾ ಸಿಬ್ಬಂದಿಯ ಕೊಠಡಿ, ಎಲ್‌ಇಡಿ ಪ್ರದರ್ಶನ ಫಲಕಗಳು, ಕುಡಿಯುವ ನೀರಿನ ಅನುಕೂಲತೆ, ಘನ ತ್ಯಾಜ್ಯ ನಿರ್ವಹಣೆ ಹಾಗೂ 50 ಸಂಖ್ಯೆಗಳಷ್ಟು ದ್ವಿಚಕ್ರ ವಾಹನಗಳಿಗೆ ಹಾಗೂ 25 ಸಂಖ್ಯೆಗಳಷ್ಟು ನಾಲ್ಕು ಚಕ್ರದ ವಾಹನಗಳಿಗೆ ನಿಲುಗಡೆ ವ್ಯವಸ್ಥೆಯನ್ನು ಒಳಗೊಂಡಿರುತ್ತದೆ.

36. ಮಹಾತ್ಮಾ ಗಾಂಧಿ ಉದ್ಯಾನವನದ ಪುನರ್-ಅಭಿವೃದ್ಧಿ:

1977ರಲ್ಲಿ ಸ್ಥಾಪಿಸಲಾದಂತಹ ಮಹಾತ್ಮಾ ಗಾಂಧಿ ಉದ್ಯಾನವನವು ಹುಬ್ಬಳ್ಳಿ-ಧಾರವಾಡ ನಗರಗಳ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿರುತ್ತದೆ. ಈ ಉದ್ಯಾನವನದಲ್ಲಿ ಲಭ್ಯವಿರುವಂತಹ ಬಹಳಷ್ಟು ಸಂಖ್ಯೆಯ ಮರಗಳ ಕಾರಣ ಅಧಿಕ ಪ್ರಮಾಣದಲ್ಲಿ ಲಭ್ಯವಿರುವಂತಹ ಪರಿಶುದ್ಧ ಗಾಳಿಯನ್ನು ಸೇವಿಸುವ/ಉಸಿರಾಡುವ ಸಲುವಾಗಿ ಈ ಉದ್ಯಾನವನಕ್ಕೆ ಜನತೆಯು ಭೇಟಿ ನೀಡುತ್ತಾರೆ.

ಅಭಿಯಾನದ ಅಡಿಯಲ್ಲಿ, ಮಹಾತ್ಮಾ ಗಾಂಧಿ ಉದ್ಯಾನವನವನ್ನು ಪುನರ್-ಅಭಿವೃದ್ಧಿಪಡಿಸಲಾಯಿತು, ಉದ್ಯಾನವನವು 21.00 ಎಕರೆಗಳಷ್ಟು ವಿಸ್ತೀರ್ಣವನ್ನು ಹೊಂದಿದ್ದು ನಡೆದಾಡುವ ಮಾರ್ಗ, ಆಂಫೀಥಿಯೆಟರ್, ಮಕ್ಕಳಿಗೆ ಆಟದ ಪ್ರದೇಶ, ತುಂತುರು ನೀರಾವರಿ ವ್ಯವಸ್ಥೆ, ಸ್ಕೇಟಿಂಗ್ ನೆಲ, ಅಝೋಬೊ, ಮಳೆ ನೀರು ಚರಂಡಿ-ಧ್ಯಾನ ಸ್ಥಳ, ಸಣ್ಣ ಪ್ರಮಾಣದಲ್ಲಿ ನಡೆಸಬಹುದಾದ ಕಾರ್ಯಕ್ರಮ ಪ್ರದೇಶ, ಕಾರ್ಯಕ್ರಮಗಳನ್ನು ನಡೆಸುವ ಸಲುವಾಗಿ ತೆರೆದ/ಮುಕ್ತ ಪ್ರದೇಶ, ವಾಸ್ತುಶಿಲ್ಪ ವಿಗ್ರಹಗಳು, ವರ್ಮಿಕಾಂಪೋಸ್ಟ್ ತಯಾರಿಕಾ ವ್ಯವಸ್ಥೆ, ಶೌಚಾಲಯಗಳು, ದ್ವಿಚಕ್ರ ವಾಹನಗಳಿಗೆ ನಿಲುಗಡೆ ವ್ಯವಸ್ಥೆ, ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

37. ಮಹಾತ್ಮಾ ಗಾಂಧಿ ಉದ್ಯಾನವನ ಹಂತ – 02 (ಟಾಯ್ ಟ್ರೈನು):

ಟಾಯ್ ಟ್ರೈನು : ಇಂಜನ್ನುಗಳು, ಕೋಚುಗಳು, ಎರಡು ಸ್ಟೇಷನ್ನುಗಳು, ಒಂದು ನಿರ್ವಹಣಾ ಷೆಡ್ಡು, ಎರಡು ಟಿಕೇಟು ಕಿಯಾಸ್ಕೊಗಳು, ಸೌರ ಛಾವಣಿ, ಸಿಸಿಟಿವಿ ಕ್ಯಾಮರ ವಿಚಕ್ಷಣೆ, ಎಸಿ ಕೋಚುಗಳು, ಚಾಲಕರಿಗೆ ಎಲ್ಇಡಿ ಪರದೆ, ಸ್ವಯಂಚಾಲಿತ ಗೇಟು ತೆರೆಯುವಿಕೆ, ಡಿಜಿಟಲ್ ಪ್ರದರ್ಶಕ ಎಲ್ಇಡಿ ಪರದೆಗಳು, ಏರ್ ಸಸ್ಪೆನ್ಷನ್, ಹೊಗೆ ಪತ್ತೆಹಚ್ಚುವ ಸಾಧನ, ಬೆಂಕಿ ಆರಿಸುವ ಸಾಧನ, ರೈಲು ಮಾರ್ಗ ಆಸನ ಸಾಮರ್ಥ್ಯ: 49 ವಯಸ್ಕರಿಗೆ /60 ಮಕ್ಕಳಿಗೆ, ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

38. ಆರ್‌ಎಫ್‌ಐಡಿ ಓದುಗ ಸಾಧನಗಳ ಸರಬರಾಜು ಮತ್ತು ಸ್ಥಾಪನೆ, 39. ಜಿಪಿಎಸ್ ಜಾಡುಹಿಡಿಯುವ ಸಾಧನಗಳ ಸರಬರಾಜು ಮತ್ತು ಅಳವಡಿಸುವಿಕೆ:

ಐಸಿಸಿಸಿಯಲ್ಲಿ ಉತ್ತಮ ಮೇಲ್ವಿಚಾರಣೆಗಾಗಿ ಐಸಿಸಿಸಿ-ಎಲ್‌ಎಸ್‌ಐ ಅಡಿಯಲ್ಲಿ ಘನ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಕಾರ್ಯಗತಗೊಳಿಸುವ ಸಲುವಾಗಿ ಹೆಚ್ಚುವರಿ ಖರೀದಿ ಹಾಗೂ ಘನ ತ್ಯಾಜ್ಯ ಸಂಗ್ರಹಣಾ ಟಿಪ್ಪರುಗಳ ಚಲನೆಯ ಜಾಡನ್ನು ಹಿಡಿಯುವ ಸಲುವಾಗಿ 60 ಸಂಖ್ಯೆಗಳಷ್ಟು ಜಿಪಿಎಸ್ ಜಾಡುಹಿಡಿಯುವ ಸಾಧನಗಳನ್ನು ಸ್ಥಾಪಿಸಲಾಗಿರುವುದು.

40. ಸಂಚಾರಿ ವಾಚನಾಲಯ ವ್ಯಾನನ್ನು ವಿನ್ಯಾಸಗೊಳಿಸುವುದು, ಖರೀದಿಸುವುದು ಹಾಗೂ ಸರಬರಾಜು ಮಾಡುವುದು:

ಅಭಿಯಾನದ ಅಡಿಯಲ್ಲಿ ವಾಚನಾಲಯ ವ್ಯಾನಿನ ವಿನ್ಯಾಸಗೊಳಿಸಲಾಗಿರುವುದು, ಅದರಲ್ಲಿ 1000ದಿಂದ 1500 ಸಂಖ್ಯೆಗಳಷ್ಟು ಪುಸ್ತಕಗಳನ್ನು ಜೋಡಿಸಬಹುದು ಹಾಗೂ ಈ ಯೋಜನೆಯ ಭಾಗಗಳು ವಿಭಜನಾ ಗೋಡೆಯೊಂದಿಗೆ ಚಾಲಕರ ವಿಭಾಗ, ಗ್ರಂಥಪಾಲಕರ ಡೆಸ್ಕ್, ಮ್ಯಾಗಝೈನ್ ರ್ಯಾಕು (2 ಸಂಖ್ಯೆಗಳು) ಪುಸ್ತಕಗಳ ರ್ಯಾಕು, ಕುರ್ಚಿಗಳು (6 ಜನರಿಗೆ), ಸಿಸಿಟಿವಿ, ಯುಪಿಎಸ್‌ಗಾಗಿ ಅನುವು ಹಾಗೂ ಬ್ಯಾಟರಿ, ಪುಸ್ತಕಗಳಿಗಾಗಿ ಡೀಕೆ ಸಂಗ್ರಹ ವ್ಯವಸ್ಥೆ, ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

41. ವಿದ್ಯುತ್ ಚಿತಾಗಾರ:

ವಿದ್ಯುತ್ ಚಿತೆಯಲ್ಲಿ, ಸೌದೆ/ಮರವನ್ನು ಸುಡುವುದಿಲ್ಲ ಹಾಗೂ ಅನಿಲದ ಹೊಗೆ ಉಗುಳುವಿಕೆಯೂ ಇರುವುದಿಲ್ಲ. ಅದು ಮೃತ ಶರೀರವನ್ನು ಸುಡುವ ಒಂದು ಸಾಂಪ್ರದಾಯಿಕವಲ್ಲದ ಪದ್ಧತಿಯಾಗಿರುತ್ತದೆ ಎಂಬುದರಲ್ಲಿ ಅನುಮಾನವಿಲ್ಲ, ಆದರೆ ಅದು ಮರ, ಸೀಮೆ ಎಣ್ಣೆ, ಇತ್ಯಾದಿ ಮೂಲಗಳನ್ನು ಉಳಿಸುವುದರಲ್ಲಿ ಸಹಾಯಕವಾಗುತ್ತದೆ. ಅದು ಮೃತ ದೇಹವನ್ನು ಸುಡುವಲ್ಲಿ ಒಂದು ಅತ್ಯಂತ ಮಿತವ್ಯಯದ

ಆಯ್ಕೆಯಾಗಿರುತ್ತದೆ ಹಾಗೂ ಅದು ಪರಿಸರಸ್ನೇಹಿಯೂ ಆಗಿರುತ್ತದೆ.

ವಿದ್ಯುತ್ ಚಿತಾಗಾರವು ಒಂದು ಅಧಿಕ ಶಕ್ತಿಯ ಉರಿಕೋಣೆ/ಸುಡುತಟ್ಟೆ ಹಾಗೂ ಒಂದು ಬಕಪಾತ್ರೆಯನ್ನು (ಉದ್ದನೆಯ ಪಾತ್ರೆ) ಉಪಯೋಗಿಸಿಕೊಳ್ಳುತ್ತದೆ, ಅದರಲ್ಲಿ ಅನಿಲ-ಶಕ್ತಿಯ ಚಿತಾಗಾರದಲ್ಲಿ ಇರಿಸುವಂತೆಯೇ ಮೃತ ಶರೀರವನ್ನು ಇರಿಸಲಾಗುವುದು. ಉರಿಕೋಣೆ/ಸುಡುತಟ್ಟೆಯು ಒಂದು ನಿರ್ದಿಷ್ಟ ಶಾಖವನ್ನು ತಲುಪಿದನಂತರ ಮೃತ ಅಗತ್ಯ ಪ್ರಮಾಣದಲ್ಲಿ ಬಿಸಿಯಾಗಿರುವ ಕೋಣೆಗೆ ಹೋಗುತ್ತದೆ. ಉರಿಕೋಣೆ/ಸುಡುತಟ್ಟೆಯು ಸರಳ ವಿದ್ಯುತ್ ಸಂಪರ್ಕದ ಶಕ್ತಿಯನ್ನು ಹೊಂದಿರುತ್ತದೆ ಹಾಗೂ ಒಂದು ತ್ರೀ ಫೇಸ್ ವಿದ್ಯುತ್ ಹೊರಗಂಡಿಗೆ ಸಂಪರ್ಕಿಸಬಹುದು/ಪ್ಲಗ್ ಮಾಡಬಹುದು.

ಅಭಿಯಾನದ ಅಡಿಯಲ್ಲಿ, ವಿದ್ಯುತ್ ಚಿತಾಗಾರವನ್ನು ನಿರ್ಮಿಸಲಾಗಿರುವುದು, ಇದು ಎಲ್ಲಾ ವರ್ಗದ ಜನತೆಗಾಗಿ ಆಗಿರುವುದು. ಈ ಯೋಜನಾ ಭಾಗಗಳು ಎಡಬ್ಲ್ಯುಎಲ್ ಕ್ರಿಮೇಟರ್, ದಹನಕ್ಕಾಗಿ ಗಾಳಿ ಸರಬರಾಜು ವ್ಯವಸ್ಥೆ (ಕಂಬಶ್ಚನ್ ಏರ್ ಸಪ್ಲೆ ಸಿಸ್ಟಮ್), ಒದ್ದೆ ಉಜ್ಜುಗ (ವನೆ ಮಾದರಿ), ಸಂಗ್ರಹಣಾ ಸ್ಥಳ (ಸ್ಟಾಕ್) (ಸ್ವಯಂ ಬೆಂಬಲಿತ), ನಿಯಂತ್ರಣ ಹಲಗೆ/ಪಟ್ಟಿ, ಕೈಯಿಂದ ಮಾಡಲಾಗುವ "ಮೃತ ದೇಹ" ವಿದ್ಯುತ್ ಚಾರ್ಜಿಂಗ್ ವ್ಯವಸ್ಥೆ, ಇತ್ಯಾದಿಗಳನ್ನು ಒಳಗೊಂಡಿರುತ್ತದೆ ಹಾಗೂ ಮೃತ ದೇಹದ ದಹನ ಪ್ರಕ್ರಿಯೆಯು ಒಂದು ದೇಹಕ್ಕೆ ಒಂದು ಗಂಟೆ ತೆಗೆದುಕೊಳ್ಳುತ್ತದೆ.

42. <u>ನಾಲೆ ನವೀಕರಣ ಹಂತ-01 (ಹಸಿರು/ಪರಿಸರ-ಸ್ನೇಹಿ ಸಂಚಾರಿ ಪಥ -ಹಂತ 01):</u>

ಉಣಕಲ್ ನಾಲೆಯು ನಗರದ ಪ್ರಮುಖ ಬೆನ್ನೆಲುಬಾಗಿರುತ್ತದೆ ಹಾಗೂ ಸ್ವಭಾವಜನ್ಯವಾಗಿ ನಗರದ ಒಂದು ಭಾಗವಾಗಿರುತ್ತದೆ, ಅದರ ಅಕ್ಕಪಕ್ಕ ವಾಸಿಸುತ್ತಿರುವಂತಹ ಜನಸಂಖ್ಯೆಯ ಕನಿಷ್ಠ ಶೇಕಡಾ ೨೦ರಷ್ಟು ಮಂದಿಯು ಅದನ್ನು ಪ್ರತೀ ದಿನವೂ ಕಡೆಯಪಕ್ಷ ಎರಡು ಸಲ ಹಾದು ಹೋಗುತ್ತಾರೆ. ಈ ಯೋಜನೆಯು ನಿರ್ದಿಷ್ಟವಾಗಿ ನಗರದಲ್ಲಿನ ಮಳೆನೀರು ಹರಿದುಹೋಗುವ ಉಣಕಲ್ ನಾಲೆಯನ್ನು ಕೇವಲ ಮಳೆ ನೀರು ಹರಿದುಹೋಗುವ ನಾಲೆಯಿಂದ ಸಮುದಾಯಕ್ಕಾಗಿ ಒಂದು ಅಭಿವೃದ್ಧಿಪಡಿಸಲ್ಪಟ್ಟಂತಹ ಒಂದು ಸಮಗ್ರತಾ ದೃಷ್ಟಿಯಿಂದ ಕೂಡಿದಂತಹ ಪುನಶ್ಚೈತನ್ಯಗೊಳಿಸುವುದರ ಮೇಲೆ ಗುರಿಯಾಗಿಸಿಕೊಂಡಿರುವುದು, ಅಭಿವೃದ್ಧಿಯ ಅವಕಾಶವನ್ನು ಒಂದು ಮೋಟಾರು ವಾಹನ ರಹಿತ ಹಸಿರು/ಪರಿಸರ-ಸ್ನೇಹಿ ಮಾರ್ಗ/ಕಾರಿಡಾರ್, ಒಂದು ಬೈಸಿಕಲ್ ಸವಾರರುಗಳಿಗಾಗಿ ಮಾರ್ಗ ಹಾಗೂ ನಗರದ ಉದ್ದಗಲಕ್ಕೂ ಪಾದಚಾರಿಗಳಿಗೆ ಸುಲಲಿತ ನಡಿಗೆಗಾಗಿ ಅನುಕೂಲ ಕಲ್ಪಿಸುವುದರೊಂದಿಗೆ ನಗರದಲ್ಲಿ ಪ್ರಮುಖ ರಸ್ತೆಗಳ ಪರಸ್ಪರ ಸಂಪರ್ಕ ಕಲ್ಪಿಸುವ ಸಲುವಾಗಿ ಉಪಯೋಗಿಸಿಕೊಳ್ಳಲಾಯಿತು.

ಅಭಿಯಾನದ ಅಡಿಯಲ್ಲಿ, ಹಸಿರು/ಪರಿಸರ-ಸ್ನೇಹಿ ಸಂಚಾರಿ

ಪಥ/ಕಾರಿಡಾರ್ ಸಿಐಟಿಐಐಎಸ್ ಸವಾಲು ಕಾರ್ಯಕ್ರಮದ ಅಡಿಯಲ್ಲಿನ ಒಂದು ಯೋಜನೆಯಾಗಿರುತ್ತದೆ. ಈ ಯೋಜನೆಗೆ ಫ್ರೆಂಚ್ ಅಭಿವೃದ್ಧಿ ಸಂಸ್ಥೆಯಿಂದ (ಏಜೆನ್ಸ್ ಫ್ರಾಂಚೈಸ್ ಡೆ ಡೆವಲಪ್ಮೆಂಟ್ (ಎಎಫ್‌ಡಿ) ಹಣಕಾಸನ್ನು ಒದಗಿಸಲ್ಪಟ್ಟಿರುತ್ತದೆ. ಯೋಜನೆಯನ್ನು 3 ಹಂತಗಳಲ್ಲಿ ವಿಭಜಿಸಲಾಗಿರುವುದು, ಅದು ನಾಲೆಯ ಉದ್ದಕ್ಕೂ, ಅದರ ಪಕ್ಕದಲ್ಲಿ ಒಂದು ಸಮರ್ಪಿತ ಮನೋಭಾವದಿಂದ ಕೂಡಿದ ಮೋಟಾರು ವಾಹನಗಳ ರಹಿತ ಮಾರ್ಗ ಹಾಗೂ ದ್ವಿಮುಖ ಪಥದ ಬೈಸಿಕಲ್ ಮತ್ತು ಪಾದಚಾರಿಗಳ ನಡಿಗೆ ಪಥಗಳೊಂದಿಗೆ ನಾಲೆಯನ್ನು ಅಭಿವೃದ್ಧಿಪಡಿಸುವುದನ್ನು ಒಳಗೊಂಡಿರುತ್ತದೆ.

ಹಸಿರು/ಪರಿಸರ-ಸ್ನೇಹಿ ಸಂಚಾರಿ ಪಥ -ಹಂತ 01 ಉಣಕಲ್ ನಾಲೆಯ ಹರಿವಿನ ದಿಕ್ಕಿನಲ್ಲಿ ಕಾರ್ಯಗತಗೊಳಿಸಲಾಗಿರುವಂತಹ ಪ್ರಪ್ರಥಮ ಪ್ರಾಯೋಗಿಕ ಯೋಜನೆಯಾಗಿದ್ದು 630 ಮೀಟರುಗಳ ಉದ್ದವನ್ನು ಒಳಗೊಂಡಿರುತ್ತದೆ.

43. <u>ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ (ಕಿಮ್ಸ್) ಪ್ರವೇಶ ಗೇಟಿನ ವಿನ್ಯಾಸ ಮತ್ತು ನಿರ್ಮಾಣ:</u>

ಅಭಿಯಾನದ ಅಡಿಯಲ್ಲಿ, ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸುರಕ್ಷತೆ ಮತ್ತು ಭದ್ರತೆಯ ಉದ್ದೇಶಗಳಿಗಾಗಿ ಪ್ರವೇಶ ಗೇಟಿನ ನಿರ್ಮಾಣವನ್ನು ಮಾಡಲಾಯಿತು.

44. <u>ಮೀನು ಮಾರುಕಟ್ಟೆ ಅಭಿವೃದ್ಧಿ :</u>

ಮೀನು ಮಾರುಕಟ್ಟೆಯು ಮೀನು ಮತ್ತು ಮೀನಿನ ಉತ್ಪನ್ನಗಳ ಮಾರಾಟಕ್ಕಾಗಿನ ಮಾರುಕಟ್ಟೆ ಸ್ಥಳ. ಅದನ್ನು ಮೀನುಗಳನ್ನು ಹಿಡಿಯುವ ಮೀನುಗಾರರು ಹಾಗೂ ಮೀನುಗಳ ವರ್ತಕರುಗಳ ನಡುವಿನ ಸಗಟು ಮಾರಾಟಕ್ಕೆ ಅಥವಾ ಸಮುದ್ರದ ಆಹಾರಗಳನ್ನು ವೈಯಕ್ತಿಕ ಗ್ರಾಹಕರುಗಳಿಗೆ ಮಾಡುವ ಮಾರಾಟಕ್ಕೆ, ಅಥವಾ ಎರಡಕ್ಕೂ ಸಮರ್ಪಿಸಬಹುದು.



ಯೋಜನಾ ಭಾಗಗಳು: 20982 ಚದರ ಅಡಿಗಳಷ್ಟು ವಿಸ್ತೀರ್ಣದ ಒಟ್ಟಾರೆ ನಿರ್ಮಿತ ಪ್ರದೇಶ, ಅಂತಸ್ತುಗಳ ಸಂಖ್ಯೆ : ನೆಲ ಅಂತಸ್ತಿಗಿಂತ ಕೆಳಗಿರುವ ತಳ ಅಂತಸ್ತು + ನೆಲ ಅಂತಸ್ತು + ಮೊದಲ ಅಂತಸ್ತು ಹಾಗೂ 38 ಸ್ಟಾಲುಗಳಿಗೆ ಅವಕಾಶ ಮಾಡಿಕೊಟ್ಟಿರುತ್ತದೆ.

45. ಈಜುಕೊಳ ಅಭಿವೃದ್ಧಿ ಹಂತ-02:

ಅಭಿಯಾನದ ಅಡಿಯಲ್ಲಿ, ಮನೋರಂಜನೆ ಮತ್ತು ಕ್ರೀಡಾ ಚಟುವಟಿಕೆಗಳಿಗಾಗಿ, ಒಂದು ಉತ್ಕೃಷ್ಟ ಪ್ರಮಾಣಕಗಳವರೆಗೆ ಕ್ರೀಡೆಯನ್ನು ಅಭ್ಯಾಸ ಮಾಡುವ ಸಲುವಾಗಿ ಯುವಜನತೆಗೆ ಶಕ್ತಿಸಾಮರ್ಥ್ಯ ತುಂಬುವ ಸಲುವಾಗಿ ಪ್ರಸಕ್ತ ಇರುವಂತಹ ಈಜು ಕೊಳವನ್ನು ಭಾರತೀಯ ಕ್ರೀಡಾ ಪ್ರಾಧಿಕಾರದ ಪ್ರಮಾಣಕಗಳ ಮಟ್ಟಕ್ಕೆ ತರುವ ಸಲುವಾಗಿ ಪುನರ್-ಅಭಿವೃದ್ಧಿಗೊಳಿಸಲಾಗಿರುವುದು. ಈಜು ಕೊಳವು ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಯ ಸ್ವಾಮ್ಯದಲ್ಲಿರುವುದು.

ಯೋಜನೆಯ ಅಡಿಯಲ್ಲಿನ ಭಾಗಗಳು ಯುವಿ ಮೆಷ್‌ನೊಂದಿಗೆ ಪೆವಿಲಿಯನ್ ಬ್ಲಾಕಿನ ಅಭಿವೃದ್ಧಿ, ಆಸನ ವ್ಯವಸ್ಥೆ, ಶೌಚಾಲಯ ಬ್ಲಾಕು, ಆಡಳಿತಾತ್ಮಕ ಬ್ಲಾಕು, ಟಿಕೇಟು ಕೌಂಟರು, ಪ್ರವೇಶ ಗೇಟು, ಪ್ರಧಾನ ಹಾಗೂ ಮಕ್ಕಳ ಕೊಳದ ಸುತ್ತಲೂ ಸಿಮೆಂಟು ಬ್ಲಾಕುಗಳ ಹಾಸುಗಳು, ವಿದ್ಯುತ್ ಕಂಬಗಳು, ಭೂ ಇಳಿಜಾರು ಹಾಗೂ ಮಾನವ ನಿರ್ಮಿತ ಭೂ ಇಳಿಜಾರು/ವಾಸ್ತುಶಿಲ್ಪಗಳನ್ನು ಒಳಗೊಂಡಿರುತ್ತದೆ.

46. ಸ್ಮಾರ್ಟ್ ರಸ್ತೆ ಪ್ಯಾಕೇಜು -02:

ಒಂದು ಸಮರ್ಪಿತ ಮನೋಭಾವವನ್ನು ಹೊಂದಿರುವಂತಹ್ ಪಾದಚಾರಿ ಮಾರ್ಗವನ್ನು ಒದಗಿಸುವ ಮೂಲಕ ಸ್ಮಾರ್ಟ್ ರಸ್ತೆ ಪ್ಯಾಕೇಜುಗಳ ಅಡಿಯಲ್ಲಿ ಜನತೆಗೆ ಹೆಚ್ಚಳಗೊಳಿಸಲ್ಪಟ್ಟಂತಹ ಸುಲಭ ಗಮ್ಯತೆ. ಅಭಿಯಾನದ ಅಡಿಯಲ್ಲಿ ಸ್ಮಾರ್ಟ್ ರಸ್ತೆ ಪ್ಯಾಕೇಜು-02ರ ಅಡಿಯಲ್ಲಿ ಮಾರುಕಟ್ಟೆ ಪ್ರದೇಶದಲ್ಲಿ ರಸ್ತೆಗಳನ್ನು ಕಾರ್ಯಗತಗೊಳಿಸಲಾಗಿರುವುದು. ಯೋಜನಾ ಭಾಗಗಳು ಎಲ್‌ಟಿ ಯಿಂದ ಭೂಮಿಯೊಳಗಿನ ಕೇಬಲ್ಲು ವ್ಯವಸ್ಥೆಗೆ ಪರಿವರ್ತನೆ, ಬೀದಿ ದೀಪಗಳು, ಪಾದಚಾರಿ ಮಾರ್ಗಗಳು ಹಾಗೂ ಜಂಕ್ಷನ್ನುಗಳ ಅಭಿವೃದ್ಧಿಗಳು, ಮಳೆ ನೀರು ಚರಂಡಿ ಹಾಗೂ ರಸ್ತೆಗಳಿಗೆ ಪುನರ್-ಮೇಲ್ಪದರವನ್ನು ಹಾಕುವುದು, ಕಚೇರಿ ಹಾಗೂ ನಿರ್ವಹಣಾ ವೆಚ್ಚಗಳನ್ನು ಒಳಗೊಂಡಿರುತ್ತದೆ.

47. ಮೇದರ ಓಣಿ ಆರೋಗ್ಯ ಕೇಂದ್ರ/ಡಿಸ್ಪೆನ್ಸರಿ:

ಈ ಯೋಜನೆಯು ಹುಬ್ಬಳ್ಳಿ ನಗರದ ಕೇಂದ್ರ ಭಾಗದ ದಟ್ಟವಾಗಿ ನಿರ್ಮಿತ ಪ್ರದೇಶದಲ್ಲಿ ನಗರದ ಬಡವರಿಗೆ ಒಂದು ಸುರಕ್ಷಿತ ಮತ್ತು ನೈರ್ಮಲ್ಯಕರ ಆರೋಗ್ಯ ಅನುಕೂಲತೆಯನ್ನು ಒದಗಿಸುತ್ತದೆ. ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆಗೆ ಅತ್ಯುತ್ತಮವಾಗಿ ಯೋಜಿಸಲ್ಪಟ್ಟಿರುವಂತಹ ಮೂಲ ಆರೋಗ್ಯ ಅನುಕೂಲತೆಗಳೊಂದಿಗಿನ ಈ ಆಧುನಿಕ ಆರೋಗ್ಯ ಕೇಂದ್ರ/ಡಿಸ್ಪೆನ್ಸರಿಯು ನಗರದ ಬಡ ಜನತೆಗೆ ಹಾಗೂ ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆಯ ನೌಕರರುಗಳಿಗೆ ಪ್ರಯೋಜನಕಾರಿಯಾಗಿರುವುದು. ಅದನ್ನು ವಾಹನ ನಿಲುಗಡೆ ಸ್ಥಳಗಳು ಹಾಗೂ ಸಾರ್ವಜನಿಕರಿಗೆ ಅನುಕೂಲತೆಗಳ ಜೊತೆಯಲ್ಲಿ ಒಂದು, ಸಮಗ್ರತಾ ದೃಷ್ಟಿಯಿಂದ ಅಭಿವೃದ್ಧಿಪಡಿಸಲಾಗಿರುವುದು.

ಯೋಜನಾ ಭಾಗಗಳು: ನೆಲ ಮಹಡಿಯಲ್ಲಿ ಚುಚ್ಚುಮದ್ದು ಕೊಠಡಿ ವೈದ್ಯಕೀಯ ಅಧಿಕಾರಿಯವರ ಕೊಠಡಿ, ಸಲಹಾ / ತಪಾಸಣಾ ಕೊಠಡಿ, ತಾಯಂದಿರ ಕೊಠಡಿ, ಶುಶ್ರೂಷಾ ಕೊಠಡಿ, ಪ್ರಥಮ ಚಿಕಿತ್ಸಾ ಕೊಠಡಿ, ಔಷದಾಲಯ, ಸ್ವಾಗತಗಾರರ ಸ್ಥಳ, ನಿರೀಕ್ಷಣಾ ಕೊಠಡಿಯನ್ನು ಒಳಗೊಂಡಿರುತ್ತದೆ.

ಮೊದಲ ಹಾಗೂ ಎರಡನೆಯ ಮಹಡಿಯಲ್ಲಿ – ಗಣಕಯಂತ್ರ ಕೊಠಡಿ, ಆಶಾ ಕಾರ್ಯಕರ್ತೆಯರ ಕೊಠಡಿ, ಪ್ರಯೋಗಾಲಯ/ಲ್ಯಾಬೋರೇಟರಿ, ಉಗ್ರಾಣ, ಆಡಳಿತ ವಿಭಾಗದ ಕೊಠಡಿ, ವಿವಿದೋದ್ದೇಶ ಮುಖ್ಯ ಕೋಣೆ/ಹಾಲ್ ಇರುತ್ತವೆ.

48. ಸಾರ್ವಜನಿಕ ಬೈಸಿಕಲ್ಲು ಸೇವೆಗಳನ್ನು ಹಂಚಿಕೊಳ್ಳುವಿಕೆ ವ್ಯವಸ್ಥೆ:

ಅಭಿಯಾನದ ಅಡಿಯಲ್ಲಿ ಮೋಟಾರೇತರ ಸಾರಿಗೆ ವ್ಯವಸ್ಥೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಹಾಗೂ ನಗರದಲ್ಲಿನ ವಾತಾವರಣದಲ್ಲಿನ ಇಂಗಾಲದ ಪ್ರಮಾಣವನ್ನು ತಗ್ಗಿಸುವ ಸಲುವಾಗಿ, ಒಂದು ತಂತ್ರಜ್ಞಾನ ಅನುಕೂಲತೆಯನ್ನು ಹೊಂದಿರುವಂತಹ ವ್ಯವಸ್ಥೆಯ ಒಳಗೇ ಬೈಸಿಕಲ್ಲು ಯಾನ ಹಾಗೂ ಮತ್ತೊಂದು ಭಾಗದಲ್ಲಿ ಹಿಂತಿರುಗಿ ಬರುವ ಸಲುವಾಗಿ ಮತ್ತೊಂದು ಮಾರ್ಗ ಯೋಜನಾ ಭಾಗಗಳು 310 ಸಂಖ್ಯೆಗಳಷ್ಟು ಯಾಂತ್ರೀಕೃತ ಬೈಸಿಕಲ್ಲುಗಳು + 30 ವಿದ್ಯುತ್ ಬೈಸಿಕಲ್ಲುಗಳು (ಪೆಡಲ್ ಸಹಾಯದ) ಈ ರೀತಿಯಾಗಿ ಒಟ್ಟಾರೆ 340 ಬೈಸಿಕಲ್ಲುಗಳು, ಸಿಸಿಟಿವಿ ವಿಚಕ್ಷಣಾ ವ್ಯವಸ್ಥೆಯೊಂದಿಗೆ ಸೈಕಲ್ಲುಗಳನ್ನು ಜೋಡಿಸಿಡುವ ಸ್ಟೇಷನ್ನುಗಳು, ಸಂಚಾರಿ ತಂತ್ರಾಂಶ ಅನ್ವಯ, ಬೈಸಿಕಲ್ಲು ಪುನರ್-ವಿತರಣಾ ವಾಹನ, 5 ವರ್ಷಗಳ ಕಚೇರಿ ಹಾಗೂ ನಿರ್ವಹಣಾ ವೆಚ್ಚಗಳನ್ನು ಒಳಗೊಂಡಿರುತ್ತದೆ.

49. ವಾಣಿ ವಿಲಾಸ ಅಭಿವೃದ್ಧಿ (ಬಿಎಸ್‌ಯುಪಿ):

ನಗರದ ಬಡ ಜನತೆಗೆ ಮೂಲ ಸೇವೆಗಳ ಅಡಿಯಲ್ಲಿ, ವಸತಿ ಮೂಲಸೌಕರ್ಯವನ್ನು ಒದಗಿಸುವ ಸಲುವಾಗಿ ಹಾಗೂ ನಗರದ ಬಡ ಜನತೆಯ ಜೀವನದ ಗುಣಮಟ್ಟವನ್ನು ಊರ್ಜಿತಗೊಳ್ಳಬಲ್ಲಂತಹ ರೀತಿಯಲ್ಲಿ ಉತ್ತಮಗೊಳಿಸುವ ಸಲುವಾಗಿ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗಿರುವುದು. ಯೋಜನೆಯ ಭಾಗಗಳು : ಒಟ್ಟಾರೆ ನಿವೇಶನ ಪ್ರದೇಶ – 8460 ಚದರ ಮೀಟರುಗಳು, ಅಂತಸ್ತುಗಳ ಸಂಖ್ಯೆ - ಭೂತಳ (ನೆಲಮಹಡಿಗಿಂತ ಕೆಳಗಿನ) ಅಂತಸ್ತು, ನೆಲ ಮಹಡಿ + 4 ಅಂತಸ್ತುಗಳು, ಇವು 4 ಬ್ಲಾಕುಗಳನ್ನು ಹೊಂದಿರುತ್ತವೆ ಹಾಗೂ 80 ವಾಸದ ಘಟಕಗಳು/ಮನೆಗಳನ್ನು ಹೊಂದಿರುತ್ತವೆ, ಪ್ರತಿಯೊಂದು ವಾಸದ ಘಟಕ/ಮನೆಯಲ್ಲಿನ ಒಟ್ಟಾರೆ ಜಮಖಾನ ಪ್ರದೇಶ (1 ಮಲಗುವ ಕೊಠಡಿ ಮನೆ) – 29.83 ಚದರ ಮೀಟರು.

ಸಿಎ ಹೊನ್ನಬಿಂಡಗಿ ಎಫ್.ಎನ್.
ಬಿ.ಕಾಂ, ಎಫ್.ಸಿ. ಎ,ಡಿ.ಐಎಸ್.ಎ (ಐಸಿಎ)

ಕಚೇರಿ 0836 2957540
ಗೃಹ : 0836 2356113

ಮೊಬೈಲ್ : 9448326540
ಇಮೈಲ್ : prakashnh2004@yahoo.com
ಇಮೈಲ್ : fnhonnabindagi@gmail.com

ಮೆ. ಎಫ್.ಎನ್. ಹೊನ್ನಬಿಂಡಗಿ ಅಂಡ್ ಕಂಪನಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ನಂ.4, ಮೂರನೇ ಮಹಡಿ, ಲಕ್ಷ್ಮೀ ಕಾಂಪ್ಲೆಕ್ಸ್, ನೀಲಿಗಿನ್ ರಸ್ತೆ, ಹುಬ್ಬಳ್ಳಿ-580029

ಸ್ವತಂತ್ರ ಲೆಕ್ಕಪರಿಶೋಧಕರುಗಳ ಪರಿಷ್ಕೃತ ವರದಿ

ಹುಬ್ಬಳ್ಳಿ-ಧಾರವಾಡ ಸ್ಮಾರ್ಟ್ ಸಿಟಿ ನಿಯಮಿತದ ಸದಸ್ಯರುಗಳಿಗೆ

ಹಣಕಾಸು ತ:ಖ್ತೆಗಳ ಲೆಕ್ಕಪರಿಶೋಧನೆಯ ಮೇಲಿನ ವರದಿ

ನಮ್ಮ ಅಭಿಪ್ರಾಯ

ಈ ವರದಿಯ ಜೊತೆಯಲ್ಲಿರುವ ಹುಬ್ಬಳ್ಳಿ-ಧಾರವಾಡ ಸ್ಮಾರ್ಟ್ ಸಿಟಿ ನಿಯಮಿತ, ಇದರ 31 ಮಾರ್ಚ್ 2022ರಲ್ಲಿದ್ದಂತೆ ಆಸ್ತಿ-ಜವಾಬ್ದಾರಿ ತ:ಖ್ತೆ, ಅದೇ ದಿನಾಂಕಕ್ಕೆ ಅಂತ್ಯಗೊಂಡಂತಹ ಸಾಲಿಗೆ ಲಾಭ ಮತ್ತು ನಷ್ಟ ತ:ಖ್ತೆ (ಇತರೆ ಸಮಗ್ರ ವರಮಾನವೂ ಸೇರಿದಂತೆ) ನಗದು/ಹಣಕಾಸು ಹರಿವಿನ ತ:ಖ್ತೆ ಹಾಗೂ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಕಾರ್ಯನೀತಿಗಳ ಒಂದು ಸಂಕ್ಷಿಪ್ತ ವರದಿ ಹಾಗೂ ಇತರೆ ವಿವರಣಾತ್ಮಕ ಮಾಹಿತಿಗಳನ್ನು ಒಳಗೊಂಡಂತೆ ಭಾರತೀಯ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ತಯಾರಿಸಲಾಗಿರುವಂತಹ ಹಣಕಾಸು ತ:ಖ್ತೆಗಳನ್ನು ನಾವು ಲೆಕ್ಕಪರಿಶೋಧನೆ ಮಾಡಿರುವೆವು. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ತಮ್ಮ ಲೆಕ್ಕಪರಿಶೋಧನಾ ವರದಿಯಲ್ಲಿ ಗಮನಿಸಿರುವಂತಹ ಅಂಶಗಳ ತತ್ಪರಿಣಾಮವಾಗಿ ನಮ್ಮ ಲೆಕ್ಕಪರಿಶೋಧನಾ ವರದಿಯನ್ನು ಪರಿಷ್ಕರಿಸಲಾಗಿರುವುದು. ಈ ವರದಿಯು ನಮ್ಮ ಈ ಮುಂಚಿನ ದಿನಾಂಕ 01.08.2022ರ ವರದಿಯನ್ನು ರದ್ದುಗೊಳಿಸುವುದು.

ಷರತ್ತುಬದ್ಧ ಅಭಿಪ್ರಾಯ

ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ಒದಗಿಸಲಾದಂತಹ ಮಾಹಿತಿಯಂತೆ ಮತ್ತು ನೀಡಲಾದಂತಹ ವಿವರಣೆಗಳಂತೆ, ನಮ್ಮ ವರದಿಯ ಷರತ್ತುಬದ್ಧ ಅಭಿಪ್ರಾಯಗಳಿಗೆ ಆಧಾರದಲ್ಲಿ ವಿವರಿಸಿರುವಂತಹ ವಿಷಯಗಳ ಸಂಭಾವ್ಯ

ಪರಿಣಾಮಗಳನ್ನು ಹೊರತುಪಡಿಸಿದಂತೆ, ಮೇಲೆ ತಿಳಿಸಲಾದಂತಹ ಹಣಕಾಸು ತ:ಖ್ತೆಗಳು ಕಂಪನಿಗಳ ಅಧಿನಿಯಮ, 2013ರ (ಅಧಿನಿಯಮ) ಅಗತ್ಯತೆಯಂತೆ ಆ ರೀತಿ ಅಗತ್ಯತೆಯಿರುವ ರೀತಿಯಲ್ಲಿ ಮಾಹಿತಿಯನ್ನು ಒದಗಿಸುತ್ತವೆ.

- ಆಸ್ತಿ-ಜವಾಬ್ದಾರಿ ತ:ಖ್ತೆಗೆ ಸಂಬಂಧಿಸಿದಂತೆ 31 ಮಾರ್ಚ್ 2022ರಲ್ಲಿದ್ದಂತೆ ಕಂಪನಿಯ ವ್ಯವಹಾರಗಳ ಸ್ಥಿತಿಗತಿಗಳು; ಹಾಗೂ
- ಲಾಭ ಮತ್ತು ನಷ್ಟ ತ:ಖ್ತೆಗೆ ಸಂಬಂಧಿಸಿದಂತೆ, ಆ ದಿನಾಂಕಕ್ಕೆ ಅಂತ್ಯಗೊಂಡ ಸಾಲಿಗೆ ಭರಿಸಲಾಗಿರುವಂತಹ ನಷ್ಟ.
- ಹಾಗೂ ಆ ದಿನಾಂಕಕ್ಕೆ ಅಂತ್ಯಗೊಂಡ ಸಾಲಿಗೆ ನಗದು

ನಮ್ಮ ಷರತ್ತುಬದ್ಧ ಅಭಿಪ್ರಾಯಕ್ಕೆ ಆಧಾರ

1. 2017-18ರಿಂದ 2021-22ರ ಅವಧಿಗೆ ಗಳಿಸಲಾಗಿರುವ ಬಡ್ಡಿಗೆ ಸಂಬಂಧಿತ ರೂ.25,92,00,000/-ರಷ್ಟು ಮೊತ್ತವನ್ನು ಭಾರತ ಸರ್ಕಾರದ ವಿತ್ತ ಮಂತ್ರಾಲಯದ ಅಧಿಕೃತ ಜ್ಞಾಪನಾಪತ್ರದ ಅನುಸಾರ ಹಾಗೂ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯದ ದಿನಾಂಕ 02.02.2022ರ ಪತ್ರದ ಅನುಸಾರ ಭಾರತ ಸರ್ಕಾರದ ಸಂಚಿತ ನಿಧಿಗೆ (ಕನ್ಸಾಲಿಡೇಟೆಡ್ ಫಂಡ್ ಆಫ್ ಇಂಡಿಯಾ) ಜಮೆ ಮಾಡಿರುವುದಿಲ್ಲ ಹಾಗೂ ಅಲ್ಲದೆಯೇ ಈ ನಿಟ್ಟಿನಲ್ಲಿ ಯಾವುದೇ ಅನುವನ್ನೂ ಮಾಡಿರುವುದಿಲ್ಲ. ಇದಕ್ಕಾಗಿ ಅನುವು ಮಾಡದಿರುವುದು ಸ್ಮಾರ್ಟ್ ಸಿಟಿ ಅಭಿಯಾನ ಹಣಕಾಸನ್ನು ಅಧಿಕ ಪ್ರಮಾಣದಲ್ಲಿ ತಿಳಿಸುವಲ್ಲಿ ಹಾಗೂ ಚಾಲ್ತಿ ಜವಾಬ್ದಾರಿಗಳನ್ನು ರೂ.25,92,00,000/-ರಷ್ಟು ಮೊತ್ತದಿಂದ ಕಡಿಮೆ ಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿರುವುದು.

2. ಹಣಕಾಸು ತ:ಖ್ತೆಗಳ ಅನುಸಾರ ಗುತ್ತಿಗೆದಾರರುಗಳಿಗೆ ಕಾಮಗಾರಿಗಳ ಸಿದ್ಧತೆಗಾಗಿ ನೀಡಲಾಗಿರುವ ಮುಂಗಡ ಹಣವು, ಗುತ್ತಿಗೆದಾರರುಗಳಿಗೆ ಕಾಮಗಾರಿಗಳ ಸಿದ್ಧತೆಗಾಗಿ ನೀಡಲಾಗಿರುವ ಮುಂಗಡ ಹಣದ ರಿಜಿಸ್ಟರಿನೊಂದಿಗೆ ರೂ.11,24,616/-ರಷ್ಟು ಮೊತ್ತದ ವ್ಯತ್ಯಯದಿಂದ ಕೂಡಿರುವುದು. ಇದು ಗುತ್ತಿಗೆದಾರರುಗಳಿಗೆ ಕಾಮಗಾರಿಗಳ ಸಿದ್ಧತೆಗಾಗಿ ನೀಡಲಾಗಿರುವ ಮುಂಗಡ ಹಣವನ್ನು ರೂ.11,24,616/-ರಷ್ಟು ಮೊತ್ತದಿಂದ ಅಧಿಕ ಪ್ರಮಾಣದಲ್ಲಿ ತಿಳಿಸುವಲ್ಲಿ ಹಾಗೂ ಉಣಕಲ್ ಯೋಜನೆಯ ಯೋಜನಾ ವೆಚ್ಚಗಳನ್ನು ಕಡಿಮೆ ಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿರುವುದು.

3. ಸಂಬಳ, ತುಟ್ಟಿಭತ್ಯೆ ಬಾಕಿಗಳು, ಮೊಬೈಲು ಬಿಲ್ಲುಗಳು, ಪ್ರವಾಸ ವೆಚ್ಚಗಳು, ಉಪಹಾರಗಳ ಖರೀದಿ, ಕಾಟ್ರಿಡ್ಜುಗಳ ಖರೀದಿ, ಮುಂತಾದ ಕೆಲವು ವೆಚ್ಚಗಳಿಗಾಗಿ ಅನುವನ್ನು ಮಾಡಿರುವುದಿಲ್ಲ. ತತ್ಪರಿಣಾಮವಾಗಿ, ಸ್ಮಾರ್ಟ್ ಸಿಟಿ ಅಭಿಯಾನ ಯೋಜನೆ, ಆಡಳಿತಾತ್ಮಕ ಮತ್ತು ಕಚೇರಿ ವೆಚ್ಚಗಳ ಅನುದಾನಗಳು ಹಾಗೂ ಚಾಲ್ತಿ ಜವಾಬ್ದಾರಿಗಳನ್ನು ರೂ.6,62,117/-ರಷ್ಟು ಕಡಿಮೆ ಪ್ರಮಾಣದಲ್ಲಿ ತಿಳಿಸಲಾಗಿರುವುದು.

4. ಕರ್ನಾಟಕ ಸರ್ಕಾರದ 30.03.2022 ದಿನಾಂಕದ ಆದೇಶದ ಅನುಸಾರ ಬಡ್ಡಿ ಗಳಿಕೆಯನ್ನು ಭಾರತ ಸರ್ಕಾರದ ಸಂಚಿತ ನಿಧಿಗೆ ಜಮೆ ಮಾಡಬೇಕಿದ್ದಿತಾದರೂ, ರೂ.1,61,52,179/-ರಷ್ಟು ಮೊತ್ತದ ಬಡ್ಡಿ ಗಳಿಕೆಯನ್ನು ಭಾರತ ಸರ್ಕಾರದ ಸಂಚಿತ ನಿಧಿಗೆ ಜಮೆ ಮಾಡಿರುವುದಿಲ್ಲ, ಇದು ಸ್ಮಾರ್ಟ್ ಸಿಟಿ ಅಭಿಯಾನ ಹಣಕಾಸನ್ನು ಅಧಿಕ ಪ್ರಮಾಣದಲ್ಲಿ ತಿಳಿಸುವಲ್ಲಿ ಹಾಗೂ ಚಾಲ್ತಿ ಜವಾಬ್ದಾರಿಗಳನ್ನು ರೂ.1,61,52,179/-ರಷ್ಟು ಕಡಿಮೆ ಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿದ್ದಿತು.

5. ಕಟ್ಟಡ ಪ್ರಂಗಣ ಸಿವಿಲ್ ಕಾಮಗಾರಿಯನ್ನು ಒಡೆದು ತೆಗೆದುಹಾಕಲಾಯಿತು ಹಾಗೂ ಅದನ್ನು ಹಣಕಾಸು ತ:ಖ್ತೆಗಳಲ್ಲಿ ರೂ.62,044/-ರಷ್ಟು ತಗ್ಗಿಸಲ್ಪಟ್ಟಿರುವ ಮೌಲ್ಯ ಎಂಬುದಾಗಿ ತೋರಿಸಲಾಗಿರುವುದು, ಇದರಿಂದಾಗಿ ಭೂಮಿ, ಕಟ್ಟಡ

ಮುಂತಾದ ಆಸ್ತಿಗಳು, ಸ್ಥಾವರ, ಯಂತ್ರಗಳು ಮತ್ತು ಉಪಕರಣಗಳನ್ನು ರೂ.62,044/-ರಷ್ಟು ಅಧಿಕ ಪ್ರಮಾಣದಲ್ಲಿ ತಿಳಿಸುವಲ್ಲಿ ಹಾಗೂ ವೆಚ್ಚಗಳನ್ನು ಅಷ್ಟರಮಟ್ಟಿಗೆ ಕಡಿಮೆಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿರುವುದು.

6. 5 ವರ್ಷಗಳ ಉಪಯೋಗಿಸಬಹುದಾದ ಅವಧಿಯೊಂದಿಗಿನ 45.07 ದರದಲ್ಲಿ ಸವಕಳಿಯನ್ನು ಅನುವು ಮಾಡಬೇಕಾದಂತಹ ಕೆಲವು ಕಚೇರಿ ಉಪಕರಣಗಳನ್ನು 15 ವರ್ಷಗಳ ಉಪಯೋಗಿಸಬಹುದಾದ ಅವಧಿಯೊಂದಿಗಿನ ಭೂಮಿ, ಕಟ್ಟಡ ಮುಂತಾದ ಆಸ್ತಿಗಳು, ಸ್ಥಾವರ,ಯಂತ್ರ ಮತ್ತು ಉಪಕರಣಗಳು ಎಂಬುದಾಗಿ ತಪ್ಪಾಗಿ ಪರಿಗಣಿಸಲಾಗಿರುವುದು ಹಾಗೂ ಶೇಕಡಾ 18.10ರ ದರದಲ್ಲಿ ಸವಕಳಿಯನ್ನು ಅನುವು ಮಾಡಲಾಗಿರುವುದು, ಇದು ಪರಿಗಣನೆಯಲ್ಲಿರುವ ಸಾಲಿಗೆ ಸವಕಳಿಯನ್ನು ರೂ.33,385/-ರಷ್ಟು ಕಡಿಮೆ ಪ್ರಮಾಣದಲ್ಲಿ ತಿಳಿಸುವಲ್ಲಿ ಹಾಗೂ ಭೂಮಿ, ಕಟ್ಟಡ ಮುಂತಾದ ಆಸ್ತಿಗಳು, ಸ್ಥಾವರ,ಯಂತ್ರ ಮತ್ತು ಉಪಕರಣಗಳನ್ನು ಅಷ್ಟರಮಟ್ಟಿಗೆ ಅಧಿಕ ಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿತು.

7. ಕಂಪನಿಯು ಕಾರ್ಯಗತಗೊಳಿಸಲಾದಂತಹ ಕಾಮಗಾರಿಗಳಿಗೆ ಸಂಬಂಧಿಸಿದಂತೆ, 31 ಮಾರ್ಚ್ 2022ಕ್ಕೆ ಮುಂಚಿತವಾಗಿ ಸ್ವೀಕರಿಸಲಾದಂತಹ ಬಿಲ್ಲುಗಳಿಗೆ ಸಂಬಂಧಿಸಿದಂತೆ ರೂ.2,10,95,368/-ರಷ್ಟು ಬಾಕಿ ಮೊತ್ತದ ಜವಾಬ್ದಾರಿಗಳಿಗೆ ಅನುವನ್ನು ಮಾಡಿರುವುದಿಲ್ಲ, ಇದನ್ನು ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ 29ರ ಅನುಸಾರ ಚಾಲ್ತಿ ಜವಾಬ್ದಾರಿ ಎಂಬುದಾಗಿ ಲೆಕ್ಕವನ್ನಿಡಬೇಕಿದ್ದಿತು. ಇದು ಚಾಲ್ತಿ ಜವಾಬ್ದಾರಿಯನ್ನು ಕಡಿಮೆ ಪ್ರಮಾಣದಲ್ಲಿ ತಿಳಿಸುವಲ್ಲಿ ಹಾಗೂ ಸ್ಮಾರ್ಟ್ ಸಿಟಿ ಅಭಿಯಾನದ ಅನುದಾನವನ್ನು ಅಷ್ಟರಮಟ್ಟಿಗೆ ಅಧಿಕಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿರುವುದು.

8. 2021-22 ಹಣಕಾಸು ಸಾಲಿಗೆ ಯೋಜನೆಗಳ ನಿರ್ವಹಣಾ ಸಲಹೆಗಾರರಿಗೆ ಪಾವತಿಸಲಾದಂತಹ ಒಟ್ಟಾರೆ ಮೊತ್ತವು ರೂ.3,00,17,671/-, ಯೋಜನೆಗಳ ನಿರ್ವಹಣಾ ಸಲಹೆಗಾರರಿಗೆ ಮಾಡಲಾದಂತಹ ಪಾವತಿಗಳನ್ನು ಸ್ಮಾರ್ಟ್ ಸಿಟಿ ಅಭಿಯಾನಕ್ಕೆ (ಆಡಳಿತಾತ್ಮಕ ಮತ್ತು ಕಚೇರಿ ವೆಚ್ಚಗಳ ಅನುದಾನ) ಹೊಂದಾಣಿಕೆ ಮಾಡಿರುವುದಿಲ್ಲ, ಇದರ ಬದಲಾಗಿ ಸ್ಮಾರ್ಟ್ ಸಿಟಿ ಅಭಿಯಾನಕ್ಕೆ (ಯೋಜನಾ ಅನುದಾನಗಳು) ಹೊಂದಾಣಿಕೆ ಮಾಡಲಾಗಿರುವುದು. ಈ ಕಾರಣದಿಂದಾಗಿ ಯೋಜನಾ ಅನುದಾನಗಳನ್ನು ಕಡಿಮೆ ಪ್ರಮಾಣದಲ್ಲಿ ತಿಳಿಸಲಾಗಿರುವುದು ಹಾಗೂ ಸ್ಮಾರ್ಟ್ ಸಿಟಿ ಅಭಿಯಾನ (ಆಡಳಿತಾತ್ಮಕ ಮತ್ತು ಕಚೇರಿ ವೆಚ್ಚಗಳ ಅನುದಾನ)ವನ್ನು ರೂ.3,00,17,671/-ರಷ್ಟು ಮಟ್ಟಿಗೆ ಅಧಿಕ ಪ್ರಮಾಣದಲ್ಲಿ ತಿಳಿಸಲಾಗಿರುವುದು.

9. ಕಂಪನಿಯು ಹಣಕಾಸು ತ:ಖ್ತೆಗಳನ್ನು ಕಂಪನಿಗಳ ಅಧಿನಿಯಮ 2013ರ ತಿದ್ದುಪಡಿಯಾಗಿರುವಂತಹ ಷೆಡ್ಯೂಲು IIIರ ಅನುಸಾರ ತಯಾರಿಸಿರುವುದಿಲ್ಲ

10. ಆದಾಯ ತೆರಿಗೆ ಪಾವತಿ ವೆಚ್ಚಗಳನ್ನು ಪರಿಗಣಿಸುವುದಕ ಸಂಬಂಧಿಸಿದಂತೆ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಕಾರ್ಯನೀತಿ (2.8) ಕಂಪನಿಯು ಅನುಸರಿಸುತ್ತಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ಆಗಿರುವುದಿಲ್ಲ.

ಅಧಿನಿಯಮದ ಪರಿಚ್ಛೇದ 143(10)ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಲೆಕ್ಕಪರಿಶೋಧನೆಯ ಮಾನದಂಡಗಳ ಅನುಸಾರ ನಾವು ನಮ್ಮ ಲೆಕ್ಕಪರಿಶೋಧನೆಯನ್ನು ನಡೆಸಿರುವೆವು. ಅಂತಹ ಪ್ರಮಾಣಕಗಳ ಅಡಿಯಲ್ಲಿ ನಮ್ಮ ಜವಾಬ್ದಾರಿಗಳನ್ನು

ನಮ್ಮ ವರದಿಯ ಹಣಕಾಸು ತ:ಖ್ತೆಗಳ ಲೆಕ್ಕಪರಿಶೋಧನೆಗಾಗಿ ಲೆಕ್ಕಪರಿಶೋಧಕರ ಜವಾಬ್ದಾರಿಗಳು' ವಿಭಾಗದಲ್ಲಿ ವಿಸ್ತೃತವಾಗಿ ವಿವರಿಸಿರುವೆವು. ಭಾರತದ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ನೀಡಿರುವಂತಹ ನೈತಿಕತೆ/ಔಚಿತ್ಯತೆಗಳ ಸಂಹಿತೆಯ ಅನುಸಾರ ಹಾಗೂ ಅಲ್ಲದೆಯೇ ಅಧಿನಿಯಮ ಮತ್ತು ಅವುಗಳ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳ ಅನುವುಗಳ ಅಡಿಯಲ್ಲಿ ಪ್ರತ್ಯೇಕ ಹಣಕಾಸು ತ:ಖ್ತೆಗಳ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿರುವಂತಹ ಸ್ವತಂತ್ರ ಅಗತ್ಯತೆಗಳಂತೆ ನಾವು ಕಂಪನಿಯಿಂದ ಸ್ವತಂತ್ರರಾಗಿರುವೆವು ಹಾಗೂ ಈ ಅಗತ್ಯತೆಗಳ ಅನುಸಾರ ಹಾಗೂ ಭಾರತದ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯ ನೈತಿಕತೆ/ಔಚಿತ್ಯತೆಗಳ ಸಂಹಿತೆಗಳ ಅಗತ್ಯತೆಯ ಅನುಸಾರ ನಮ್ಮ ಇತರೆ ನೈತಿಕತೆ/ಔಚಿತ್ಯತೆಗಳ ಜವಾಬ್ದಾರಿಗಳನ್ನು ನಾವು ಪೂರ್ಣಗೊಳಿಸಿರುವೆವು. ಕಂಪನಿಯ ವ್ಯವಹಾರಗಳ ಗಾತ್ರವು ಅಧಿಕ ಪ್ರಮಾಣದಲ್ಲಿ ಇದ್ದಿತಾದ್ದರಿಂದ, ಓಚರುಗಳು/ದಾಖಲೆಗಳನ್ನು ನಾವು ಪರೀಕ್ಷಾ-ಪರಿಶೀಲನೆಯ ಆಧಾರದ ಮೇರೆಗೆ ಪರಿಶೀಲಿಸಿರುವೆವು.

ನಾವು ಪಡೆದುಕೊಂಡಿರುವಂತಹ ಲೆಕ್ಕಪರಿಶೋಧನೆಯ ಸಾಕ್ಷ್ಯಾಧಾರಗಳು ನಮ್ಮ ಲೆಕ್ಕಪರಿಶೋಧನೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಲುವಾಗಿ ಒಂದು ಆಧಾರವನ್ನು ಒದಗಿಸಲು ಸೂಕ್ತ ಹಾಗೂ ಸಮರ್ಪಕವಾಗಿರುತ್ತವೆ ಎಂಬ ವಿಶ್ವಾಸವು ನಮಗಿರುವುದು.

ಪ್ರಮುಖ ಲೆಕ್ಕಪರಿಶೋಧನಾ ವಿಷಯಗಳು

ಪ್ರಮುಖ ಲೆಕ್ಕಪರಿಶೋಧನಾ ವಿಷಯಗಳೆಂದರೆ, ನಮ್ಮ ವೃತ್ತೀಯ ತೀರ್ಮಾನದಲ್ಲಿ, ಚಾಲ್ತಿ ಅವಧಿಯ ಹಣಕಾಸು ತ:ಖ್ತೆಗಳ ನಮ್ಮ ಲೆಕ್ಕಪರಿಶೋಧನೆಯಲ್ಲಿ ಗಮನಾರ್ಹ ಅಂಶಗಳಾಗಿದ್ದವುಗಳು. ಈ ವಿಷಯಗಳನ್ನು ಹಣಕಾಸು ತ:ಖ್ತೆಗಳ ನಮ್ಮ ಲೆಕ್ಕಪರಿಶೋಧನೆಯಲ್ಲಿ ಒಟ್ಟಾರೆಯಾಗಿ ಪರಿಗಣನೆಗೆ ತೆಗೆದುಕೊಂಡಿರುವೆವು ಹಾಗೂ ಅವುಗಳ ಮೇಲೆ ನಮ್ಮ ಅಭಿಪ್ರಾಯವನ್ನು ತಳೆಯುವಲ್ಲಿ ನಾವು ಈ ವಿಷಯಗಳ ಬಗ್ಗೆ ಒಂದು ಪ್ರತ್ಯೇಕ ಅಭಿಪ್ರಾಯವನ್ನು ವ್ಯಕ್ತಪಡಿಸುವುದಿಲ್ಲ.

ಲೆಕ್ಕಪರಿಶೋಧನೆಯ ಮಾನದಂಡ 701ರ ಅನುಸಾರ ಪ್ರಮುಖ ಲೆಕ್ಕಪರಿಶೋಧನಾ ವಿಷಯಗಳನ್ನು ವರದಿ ಮಾಡುವುದು ಕಂಪನಿಯು ತನ್ನ ಷೇರುಬಂಡವಾಳವನ್ನು ಹಿಂತೆಗೆದುಕೊಳ್ಳುವ ಕಂಪನಿಗಳ ಪಟ್ಟಿಯಲ್ಲಿ/ತನ್ನ ಕಾರ್ಯಚಟುವಟಿಕೆಗಳನ್ನು ಸಮಾಪನಗೊಳಿಸುವ ಕಂಪನಿಗಳ ಪಟ್ಟಿಯಲ್ಲಿ ಇರುವುದಿಲ್ಲವಾದ್ದರಿಂದ, ಅನ್ವಯಗೊಳ್ಳುವುದಿಲ್ಲ.

ಇತರೆ ವಿಷಯಗಳು

1. ಕಂಪನಿಯು ಯಾವುದೇ ಉದ್ಯೋಗಾನಂತರದ ಪ್ರಯೋಜನಗಳು/ಅಲ್ಪಾವಧಿ ಉದ್ಯೋಗಿಗಳಿಗೆ ಸಂಬಂಧಿತ ಪ್ರಯೋಜನಗಳ ಕಾರ್ಯನೀತಿಯನ್ನು ರೂಪಿಸಿರುವುದಿಲ್ಲ.

2. ಸುಲೈಮನ್ ಆಸಿಫ್, ಇವರಿಗೆ ಸಂಬಂಧಿಸಿದಂತೆ ಟಿಪ್ಪಣಿ ಸಂಖ್ಯೆ 18ರಲ್ಲಿ ತೋರಿಸಿರುವ ಆಕಸ್ಮಿಕ ಜವಾಬ್ದಾರಿಯ ಮೊತ್ತಕ್ಕೆ ಸಂಬಂಧಿಸಿದಂತೆ ಗೌರವಾನ್ವಿತ ಉಚ್ಚ ನ್ಯಾಯಾಲಯವು ಗುತ್ತಿಗೆದಾರರ ಪರವಾಗಿ ಆದೇಶವನ್ನು 22.09.2021ರಂದು ಜಾರಿಗೊಳಿಸಿರುವುದು, ಆದ್ದರಿಂದ ಈ ನಿಟ್ಟಿನಲ್ಲಿ ವಾಸ್ತವಿಕ ಜವಾಬ್ದಾರಿಯು ಉದ್ಭವಿಸುವ ಸಾಧ್ಯತೆಯು ಇರುತ್ತದೆ.

3. ಪೂರ್ಣಗೊಳಿಸಲಾಗಿರುವಂತಹ ಹಾಗೂ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಗೆ ವಹಿಸಿಕೊಡಲಾಗಿರುವಂತಹ ಸ್ಥಿರಾಸ್ತಿಗಳು/ಯೋಜನೆಗಳ ವಿವರಗಳು ದಾಖಲೆಗಳಲ್ಲಿರುವುದಿಲ್ಲ/ರಿಜಿಸ್ಟರು ಲಭ್ಯವಿರುವುದಿಲ್ಲ

4. ಹೊಸ ಪಿಂಚಣಿ ಯೋಜನೆ ಅಡಿಯಲ್ಲಿ ನಿಯೋಜನೆಯ ಮೇಲೆ ನೇಮಕ ಮಾಡಲಾಗಿರುವಂತಹ ಸರ್ಕಾರಿ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಅವರುಗಳಿಂದ ಹೊಸ ಪಿಂಚಣಿ ಯೋಜನೆ ಕಾಣಿಕೆಗಳನ್ನು ವೇತನದಿಂದ ಕಡಿದುಕೊಳ್ಳತಕ್ಕದ್ದು, ಹಾಗೆಯೇ ಉದ್ಯೋಗದಾತರ ಕಾಣಿಕೆಯನ್ನೂ ನೀಡಿ ಹೊಸ ಪಿಂಚಣಿ ಯೋಜನೆ ಖಾತೆಗೆ ಪಾವತಿಸುವುದು ಎಂಬುದಾಗಿ ನಿರ್ದೇಶಕರುಗಳ ಮಂಡಳಿಯು ಒಂದು ನಿರ್ಣಯವನ್ನು ಅನುಮೋದಿಸಿರುವುದು. ಉದ್ಯೋಗದಾತರ ಭಾಗದ ಮೊತ್ತವನ್ನು ಎಅಂಡ್ಒಇ ಲೆಕ್ಕದಿಂದ ಕಡಿದುಕೊಳ್ಳುವಂತೆ ಹಾಗೂ ಉದ್ಯೋಗಿಯ ಸಂಬಂಧಿತ ಹೊಸ ಪಿಂಚಣಿ ಯೋಜನೆ ಖಾತೆಗೆ ಪಾವತಿಸುವಂತೆಯೂ ನಿರ್ದೇಶಕರುಗಳ ಮಂಡಳಿಯು ಅನುಮೋದಿಸಿರುವುದು.

5. 31.03.2022ರಲ್ಲಿದ್ದಂತೆ, ಕಂಪನಿಯು 55 ಯೋಜನೆಗಳನ್ನು ಪೂರ್ಣಗೊಳಿಸಿರುವುದು ಹಾಗೂ ಒಟ್ಟಾರೆ ರೂ.823.52 ಕೋಟಿ ಮೊತ್ತದಷ್ಟು ಯೋಜನಾ ವೆಚ್ಚಗಳನ್ನು ಭರಿಸಿರುವುದು, ಆದರೆ ಹುಬ್ಬಳ್ಳಿ ಧಾರವಾಡ ಸ್ಮಾರ್ಟ್ ಸಿಟಿ ನಿಯಮಿತಕ್ಕಾಗಿ ಒಂದು ಸಮರ್ಪಿತ ಭಾವದ ವರಮಾನ ಮಾಡ್ಯೂಲು/ಮಾದರಿಯನ್ನು ಖಚಿತಪಡಿಸಿಕೊಂಡಿರುವುದಿಲ್ಲ. ಮುಂದುವರೆದು, ಬೆಂಗೇರಿ ಮಾರುಕಟ್ಟೆ, ಗಾಜಿನ ಮನೆ ಪ್ರಧಾನ ಅರಮನೆ, ಮಹಾತ್ಮಾ ಗಾಂಧಿ ಉದ್ಯೋನವನ, ಕ್ಯಾಂಟೀನು, ಗಾಜಿನ ಮನೆಗೆ ಹೊಂದಿಕೊಂಡಂತಿರುವ ಸ್ಥಳ ಮುಂತಾದ ಸಾರ್ವಜನಿಕರ ಪ್ರಯೋಜನಗಳಿಗಾಗಿ ನಿರ್ಮಿಸಲಾದ ಮೂಲಸೌಕರ್ಯಗಳಿಂದ ಉತ್ಪಾದಿಸಲಾದ ವರಮಾನವನ್ನು ಹುಬ್ಬಳ್ಳಿ-ಧಾರವಾಡ ಸ್ಮಾರ್ಟ್ ನಗರ ಕಂಪನಿ ನಿಯಮಿತದ ಲೆಕ್ಕದಲ್ಲಿ ಇಡುವುದರ ಬದಲಾಗಿ ಹುಬ್ಬಳ್ಳಿ-ಧಾರವಾಡ ಸ್ಮಾರ್ಟ್ ನಗರ ಅಭಿವೃದ್ಧಿ ಸಂಘದ (ಸಂಘ) ಲೆಕ್ಕದಲ್ಲಿ ಇಡಲಾಗಿರುವುದು. ವರಮಾನ ಮಾಡ್ಯೂಲು/ಮಾದರಿಯನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿನ ವಿಫಲತೆಯು ಸ್ಮಾರ್ಟ್ ಸಿಟಿ ಅಭಿಯಾನ ಮಾರ್ಗಸೂಚಿಗಳ ಅನುವುಗಳಿಗೆ ವಿರುದ್ಧವಾಗಿರುವುದಲ್ಲದೆಯೇ ವಿಶೇಷ ಉದ್ದೇಶದ ವಾಹಕವು ಮುಂದುವರೆದುಕೊಂಡು ಹೋಗುವ ಸಂಸ್ಥೆಯ ಸ್ಥಾನವನ್ನು ಉಳಿಸಿಕೊಳ್ಳುವುದರ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತದೆ.

ಹಣಕಾಸು ತ:ಖ್ತೆಗಳು ಹಾಗೂ ಲೆಕ್ಕಪರಿಶೋಧಕರುಗಳ ವರದಿಯನ್ನು ಹೊರತುಪಡಿಸಿದಂತೆ ಇತರೆ ಮಾಹಿತಿ

ಇತರೆ ಮಾಹಿತಿಯನ್ನು ತಯಾರಿಸುವಲ್ಲಿ ಕಂಪನಿಯ ನಿರ್ದೇಶಕರುಗಳು ಜವಾಬ್ದಾರಿಯುತರಾಗಿರುತ್ತಾರೆ. ಇತರೆ ಮಾಹಿತಿಯು ನಿರ್ದೇಶಕರುಗಳ ಮಂಡಳಿಯ ವರದಿಗೆ ಅನುಬಂಧಗಳೂ ಒಳಗೊಂಡಂತೆ ನಿರ್ದೇಶಕರುಗಳ ಮಂಡಳಿಯ ವರದಿ, ವ್ಯವಹಾರ ಜವಾಬ್ದಾರಿ ವರದಿಯನ್ನು ಒಳಗೊಂಡಿರುತ್ತದೆ, ಆದರೆ ಹಣಕಾಸು ತ:ಖ್ತೆಗಳು ಹಾಗೂ ಅವುಗಳ ಮೇಲಿನ ನಮ್ಮ ಲೆಕ್ಕಪರಿಶೋಧಕರ ವರದಿಯನ್ನು ಒಳಗೊಂಡಿರುವುದಿಲ್ಲ.

ಹಣಕಾಸು ತ:ಖ್ತೆಗಳ ಮೇಲಿನ ನಮ್ಮ ಅಭಿಪ್ರಾಯವು ಇತರೆ ಮಾಹಿತಿಯನ್ನು ವ್ಯಾಪಿಸಿರುವುದಿಲ್ಲ ಹಾಗೂ ಅವುಗಳ ಮೇಲೆ ನಾವು ಯಾವುದೇ ರೀತಿಯಲ್ಲಿಯೂ ಭರವಸೆಯ ನಿರ್ಣಯವನ್ನು/ತೀರ್ಮಾನವನ್ನೂ ವ್ಯಕ್ತಪಡಿಸುವುದಿಲ್ಲ.

ಹಣಕಾಸು ತ:ಖ್ತೆಗಳ ನಮ್ಮ ಲೆಕ್ಕಪರಿಶೋಧನೆಯ ಸಂಬಂಧವಾಗಿ, ನಮ್ಮ ಜವಾಬ್ದಾರಿಯು ಇತರೆ ಮಾಹಿತಿಯನ್ನು ಓದುವುದು, ಆ ರೀತಿ ಮಾಡುವಲ್ಲಿ ಇತರೆ ಮಾಹಿತಿಯು ಪ್ರತ್ಯೇಕ ಹಣಕಾಸು ತ:ಖ್ತೆಗಳ ಜೊತೆಯಲ್ಲಿ ವಿಷಯಕವಾಗಿ

ಅಥವಾ ನಮ್ಮ ಲೆಕ್ಕಪರಿಶೋಧನೆಯ ವೇಳೆಯಲ್ಲಿ ನಾವು ಪಡೆದುಕೊಂಡಂತಹ ಅರಿವಿನಿಂದ ಅಸಮಂಜಸತೆಯಿಂದ ಕೂಡಿರುವುದೆ ಅಥವಾ ಅನ್ಯಥಾ ವಿಷಯಕವಾಗಿ ತಪ್ಪಾಗಿ ತಿಳಿಸಲಾಗಿರುವುದೇ ಎಂಬುದನ್ನು ಪರಿಗಣಿಸತಕ್ಕದ್ದು.

ನಾವು ನಿರ್ವಹಿಸಿದಂತಹ ಲೆಕ್ಕಪರಿಶೋಧನಾ ಕಾರ್ಯಚಟುವಟಿಕೆಗಳ ಆಧಾರದ ಮೇರೆಗೆ, ಈ ಇತರೆ ಮಾಹಿತಿಯು ಒಂದು ವಿಷಯಕ ತಪ್ಪು ಹೇಳಿಕೆಯಿಂದ ಕೂಡಿರುವುದಾಗಿ ನಾವು ತೀರ್ಮಾನಕ್ಕೆ ಬಂದಲ್ಲಿ, ಅಂತಹ ವಾಸ್ತವಾಂಶವನ್ನು ನಾವು ವರದಿ ಮಾಡುವ ಅಗತ್ಯತೆಯಿರುತ್ತದೆ. ಈ ನಿಟ್ಟಿನಲ್ಲಿ ವರದಿ ಮಾಡಲು ನಮಗೆ ಯಾವುದೇ ಅಂಶವೂ ಇರುವುದಿಲ್ಲ.

ಹಣಕಾಸು ತ:ಖ್ತೆಗಳ ತಯಾರಿಕೆಗೆ ಸಂಬಂಧಿಸಿದಂತೆ ವ್ಯವಸ್ಥಾಪನೆಯ ಜವಾಬ್ದಾರಿ

ಕಂಪನಿಗಳ ಅಧಿನಿಯಮದ ಪರಿಚ್ಛೇದ 134 ಉಪ-ಪರಿಚ್ಛೇದ (5) ರಲ್ಲಿ ನಿರ್ದಿಷ್ಟಪಡಿಸಲಾಗಿರುವಂತೆ ಭಾರತದಲ್ಲಿ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಹಾಗೂ ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 7ರ ಜೊತೆಯಲ್ಲಿ ಓದಲ್ಪಡುವ ಅಧಿನಿಯಮ 133 ಹಾಗೂ ಅದರ ಅಡಿಯಲ್ಲಿ ರೂಪಿಸಲಾಗಿರುವಂತಹ ನಿಯಮಗಳು ಯಾವುದಾದರೂ ಇದ್ದಲ್ಲಿ ಅವುಗಳ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳನ್ನು ಅನುಸರಿಸಿದಂತೆ ನಿಗಮದ ಹಣಕಾಸಿನ ಸ್ಥಿತಿಗತಿ, ಹಣಕಾಸಿಗೆ ಸಂಬಂಧಿತ ಕಾರ್ಯನಿರ್ವಹಣೆ ಹಾಗೂ ಹಣಕಾಸಿನ ಹರಿವಿನ ಒಂದು ಸತ್ಯಾಸತ್ಯತೆಯಿಂದ ಕೂಡಿದಂತಹ ಹಾಗೂ ನ್ಯಾಯಸಮ್ಮತ ಅಭಿಪ್ರಾಯವನ್ನು ನೀಡುವ ರೀತಿಯಲ್ಲಿ ಈ ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ತಯಾರಿಸುವುದಕ್ಕೆ ಸಂಬಂಧಿಸಿದಂತೆ ನಿಗಮದ ನಿರ್ದೇಶಕರುಗಳ ಮಂಡಳಿಯು ಜವಾಬ್ದಾರಿಯುತವಾಗಿರುತ್ತದೆ.

ಈ ಜವಾಬ್ದಾರಿಯು ಒಂದು ಸತ್ಯಾಸತ್ಯತೆಯಿಂದ ಹಾಗೂ ನ್ಯಾಯಸಮ್ಮತತೆಯಿಂದ ಕೂಡಿದ ಹಾಗೂ ವಂಚನೆಗಳು ಅಥವಾ ತಪ್ಪುಗಳನ್ನು ಎಸಗುವುದರ ಕಾರಣ ವಿಷಯಕ ತಪ್ಪು ಹೇಳಿಕೆಗಳಿಂದ ಹೊರತಾದ ಹಣಕಾಸಿನ ತ:ಖ್ತೆಗಳನ್ನು ತಯಾರಿಸುವ ಹಾಗೂ ಮಂಡಿಸುವುದಕ್ಕೆ ಸೂಕ್ತವಾದಂತಹ ನಿಗಮದ ಆಸ್ತಿಗಳ ಸಂರಕ್ಷಣೆಗಾಗಿ ಅಧಿನಿಯಮದ ಅನುವುಗಳ ಅನುಸಾರ ಸಮರ್ಪಕವಾದ ರೀತಿಯಲ್ಲಿ ಲೆಕ್ಕಪತ್ರಗಳ ನಿರ್ವಹಣೆಗಾಗಿ ಹಾಗೂ ವಂಚನೆಗಳನ್ನು ತಡೆಯುವುದು ಮತ್ತು ಪತ್ತೆಹಚ್ಚುವುದು, ಒಂದು ಸೂಕ್ತ ಲೆಕ್ಕವನ್ನಿಡುವಿಕೆಯ ಕಾರ್ಯನೀತಿಯ ಆಯ್ಕೆ ಹಾಗೂ ಅದನ್ನು ಅನ್ವಯಗೊಳಿಸುವುದು, ನ್ಯಾಯಸಮ್ಮತತೆಯಿಂದ ಮತ್ತು ವಿವೇಚನೆಯಿಂದ ಕೂಡಿದ ತೀರ್ಮಾನಗಳನ್ನು ಕೈಗೊಳ್ಳುವುದು ಹಾಗೂ ಅಂದಾಜುಗಳನ್ನು ಮಾಡುವುದು ಹಾಗೂ ಸಮರ್ಪಕವಾದ ರೀತಿಯಲ್ಲಿ ಆಂತರಿಕ ಹಣಕಾಸು ನಿಯಂತ್ರಣಗಳ ವಿನ್ಯಾಸ, ಕಾರ್ಯಗತಗೊಳಿಸುವಿಕೆ, ಹಾಗೂ ನಿರ್ವಹಣೆ, ಇವುಗಳನ್ನೂ ಕೂಡ ಒಳಗೊಂಡಿರುತ್ತದೆ.

ಹಣಕಾಸು ತ:ಖ್ತೆಗಳನ್ನು ತಯಾರಿಸುವಲ್ಲಿ, ವ್ಯವಹಾರಗಳನ್ನು ಮುಂದುವರೆಸಿಕೊಂಡು ಹೋಗುವ ಕಂಪನಿಯನ್ನಾಗಿ ಮುಂದುವರೆಸಿಕೊಂಡು ಹೋಗುವ ಕಂಪನಿಯ ಸಾಮರ್ಥ್ಯವನ್ನು ನಿರ್ಧಾರಣೆ ಮಾಡಲು, ಅನ್ವಯಗೊಳ್ಳುವಂತೆ ವ್ಯವಹಾರಗಳನ್ನು ಮುಂದುವರೆಸಿಕೊಂಡು ಹೋಗುವ ಕಂಪನಿಗೆ ಸಂಬಂಧಿತ ವಿಷಯಗಳನ್ನು ಬಹಿರಂಗಪಡಿಸಲು ಹಾಗೂ ಕಂಪನಿಯನ್ನು ಸಮಾಪನಗೊಳಿಸುವ ಅಥವಾ ಕಾರ್ಯಾಚರಣೆಗಳನ್ನು ಮುಕ್ತಾಯಗೊಳಿಸುವ ಉದ್ದೇಶವನ್ನು ವ್ಯವಸ್ಥಾಪನೆಯು ಹೊಂದಿರದ ಹೊರತು ಅಥವಾ ಆ ರೀತಿ ಮಾಡಲು ವಾಸ್ತವಿಕ ಬದಲಿ ವ್ಯವಸ್ಥೆಗಳು ಇಲ್ಲವಾದಲ್ಲಿ ಲೆಕ್ಕಪತ್ರಗಳನ್ನು ವ್ಯವಹಾರಗಳನ್ನು ಮುಂದುವರೆಸಿಕೊಂಡು ಹೋಗುವ ಕಂಪನಿಯ ಆಧಾರದ ಮೇರೆಗೆ ವ್ಯವಹಾರಗಳ ಲೆಕ್ಕವನ್ನಿಡಲು ವ್ಯವಸ್ಥಾಪನೆಯು ಜವಾಬ್ದಾರಿಯುತವಾಗಿರುತ್ತದೆ.

ಕಂಪನಿಯ ಹಣಕಾಸು ವರದಿಯ ಪ್ರಕ್ರಿಯೆಗಳನ್ನು ಮೇಲ್ವಿಚಾರಣೆ ಮಾಡುವಲ್ಲಿ ಕಂಪನಿಯ ನಿರ್ದೇಶಕರುಗಳ ಮಂಡಳಿಯು ಜವಾಬ್ದಾರಿಯುತವಾಗಿರುತ್ತದೆ.

ಹಣಕಾಸು ತ:ಖ್ತೆಗಳ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕರುಗಳ ಜವಾಬ್ದಾರಿ

ಹಣಕಾಸು ತ:ಖ್ತೆಗಳು ಒಟ್ಟಾರೆಯಾಗಿ ವಂಚಿಸುವ ಉದ್ದೇಶದಿಂದಲೇ ಆಗಿರಲಿ ಅಥವಾ ಕೈ ಅಚಾತುರ್ಯದಿಂದಲೇ ಆಗಿರಲಿ ಇರಬಹುದಾದಂತಹ ವಿಷಯಿಕ ತಪ್ಪು ಹೇಳಿಕೆಗಳಿಂದ ಮುಕ್ತವಾಗಿರುವವೆ ಎಂಬುದರ ಬಗ್ಗೆ ಒಂದು ನ್ಯಾಯಸಮ್ಮತ ಭರವಸೆಯನ್ನು ಪಡೆಯುವುದು, ನಮ್ಮ ಅಭಿಪ್ರಾಯವನ್ನು ಒಳಗೊಂಡಿರುವಂತಹ ಲೆಕ್ಕಪರಿಶೋಧಕರ ವರದಿಯನ್ನು ನೀಡುವುದು ನಮ್ಮ ಉದ್ದೇಶಗಳಾಗಿರುತ್ತವೆ. ನ್ಯಾಯಸಮ್ಮತ ಭರವಸೆಯು ಒಂದು ಉನ್ನತ ಮಟ್ಟದ ಭರವಸೆಯಾಗಿರುತ್ತದೆ, ಆದರೆ ಲೆಕ್ಕಪರಿಶೋಧನೆಗೆ ಸಂಬಂಧಿತ ಮಾನದಂಡಗಳ ಅನುಸಾರ ನಡೆಸಲಾಗಿರುವ ಲೆಕ್ಕಪರಿಶೋಧನೆಯು ಸದಾಕಾಲವೂ, ಒಂದು ವಿಷಯಿಕ ತಪ್ಪು ಹೇಳಿಕೆಗಳು ಇರುವ ಸಂದರ್ಭಗಳಲ್ಲೆಲ್ಲವೂ ಪತ್ತೆಹಚ್ಚುವುದು ಎಂಬುದರ ಬಗ್ಗೆ ಖಾತರಿಯಿಂದ ಕೂಡಿರುವುದಿಲ್ಲ. ತಪ್ಪು ಹೇಳಿಕೆಗಳು ವಂಚನೆಗಳು ಅಥವಾ ಕೈಯಿಂದ ಆದಂತಹ ಅಚಾತುರ್ಯಗಳ ಕಾರಣ ಉದ್ಭವಿಸುತ್ತವೆ ಹಾಗೂ ವೈಯಕ್ತಿಕವಾಗಿ ಅಥವಾ ಒಟ್ಟಾರೆಯಾಗಿ ಈ ಹಣಕಾಸು ತ:ಖ್ತೆಗಳ ಆಧಾರದ ಮೇರೆಗೆ ಬಳಕೆದಾರರುಗಳು ತೆಗೆದುಕೊಳ್ಳಲಾದಂತಹ ಆರ್ಥಿಕ ನಿರ್ಣಯಗಳ ಮೇಲೆ ಪರಿಣಾಮ ಬೀರುವುದನ್ನು ನ್ಯಾಯಸಮ್ಮತವಾಗಿ ನಿರೀಕ್ಷಿಸಿದಲ್ಲಿ ಅವುಗಳನ್ನು ಪರಿಗಣಿಸಲಾಗುವುದು.

ಲೆಕ್ಕಪರಿಶೋಧನೆಯ ಮಾನದಂಡಗಳ ಅನುಸಾರ ನಡೆಸಲಾಗುವ ಒಂದು ಲೆಕ್ಕಪರಿಶೋಧನೆಯ ಒಂದು ಭಾಗವಾಗಿ, ನಾವು ನಮ್ಮ ಸಂಪೂರ್ಣ ಲೆಕ್ಕಪರಿಶೋಧನೆಯ ಪ್ರಕ್ರಿಯೆಗಳ ಉದ್ದಕ್ಕೂ ನಮ್ಮ ವೃತ್ತೀಯ ತೀರ್ಮಾನವನ್ನು (ಜಡ್ಜ್‌ಮೆಂಟ್) ಚಲಾಯಿಸುವೆವು ಹಾಗೂ ಲೆಕ್ಕಪರಿಶೋಧನಾ ಪ್ರಕ್ರಿಯೆಯ ಉದ್ದಕ್ಕೂ ನಮ್ಮ ವೃತ್ತೀಯವಾಗಿ ಬಂದಿರುವಂತಹ ಒಂದು ಅಂಶದ ಬಗ್ಗೆ ಸಾಕ್ಷ್ಯಾಧಾರಗಳಿಲ್ಲದಿದ್ದ ಸಂದರ್ಭದಲ್ಲಿ ಅನುಮಾನಾಸ್ಪದ ದೃಷ್ಟಿಯಿಂದ ನೋಡುವಂತಹ ಧೋರಣೆಯನ್ನು ನಿರ್ವಹಿಸಿಕೊಂಡು ಹೋಗುವೆವು, ನಾವು ಈ ಕೆಳಗಿನ ಅಂಶಗಳನ್ನೂ ಸಹ ಪರಿಶೀಲಿಸುವೆವು :

- ವಂಚಿಸುವ ಉದ್ದೇಶದಿಂದಲೇ ಆಗಿರಲಿ ಅಥವಾ ಕೈ ಅಚಾತುರ್ಯದಿಂದಲೇ ಆಗಿರಲಿ ಇರಬಹುದಾದಂತಹ ವಿಷಯಿಕ ತಪ್ಪು ಹೇಳಿಕೆಗಳನ್ನು ಗುರುತಿಸುವುದು ಹಾಗೂ ಅವುಗಳ ಸಂಭಾವ್ಯ ಅಪಾಯಗಳ ನಿರ್ಧಾರಣೆ ಮಾಡುವುದು, ಇಂತಹ ಸಂಭಾವ್ಯ ಅಪಾಯಗಳಿಗೆ ಪ್ರತಿಕ್ರಿಯಾಶೀಲವಾಗಿರುವಂತಹ ಲೆಕ್ಕಪರಿಶೋಧನಾ ಪೂರ್ವಭಾವಿ ಯೋಜನೆಯನ್ನು ರೂಪಿಸುವುದು ಹಾಗೂ ಲೆಕ್ಕಪರಿಶೋಧನಾ ಕಾರ್ಯವಿಧಾನಗಳನ್ನು ನಡೆಸಿಕೊಂಡು ಹೋಗುವುದು ಹಾಗೂ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಲುವಾಗಿ ಸಮರ್ಪಕವಾಗಿರುವಂತಹ ಹಾಗೂ ಸೂಕ್ತವಾಗಿರುವಂತಹ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರ ದಾಖಲೆಗಳನ್ನು ಪಡೆದುಕೊಳ್ಳುವುದು. ವಂಚನೆಯು ಮೋಸ/ಒಳಸಂಚು, ಖೋಟಾ ಖುಜುವಿನೊಂದಿಗೆ ಸಾಕ್ಷ್ಯಾಧಾರಗಳ ಸೃಷ್ಟಿ, ಉದ್ದೇಶಪೂರ್ವಕಾಗಿ ತಪ್ಪುಗಳು/ಲೋಪದೋಷಗಳನ್ನು ಎಸಗುವುದು, ತಪ್ಪುಗಳಿಂದ ಕೂಡಿದ ನಿರೂಪಣೆ ಅಥವಾ ಆಂತರಿಕ ನಿಯಂತ್ರಣಗಳ ಉಲ್ಲಂಘನೆಗಳನ್ನು ಒಳಗೊಂಡಿರಬಹುದಾದ್ದರಿಂದ ಒಂದು ವಿಷಯಿಕ ತಪ್ಪು ಹೇಳಿಕೆಗಳನ್ನು ಪತ್ತೆಹಚ್ಚದಿರುವ ಸಂಭಾವ್ಯ ಅಪಾಯವು ತಪ್ಪುಗಳು ಅಥವಾ ಲೋಪದೋಷಗಳ ಕಾರಣದಿಂದ ಇರಬಹುದಾದ ಸಂಭಾವ್ಯ ಅಪಾಯಕ್ಕಿಂತಲೂ ದೊಡ್ಡದಾಗಿರುತ್ತದೆ.

- ಸಂದರ್ಭಗಳಿಗೆ ಸೂಕ್ತವೆನಿಸುವಂತಹ ಲೆಕ್ಕಪರಿಶೋಧನಾ ಕಾರ್ಯವಿಧಾನಗಳನ್ನು ರೂಪಿಸುವ ಉದ್ದೇಶದಿಂದ ಲೆಕ್ಕಪರಿಶೋಧನೆಗೆ ಸಂಬಂಧಿಸಿರುವಂತಹ ಕಂಪನಿಯ ಆಂತರಿಕ ನಿಯಂತ್ರಣಗಳ ಮಾಹಿತಿಯನ್ನು ಪಡೆದುಕೊಳ್ಳುವುದು. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143(3)(i)ರ ಅಡಿಯಲ್ಲಿ , ಕಂಪನಿಯು ಸಮರ್ಪಕವಾದಂತಹ ರೀತಿಯಲ್ಲಿ ಆಂತರಿಕ ಹಣಕಾಸು ನಿಯಂತ್ರಣಗಳ ವ್ಯವಸ್ಥೆಯನ್ನು ಹೊಂದಿರುವುದೇ ಹಾಗೂ ಅಂತಹ ನಿಯಂತ್ರಣಗಳ ಕಾರ್ಯಾಚರಣೆಗಳು ಪರಿಣಾಮಕಾರಿತ್ವದಿಂದ ಕೂಡಿರುವವೇ ಎಂಬುದರ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಲ್ಲಿಯೂ ಕೂಡ ನಾವು ಜವಾಬ್ದಾರಿಯುತರಾಗಿರುವೆವು.

- ಉಪಯೋಗಿಸಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳ ಸೂಕ್ತತೆಯನ್ನು ಮೌಲ್ಯಮಾಪನ ಮಾಡುವುದು ಹಾಗೂ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಅಂದಾಜುಗಳ ನ್ಯಾಯಸಮ್ಮತತೆ ಹಾಗೂ ವ್ಯವಸ್ಥಾಪನೆಯು ಈ ನಿಟ್ಟಿನಲ್ಲಿ ಮಾಡಿರುವಂತಹ ಬಹಿರಂಗಪಡಿಸುವಿಕೆಗಳನ್ನು ಮೌಲ್ಯಮಾಪನ ಮಾಡುವುದು.

- ಕಂಪನಿಯು ತನ್ನ ಕಾರ್ಯಾಚರಣೆಗಳನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಆಧಾರದ ಮೇರೆಗಿನ ಲೆಕ್ಕವನಿಡುವಿಕೆಯನ್ನು ವ್ಯವಸ್ಥಾಪನೆಯು ಬಳಸಿಕೊಳ್ಳುತ್ತಿರುವುದರ ಸೂಕ್ತತೆಯ ಬಗ್ಗೆ ಒಂದು ನಿರ್ಣಯಕ್ಕೆ ಬರುವುದು ಹಾಗೂ ಪಡೆದುಕೊಳ್ಳಲಾಗಿರುವಂತಹ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳ ಆಧಾರದ ಮೇರೆಗೆ, ತನ್ನ ಕಾರ್ಯಾಚರಣೆಗಳನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಸಂಸ್ಥೆಯಾಗಿ ಮುಂದುವರೆಯುವ ಕಂಪನಿಯ ಸಾಮರ್ಥ್ಯತೆಯ ಬಗ್ಗೆ ಗಮನಾರ್ಹವಾದಂತಹ ರೀತಿಯಲ್ಲಿ ಅನುಮಾನವನ್ನು ಸೃಷ್ಟಿಸುವಂತಹ ಘಟನೆಗಳು ಅಥವಾ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ಒಂದು ವಿಷಯಕ ಅನಿಶ್ಚಿತತೆಯು ಇರುವುದೇ ಎಂಬುದರ ಬಗ್ಗೆ ಒಂದು ನಿರ್ಣಯಕ್ಕೆ ಬರುವುದು. ವಿಷಯಕ ಅನಿಶ್ಚಿತತೆಯು ಇರುವುದಾಗಿ ನಮ್ಮ ನಿರ್ಣಯವನ್ನು ವ್ಯಕ್ತಪಡಿಸಿದಲ್ಲಿ, ಹಣಕಾಸು ತ:ಖ್ತೆಗಳಲ್ಲಿನ ಬಹಿರಂಗಪಡಿಸುವಿಕೆಗಳಿಗೆ ಸಂಬಂಧಿತ ವರದಿಯಲ್ಲಿ ನಾವು ಸದಸ್ಯರುಗಳ ಗಮನವನ್ನು ಸೆಳೆಯುವ ಅಗತ್ಯತೆಯಿರುತ್ತದೆ ಅಥವಾ, ಅಂತಹ ಬಹಿರಂಗಪಡಿಸುವಿಕೆಗಳು ಅಸಮರ್ಪಕವಾಗಿದ್ದಲ್ಲಿ, ನಮ್ಮ ಅಭಿಪ್ರಾಯವನ್ನು ಮಾರ್ಪಾಡು ಮಾಡುವ ಅಗತ್ಯತೆಯಿರುತ್ತದೆ. ನಮ್ಮ ನಿರ್ಣಯಗಳು/ತೀರ್ಮಾನಗಳು ನಮ್ಮ ಲೆಕ್ಕಪರಿಶೋಧಕರುಗಳ ವರದಿಯ ದಿನಾಂಕದವರೆಗಿನ ನಾವು ಪಡೆದುಕೊಳ್ಳಲಾಗಿರುವಂತಹ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳ ಆಧಾರದ ಮೇರೆಗೆ ಆಗಿರುತ್ತವೆ. ಆದಾಗ್ಯೂ, ಭವಿಷ್ಯದ ಘಟನೆಗಳು ಅಥವಾ ಪರಿಸ್ಥಿತಿಗಳು ಕಂಪನಿಯ ತನ್ನ ಮುಂದುವರೆದುಕೊಂಡು ಹೋಗುತ್ತಿರುವ ಸಂಸ್ಥೆಯಾಗಿ ಮುಂದುವರೆಯುವುದನ್ನು ಸಮಾಪ್ತಿಗೊಳಿಸಬಹುದು.

- ಬಹಿರಂಗಪಡಿಸುವಿಕೆಗಳೂ ಸೇರಿದಂತೆ ಹಣಕಾಸು ತ:ಖ್ತೆಗಳ ಒಟ್ಟಾರೆ ನಿರೂಪಣೆ, ರಚನೆ ಹಾಗೂ ಅಡಕಗಳನ್ನು ಮೌಲ್ಯಮಾಪನ ಮಾಡುವುದು ಹಾಗೂ ಹಣಕಾಸು ತಖ್ತೆಗಳು ಮೂಲಾಧಾರವಾಗಿರುವ ವ್ಯವಹಾರಗಳು ಮತ್ತು ಘಟನೆಗಳನ್ನು ನ್ಯಾಯಸಮ್ಮತ ರೀತಿಯಲ್ಲಿ ನಿರೂಪಣೆಯನ್ನು ಸಾಧಿಸುವ ರೀತಿಯಲ್ಲಿ ಪ್ರತಿನಿಧಿಸುವವೆ ಎಂಬುದರ ಬಗ್ಗೆ ಮೌಲ್ಯಮಾಪನ ಮಾಡುವುದು.

- ಪೂರ್ಣಗೊಳಿಸಲಾಗಿರುವಂತಹ ಹಾಗೂ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಗೆ ವಹಿಸಿಕೊಡಲಾಗಿರುವಂತಹ ಸ್ಥಿರಾಸ್ತಿಗಳು/ಯೋಜನೆಗಳ ವಿವರಗಳು ದಾಖಲೆಗಳಲ್ಲಿರುವುದಿಲ್ಲ/ರಿಜಿಸ್ಟರು ಲಭ್ಯವಿರುವುದಿಲ್ಲ.

- ಹೊಸ ಪಿಂಚಣಿ ಯೋಜನೆ ಅಡಿಯಲ್ಲಿ ನಿಯೋಜನೆಯ ಮೇಲೆ ನೇಮಕ ಮಾಡಲಾಗಿರುವಂತಹ ಸರ್ಕಾರಿ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಅವರುಗಳಿಂದ ಹೊಸ ಪಿಂಚಣಿ ಯೋಜನೆ ಕಾಣಿಕೆಗಳನ್ನು ವೇತನದಿಂದ ಕಡಿದುಕೊಳ್ಳತಕ್ಕದ್ದು, ಹಾಗೆಯೇ ಉದ್ಯೋಗದಾತರ ಕಾಣಿಕೆಯನ್ನೂ ನೀಡಿ ಹೊಸ ಪಿಂಚಣಿ ಯೋಜನೆ ಖಾತೆಗೆ ಪಾವತಿಸುವುದು ಎಂಬುದಾಗಿ ನಿರ್ದೇಶಕರುಗಳ ಮಂಡಳಿಯು ಒಂದು ನಿರ್ಣಯವನ್ನು ಅನುಮೋದಿಸಿರುವುದು. ಉದ್ಯೋಗದಾತರ ಭಾಗದ ಮೊತ್ತವನ್ನು ಎಅಂಡ್ಒಇ ಲೆಕ್ಕದಿಂದ ಕಡಿದುಕೊಳ್ಳುವಂತೆ ಹಾಗೂ ಉದ್ಯೋಗಿಯ ಸಂಬಂಧಿತ ಹೊಸ ಪಿಂಚಣಿ ಯೋಜನೆ ಖಾತೆಗೆ ಪಾವತಿಸುವಂತೆಯೂ ನಿರ್ದೇಶಕರುಗಳ ಮಂಡಳಿಯು ಅನುಮೋದಿಸಿರುವುದು.

ಹಣಕಾಸು ತ:ಖ್ತೆಗಳಲ್ಲಿನ ತಪ್ಪು ಹೇಳಿಕೆಗಳ ವಿಸ್ತಾರವು ಪ್ರಾಮುಖ್ಯತೆಯನ್ನು ಹೊಂದಿರುತ್ತದೆ, ಹಣಕಾಸು ತ:ಖ್ತೆಗಳನ್ನು ಓರ್ವ ನ್ಯಾಯಸಮ್ಮತ ಅರಿವನ್ನು ಹೊಂದಿರುವ ಬಳಸಿಕೊಳ್ಳುವ ವ್ಯಕ್ತಿ/ಸಂಸ್ಥೆಯ ಮೇಲೆ ಅದು ವೈಯಕ್ತಿಕವಾಗಿ ಅಥವಾ ಒಟ್ಟಾರೆಯಾಗಿ ಪ್ರಭಾವ ಬೀರಬಹುದು. (i) ನಮ್ಮ ಲೆಕ್ಕಪರಿಶೋಧನಾ ಕಾರ್ಯಕ್ರಮದ ವ್ಯಾಪ್ತಿಯನ್ನು ಪೂರ್ವಭಾವಿಯಾಗಿ ಯೋಜಿಸುವಲ್ಲಿ ಹಾಗೂ ನಮ್ಮ ಲೆಕ್ಕಪರಿಶೋಧನಾ ಕಾರ್ಯಕ್ರಮದ ಫಲಿತಾಂಶವನ್ನು ಮೌಲ್ಯಮಾಪನ ಮಾಡುವಲ್ಲಿ ಹಾಗೂ (ii) ಹಣಕಾಸು ತ:ಖ್ತೆಗಳಲ್ಲಿ ಯಾವುದಾದರೂ ಗುರುತಿಸಲ್ಪಟ್ಟಿರುವ ತಪ್ಪು ಹೇಳ್ಳಿಕೆಗಳ ಪ್ರಭಾವವನ್ನು ಮೌಲ್ಯಮಾಪನ ಮಾಡುವ ಸಲುವಾಗಿ ನಾವು ಪರಿಮಾಣಕ ಪ್ರಾಮುಖ್ಯತೆ ಹಾಗೂ ಗುಣಾತ್ಮಕ ಅಂಶಗಳನ್ನು ಪರಿಗಣಿಸುವೆವು.

ಇನ್ನಿತರೆ ವಿಷಯಗಳ ನಡುವೆ, ಲೆಕ್ಕಪರಿಶೋಧನೆಯ ಪೂರ್ವಭಾವಿಯಾಗಿ ಯೋಜಿಸಲ್ಪಟ್ಟಿರುವ ವ್ಯಾಪ್ತಿ ಮತ್ತು ಸಮಯ ಹಾಗೂ ನಮ್ಮ ಲೆಕ್ಕಪರಿಶೋಧನೆಯ ವೇಳೆಯಲ್ಲಿ ನಾವು ಗುರುತಿಸಬಹುದಾದ ಆಂತರಿಕ ನಿಯಂತ್ರಣದಲ್ಲಿನ ಯಾವುದೇ ಲೋಪದೋಷಗಳನ್ನು ಒಳಗೊಂಡಂತೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಗಮನಾರ್ಹ ಅಂಶಗಳನ್ನು ಹಣಕಾಸು ತ:ಖ್ತೆಗಳ ತಯಾರಿಕೆಯ ಜವಾಬ್ದಾರಿಯನ್ನು ಹೊಂದಿರುವ ವ್ಯವಸ್ಥಾಪನೆಯ ಗಮನಕ್ಕೆ ತರುವೆವು.

ನಮ್ಮ ಸ್ವತಂತ್ರ್ಯತೆಯ ಬಗ್ಗೆ ಸೂಕ್ತ ಔಚಿತ್ಯತೆಗಳ ಅಗತ್ಯತೆಗಳನ್ನು ನಾವು ಅನುಸರಿಸಿರುವೆವು ಎಂಬುದರ ಬಗ್ಗೆಯೂ ನಾವು ಒಂದು ಹೇಳಿಕೆಯನ್ನು ನೀಡುವೆವು ಹಾಗೂ ನಮ್ಮ ಸ್ವತಂತ್ರ್ಯತೆಯ ಮೇಲೆ ಹೊರೆಯಾಗಬಹುದೆಂಬುದಾಗಿ ನ್ಯಾಯಸಮ್ಮತವಾಗಿ ಯೋಚಿಸಬಹುದಾದ ಎಲ್ಲಾ ಸಂಬಂಧಗಳು ಹಾಗೂ ಇತರೆ ವಿಷಯಗಳನ್ನು ಹಾಗೂ ಅನ್ವಯಗೊಳ್ಳುವೆಡೆಗಳಲ್ಲಿ ಸಂಬಂಧಿತ ಮುಂಜಾಗ್ರತಾ ಕ್ರಮಗಳನ್ನೂ ಸಹ ಹಣಕಾಸು ತ:ಖ್ತೆಗಳ ತಯಾರಿಕೆಯ ಜವಾಬ್ದಾರಿಯನ್ನು ಹೊಂದಿರುವ ವ್ಯವಸ್ಥಾಪನೆಯ ಗಮನಕ್ಕೆ ತರುವೆವು. ಹಣಕಾಸು ತ:ಖ್ತೆಗಳ ತಯಾರಿಕೆಯ ಜವಾಬ್ದಾರಿಯನ್ನು ಹೊಂದಿರುವ ವ್ಯವಸ್ಥಾಪನೆಯ ಗಮನಕ್ಕೆ ತಂದಂತಹ ವಿಷಯಗಳಿಂದ, ಪ್ರಸಕ್ತ ಚಾಲ್ತಿ ಅವಧಿಯ ಹಣಕಾಸು ತ:ಖ್ತೆಗಳ ಲೆಕ್ಕಪರಿಶೋಧನೆಯಲ್ಲಿ ಅತ್ಯಂತ ಗಮನಾರ್ಹವಾದಂತಹ ವಿಷಯಗಳನ್ನು ನಾವು ನಿರ್ಧಾರಣೆ ಮಾಡುವೆವು, ಆದ್ದರಿಂದ ಈ ರೀತಿ ನಿರ್ಧಾರಣೆ ಮಾಡಲಾದ ಅಂಶಗಳು ಪ್ರಮುಖ ಲೆಕ್ಕಪರಿಶೋಧನಾ ವಿಷಯಗಳಾಗಿರುತ್ತವೆ. ಒಂದು ವಿಷಯದ ಬಗ್ಗೆ ಬಹಿರಂಗಪಡಿಸುವುದನ್ನು ಕಾನೂನು ಅಥವಾ ನಿಯಂತ್ರಣಗಳು ಪ್ರತಿಬಂಧಿಸಿರದ ಹೊರತು ಅಥವಾ ಅತ್ಯಂತ ವಿರಳ ಸಂದರ್ಭಗಳಲ್ಲಿ, ಆ ರೀತಿ ಮಾಡುವುದು ಅಂತಹ ಸಂದೇಶವು ಸಾರ್ವಜನಿಕ ಹಿತಾಸಕ್ತಿ ಪ್ರಯೋಜನಗಳನ್ನು ವಿಫಲಗೊಳಿಸುವಂತಹ ಒಂದು ನ್ಯಾಯಸಮ್ಮತ ನಿರೀಕ್ಷೆ ಇರದ ಹೊರತು, ನಾವು ಈ ವಿಷಯಗಳನ್ನು ನಮ್ಮ ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸುವೆವು.

ಇತರೆ ಕಾನೂನು ಮತ್ತು ನಿಯಂತ್ರಕ ಅಗತ್ಯತೆಗಳ ಮೇಲಿನ ವರದಿ

ಭಾರತ ಸರ್ಕಾರವು ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143ರ ಉಪ-ಪರಿಚ್ಛೇದ (11)ರ ಷರತ್ತುಗಳಂತೆ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಅಗತ್ಯತೆಯಂತೆ, ಮೇಲೆ ತಿಳಿಸಲಾದಂತಹ ಆದೇಶದ ಕಂಡಿಕೆಗಳು 3 ಮತ್ತು 4ರಲ್ಲಿ ನಿರ್ದಿಷ್ಟಪಡಿಸಲಾಗಿರುವ ವಿಷಯಗಳ ಮೇಲೆ ಒಂದು ತ:ಖ್ತೆಯನ್ನು ನಾವು ಅನುಬಂಧ "ಎ"ನಲ್ಲಿ ಲಗತ್ತಿಸಿರುವೆವು.

ಅಧಿನಿಯಮದ ಪರಿಚ್ಛೇದ 143 (3)ರ ಅಗತ್ಯತೆಯಂತೆ ವರದಿ ಮಾಡುತ್ತಿರುವೆವು :

ಎ) ನಮ್ಮ ಅತ್ಯುತ್ತಮ ಅರಿವಿನ ಅನುಸಾರ ನಮ್ಮ ಲೆಕ್ಕಪರಿಶೋಧನೆಯ ಉದ್ದೇಶಗಳಿಗಾಗಿ ಅಗತ್ಯತೆ ಎಂಬುದಾಗಿ ಕಂಡುಬಂದಹ ಎಲ್ಲಾ ಮಾಹಿತಿಗಳನ್ನು ಹಾಗೂ ವಿವರಗಳನ್ನು ನಾವು ಕೋರಿದೆವು ಹಾಗೂ ಪಡೆದುಕೊಂಡೆವು.

ಬಿ) ನಮ್ಮ ಅಭಿಪ್ರಾಯದಲ್ಲಿ, ಅಧಿನಿಯಮ/ನಿಯಮ/ನಿಬಂಧನೆಗಳ ಅನುಸಾರ ಅಗತ್ಯತೆಯಿರುವಂತೆ ಕಂಪನಿಯು ನಾವು ನಡೆಸಿದ ಲೆಕ್ಕಪತ್ರ ಪುಸ್ತಕಗಳ ಪರಿಶೀಲನೆಯಿಂದ ಕಂಡುಬಂದಷ್ಟರ ಮಟ್ಟಿಗೆ ಸಮರ್ಪಕ ಲೆಕ್ಕಪತ್ರಗಳ ಪುಸ್ತಕಗಳನ್ನು ನಿರ್ವಹಿಸಿರುವುದು.

ಸಿ) ಈ ವರದಿಯು ವ್ಯವಹರಿಸಿರುವ ಆಸ್ತಿ-ಜವಾಬ್ದಾರಿ ತ:ಖ್ತೆ, ಲಾಭ ಮತ್ತು ನಷ್ಟಗಳ ತ:ಖ್ತೆ ಹಾಗೂ ಹಣಕಾಸು/ನಗದು ಹರಿವಿನ ತ:ಖ್ತೆಗಳು ಲೆಕ್ಕಪತ್ರಗಳ ಪುಸ್ತಕಗಳ ಜೊತೆಯಲ್ಲಿ ತಾಳೆ ಹೊಂದುತ್ತವೆ.

ಡಿ) ನಮ್ಮ ಅಭಿಪ್ರಾಯದಲ್ಲಿ, ಆಸ್ತಿ-ಜವಾಬ್ದಾರಿ ತ:ಖ್ತೆ, ಲಾಭ ಮತ್ತು ನಷ್ಟಗಳ ತ:ಖ್ತೆ ಹಾಗೂ ಹಣಕಾಸು/ನಗದು ಹರಿವಿನ ತ:ಖ್ತೆಗಳು ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ಜೊತೆಯಲ್ಲಿ ಓದಲ್ಪಡುವ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ತಯಾರಿಸಲ್ಪಟ್ಟಿರುತ್ತವೆ.

ಇ) ನಿರ್ದೇಶಕರುಗಳಿಂದ ಪಡೆದುಕೊಳ್ಳಲಾಗಿರುವ ಹಾಗೂ 31 ಮಾರ್ಚ್ 2018ರಲ್ಲಿದ್ದಂತೆ ನಿರ್ದೇಶಕರುಗಳ ಮಂಡಳಿಯಿಂದ ದಾಖಲೆಗಳಿಗೆ ತೆಗೆದುಕೊಳ್ಳಲಾಗಿರುವ ಲಿಖಿತ ಪತ್ರಗಳ ಆಧಾರದ ಮೇರೆಗೆ, ಅಧಿನಿಯಮದ ಪರಿಚ್ಛೇದ 164 (2)ರಲ್ಲಿನ ಷರತ್ತುಗಳ ಅನುಸಾರ ಯಾವುದೇ ಓರ್ವ ನಿರ್ದೇಕರು ಅನರ್ಹಗೊಂಡಿರುವುದಿಲ್ಲ.

ಎಫ್) ಕಂಪನಿಯ ಹಣಕಾಸು ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಸಮರ್ಪಕತೆಗೆ ಸಂಬಂಧಿಸಿದಂತೆ ಹಾಗೂ ಅಂತಹ ನಿಯಂತ್ರಣಗಳ ಕಾರ್ಯಾಚರಣೆಗಳ ಪರಿಣಾಮಕಾರಿತ್ವಕ್ಕೆ ಸಂಬಂಧಿಸಿದಂತೆ "ಅನುಬಂಧ-ಬಿ" ಹಾಗೂ "ಅನುಬಂಧ- ಸಿ"ಮೂಲಕ ನಾವು ನೀಡಿರುವ ಪ್ರತ್ಯೇಕ ವರದಿಯನ್ನು ಉಲ್ಲೇಖಿಸುವುದು. ನಮ್ಮ ವರದಿಯು ಹಣಕಾಸು ವರದಿಯ ಮೇಲೆ ಕಂಪನಿಯ ಆಂತರಿಕ ಹಣಕಾಸು ನಿಯಂತ್ರಣಗಳ ಸಮರ್ಪಕತೆ ಹಾಗೂ ಪರಿಣಾಮಕಾರಿತ್ವದ ಮೇಲೆ ಒಂದು ಮಾರ್ಪಾಡು ಮಾಡದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ.

(ಜಿ) ತಿದ್ದುಪಡಿಯಾಗಿರುವಂತಹ ರೀತಿಯಲ್ಲಿ ಅಧಿನಿಯಮದ ಪರಿಚ್ಛೇದ 197(16)ರ ಅಗತ್ಯತೆಗಳ ಅನುಸಾರ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಬೇಕಾದ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ

ಹಾಗೂ ನಮಗೆ ದೊರೆತಿರುವ ಅತ್ಯುತ್ತಮ ಅರಿವಿನಂತೆ ಹಾಗೂ ನಮಗೆ ನೀಡಲಾದ ವಿವರಣೆಗಳಂತೆ, ಕಂಪನಿಯು ಪ್ರಸಕ್ತ ಸಾಲಿನಲ್ಲಿ ತನ್ನ ನಿರ್ದೇಶಕರುಗಳಿಗೆ ನೀಡಿರುವಂತಹ ಸಂಭಾವನೆಯು ಅಧಿನಿಯಮದ ಪರಿಚ್ಛೇದ 197ರ ಅನುವುಗಳ ಅನುಸಾರವೇ ಆಗಿದ್ದಿತು; ಹಾಗೂ

(ಎಜ್) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರುಗಳು) ನಿಯಮಗಳು, 2014ರ ನಿಯಮ 11ರ ಅನುಸಾರ ಲೆಕ್ಕಪರಿಶೋಧಕರುಗಳ ವರದಿಯಲ್ಲಿ ಸೇರಿಸಬೇಕಾದ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮ್ಮ ಅತ್ಯುತ್ತಮ ಅರಿವಿನಂತೆ ಹಾಗೂ ನಮಗೆ ನೀಡಲಾಗಿರುವ ವಿವರಣೆಗಳಂತೆ

ಎ.ಕಂಪನಿಯು ಹಣಕಾಸಿನ ಸ್ಥಿತಿಗತಿಗಳ ಮೇಲೆ ಪರಿಣಾಮ ಬೀರಬಹುದಾದಂತಹ ಯಾವುದೇ ಬಾಕಿ ವಿವಾದಗಳನ್ನು ಹೊಂದಿರುವುದಿಲ್ಲ.

ಬಿ. ಕಂಪನಿಯು, ನಿರೀಕ್ಷಿಸಬಹುದಾದ ನಷ್ಟಗಳನ್ನು ಒಳಗೊಂಡಿರುವಂತಹ ವಿಷಯಕಗಳು ಇರಬಹುದಾದ ಜನ್ಯ ಗುತ್ತಿಗೆಗಳೂ ಸೇರಿದಂತೆ ಯಾವುದೇ ದೀರ್ಘಾವಧಿ ಗುತ್ತಿಗೆಗಳನ್ನು ಹೊಂದಿರುವುದಿಲ್ಲ.

ಸಿ. ಪ್ರಸಕ್ತ ಸಾಲಿನಲ್ಲಿ, ಹೂಡಿಕೆದಾರರುಗಳ ಶೈಕ್ಷಣಿಕ ಮತ್ತು ಸಂರಕ್ಷಣಾ ನಿಧಿಗೆ ವರ್ಗಾಯಿಸುವ ಅಗತ್ಯತೆಯಿದ್ದಂತಹ ಯಾವುದೇ ಮೊತ್ತವೂ ಇರಲಿಲ್ಲ.

i) ತನ್ನ ಅತ್ಯುತ್ತಮ ಅರಿವಿನಂತೆ ಹಾಗೂ ಅದು ವಿಶ್ವಾಸವನ್ನು ಹೊಂದಿರುವಂತೆ, ಸಾಲ ಪಡೆದಿರುವ ಹಣಕಾಸಿನಿಂದಾಗಲೀ ಅಥವಾ ಷೇರು ಪ್ರೀಮಿಯಂನಿಂದಾಗಲೀ ಅಥವಾ ಇತರೆ ಯಾವುದೇ ಮೂಲಗಳಿಂದಾಗಲೀ ಅಥವಾ ಸರಕುಗಳು/ವಸ್ತುಗಳ ರೂಪದಿಂದಾಗಲೀ ಯಾವುದೇ ಹಣಕಾಸನ್ನು (ವೈಯಕ್ತಿಕವಾಗಿ ಅಥವಾ ಒಟ್ಟಾರೆಯಾಗಿ ವಿಷಯಕವಾಗಿರುವಂತಹ) ಕಂಪನಿಯು (“ಮಧ್ಯಸ್ಥಿಕೆದಾರರುಗಳು)”/ಅಸ್ತಿತ್ವವೂ ಲಿಖಿತ ರೂಪದಲ್ಲಿ ದಾಖಲಿಸುವ ಮೂಲಕ ಅಥವಾ ಅನ್ಯ ರೀತಿಯಲ್ಲಿ , ಮಧ್ಯಸ್ಥಿಕೆದಾರರು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಾಲ ನೀಡುವ ಪರಸ್ಪರ ತಿಳಿವಳಿಕೆಪತ್ರದೊಂದಿಗೆ ಯಾವುದೇ ರೀತಿಯಲ್ಲಿ ಗುರುತಿಸಲಾಗಿರುವಂತಹ ಯಾವುದೇ ವ್ಯಕ್ತಿಗೆ ಅಥವಾ ಅಸ್ತಿತ್ವಕ್ಕೆ/ಸಂಸ್ಥೆಗೆ ಯಾವುದೇ ರೀತಿಯಲ್ಲಿಯೂ ಕಂಪನಿಯಿಂದ ಅಥವಾ ಕಂಪನಿಯ ಪರವಾಗಿ (“ಅಂತಿಮವಾಗಿ ಫಲಾನುಭವಿಗಳಾಗಿರುವವರು”) ಮುಂಗಡವಾಗಿ ಅಥವಾ ಸಾಲವನ್ನಾಗಿ ನೀಡಿರುವುದಿಲ್ಲ ಯಾವುದೇ ಖಾತರಿ, ಭದ್ರತೆ ಅಥವಾ ಅಂತಹ ಇತರವುಗಳನ್ನು ಅಂತಿಮ ಫಲಾನುಭವಿಗಳ ಪ್ರವಾಗಿ ನೀಡಿರುವುದಿಲ್ಲ ಎಂಬುದಾಗಿ ವ್ಯವಸ್ಥಾಪನೆಯು/ಆಡಳಿತ ಮಂಡಳಿಯು ತಿಳಿಸಿರುವುದುಎಂಬುದಾಗಿ ವ್ಯವಸ್ಥಾಪನೆಯು ತಿಳಿಸಿರುವುದು

ii) ತನ್ನ ಅತ್ಯುತ್ತಮ ಅರಿವಿನಂತೆ ಹಾಗೂ ಅದು ವಿಶ್ವಾಸವನ್ನು ಹೊಂದಿರುವಂತೆ, ಯಾವುದೇ ಹಣಕಾಸನ್ನು (ವೈಯಕ್ತಿಕವಾಗಿ ಅಥವಾ ಒಟ್ಟಾರೆಯಾಗಿ ವಿಷಯಕವಾಗಿರುವಂತಹ) ಕಂಪನಿಯು ವಿದೇಶಿ ಸಂಸ್ಥೆ/ಅಸ್ತಿತ್ವ (“ಹಣಕಾಸನ್ನು ಒದಗಿಸುವ ತಂಡಗಳು”) ಲಿಖಿತ ರೂಪದಲ್ಲಿ ದಾಖಲಿಸುವ ಮೂಲಕ ಅಥವಾ ಅನ್ಯ ರೀತಿಯಲ್ಲಿ , ಮಧ್ಯಸ್ಥಿಕೆದಾರರು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಾಲ ನೀಡುವ ಪರಸ್ಪರ ತಿಳಿವಳಿಕೆಪತ್ರದೊಂದಿಗೆ ಯಾವುದೇ ರೀತಿಯಲ್ಲಿ ಗುರುತಿಸಲಾಗಿರುವಂತಹ ಯಾವುದೇ ವ್ಯಕ್ತಿಯಿಂದ ಅಥವಾ ಅಸ್ತಿತ್ವ/ಸಂಸ್ಥೆಯಿಂದ ಯಾವುದೇ ರೀತಿಯಲ್ಲಿಯೂ ಮುಂಗಡಗಳನ್ನು ಅಥವಾ ಸಾಲಗಳನ್ನು ಪಡೆದಿರುವುದಿಲ್ಲ ಯಾವುದೇ ಖಾತರಿ, ಭದ್ರತೆ ಅಥವಾ ಅಂತಹ ಇತರವುಗಳನ್ನು ಅಂತಿಮ ಫಲಾನುಭವಿಗಳ ಪರವಾಗಿ ಸ್ವೀಕರಿಸಿರುವುದಿಲ್ಲ ಎಂಬುದಾಗಿ ವ್ಯವಸ್ಥಾಪನೆಯು/ಆಡಳಿತ ಮಂಡಳಿಯು ತಿಳಿಸಿರುವುದು.

iii) ಸಂದರ್ಭಗಳಿಗೆ ನ್ಯಾಯಸಮ್ಮತವಾಗಿರುವುದು ಹಾಗೂ ಸೂಕ್ತವಾಗಿರುವುದು ಎಂಬುದಾಗಿ ಪರಿಗಣಿಸಲ್ಪಟ್ಟಂತಹ ಲೆಕ್ಕಪರಿಶೋಧನಾ ಕಾರ್ಯವಿಧಾನಗಳ ಆಧಾರದ ಮೇರೆಗೆ, ಮೇಲಿನ (ಎ) ಮತ್ತು (ಬಿ) ಅಡಿಯಲ್ಲಿ ನೀಡಲಾಗಿರುವಂತೆ ನಿಯಮ 11(ಇ) ಅಡಿಯಲ್ಲಿನ ಉಪ-ಷರತ್ತು (i) ಮತ್ತು (ii)ರ ಅಡಿಯಲ್ಲಿನ ಹೇಳಿಕೆಗಳು ಯಾವುದೇ ವಿಷಯಿಕ ತಪ್ಪು ಹೇಳಿಕೆಗಳನ್ನು ಒಳಗೊಂಡಿರುವವು ಎಂಬುದನ್ನು ನಂಬುವ ಸಲುವಾಗಿ ಯಾವುದೇ ಕಾರಣಗಳು ನಮ್ಮ ದೃಷ್ಟಿಗೆ ಬರಲಿಲ್ಲ.

iv) ಕಂಪನಿಯು ಪ್ರಸಕ್ತ ಸಾಲಿನಲ್ಲಿ ಯಾವುದೇ ಷೇರು ಲಾಭಾಂಶವನ್ನು ಘೋಷಿಸಿರುವುದಿಲ್ಲ ಅಥವಾ ಪಾವತಿಸಿರುವುದಿಲ್ಲ, ಅದರಂತೆಯೇ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 123ರ ಅಡಿಯಲ್ಲಿನ ಅನುಸರಣಾ ಕ್ರಮಗಳು ಕಂಪನಿಗೆ ಅನ್ವಯಿಗೊಳ್ಳುವುದಿಲ್ಲ.

ಎಫ್ ಎನ್ ಹೊನ್ನಬಿಂಡರಿ ಅಂಡ್ ಕಂಪನಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಎಫ್ ಆರ್‌ಎನ್ : 007341ಎಸ್

-ಸಹಿ ಮಾಡಲಾಗಿದೆ-
ಎಫ್‌ಎನ್ ಹೊನ್ನಬಿಂಡರಿ

ಮಾಲೀಕರು

ಸದಸ್ಯತ್ವ ಸಂಖ್ಯೆ : 205041

ಯುಡಿಐಎನ್ ಸಂಖ್ಯೆ: 22205041AZLOQL4376

ಸ್ಥಳ : ಹುಬ್ಬಳ್ಳಿ
ದಿನಾಂಕ : 12.10.2022

31 ಮಾರ್ಚ್ 2018ಕ್ಕೆ ಅಂತ್ಯಗೊಂಡಂತಹ ಸಾಲಿಗೆ ಲೆಕ್ಕಪರಿಶೋಧಕರುಗಳ ಪರಿಷ್ಕೃತ ವರದಿಗೆ ಅನುಬಂಧ–ಎ

ಹುಬ್ಬಳ್ಳಿ ಧಾರವಾಡ ಸ್ಮಾರ್ಟ್ ಸಿಟಿ ನಿಯಮಿತದ ಸದಸ್ಯರುಗಳಿಗೆ ನಮ್ಮ ಅದೇ ದಿನಾಂಕದ ಸ್ವತಂತ್ರ ಲೆಕ್ಕಪರಿಶೋಧಕರ ಪರಿಷ್ಕೃತ ವರದಿಗೆ ಅನುಬಂಧ "ಎ"

ಕಂಪನಿಯ ಹಣಕಾಸು ತ:ಖ್ತೆಗಳ ಮೇಲಿನ ಒಂದು ಸತ್ಯಾಸತ್ಯತೆಯಿಂದ ಕೂಡಿದ ಮತ್ತು ನ್ಯಾಯಸಮ್ಮತ ಅಭಿಪ್ರಾಯವನ್ನು ವ್ಯಕ್ತಪಡಿಸುವಂತಹ ವರದಿಯ ಉದ್ದೇಶಕ್ಕಾಗಿ ಕಾರ್ಯನಿರ್ವಹಿಸಲಾದಂತಹ ಲೆಕ್ಕಪರಿಶೋಧನಾ ಕಾರ್ಯವಿಧಾನಗಳ ಆಧಾರ್ದ ಮೇರೆಗೆ ಹಾಗೂ ನಮಗೆ ಒದಗಿಸಲಾದಂತಹ ಮಾಹಿತಿ ಹಾಗೂ ನಮಗೆ ನೀಡಲಾದಂತಹ ವಿವರಣೆಗಳ ಆಧಾರದ ಮೇರೆಗೆ ಹಾಗೂ ನಮ್ಮ ಲೆಕ್ಕಪರಿಶೋಧನೆಯ ಸಾಮಾನ್ಯ ಅವಧಿಯಲ್ಲಿ ಲೆಕ್ಕಪತ್ರಗಳ ಪುಸ್ತಕಗಳು ಹಾಗೂ ಇತರೆ ದಾಖಲೆಗಳ ನಮ್ಮ ಪರಿಶೀಲನೆಯ ಆಧಾರದ ಮೇರೆಗೆ, ನಾವು ಈ ಕೆಳಗಿನ ಅಂಶಗಳನ್ನು ವರದಿ ಮಾಡುತ್ತಿರುವೆವು :

1) (ಎ) (i) ಕಂಪನಿಯು ಸ್ಥಿರಾಸ್ತಿಗಳ ಪರಿಮಾಣಾತ್ಮಕ ವಿವರಗಳನ್ನು ಹಾಗೂ ಭೂಮಿ, ಕಟ್ಟಡ ಮುಂತಾದ ಆಸ್ತಿಗಳು, ಸ್ಥಾವರ, ಯಂತ್ರಗಳು ಹಾಗೂ ಉಪಕರಣಗಳು ಇರುವಂತಹ ಸ್ಥಳಗಳ ವಿವರಗಳನ್ನು ಒಳಗೊಂಡಂತೆ ಸಂಪೂರ್ಣ ವಿವರಗಳನ್ನು ತೋರಿಸುವ ಸಮರ್ಪಕ ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ.

(ಬಿ) ಕಂಪನಿಯು ಅಗೋಚರ/ಸ್ಪರ್ಶಿಸಲಾಗದ ಆಸ್ತಿಗಳ ಸಂಪೂರ್ಣ ವಿವರಗಳನ್ನು ಒಳಗೊಂಡಂತೆ ಸಮರ್ಪಕ ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ.

(ಬಿ) ಭೂಮಿ, ಕಟ್ಟಡ ಮುಂತಾದ ಆಸ್ತಿಗಳು, ಸ್ಥಾವರ, ಯಂತ್ರಗಳು ಹಾಗೂ ಉಪಕರಣಗಳನ್ನು ಕಂಪನಿಯು ಪ್ರಸ್ತಕ್ತ ಸಾಲಿನಲ್ಲಿ ಒಂದು ನ್ಯಾಯಸಮ್ಮತ ಅಂತರಗಳಲ್ಲಿ ಭೌತಿಕವಾಗಿ ಪರಿಶೀಲಿಸಿರುವುದು ಹಾಗೂ ಅಂತಹ ಪರಿಶೀಲನೆಯ ವೇಳೆಯಲ್ಲಿ ಯಾವುದೇ ವಿಷಯಕ ವ್ಯತ್ಯಯಗಳು ಕಂಡುಬಂದಿರುವುದಿಲ್ಲ ಎಂಬುದನ್ನು ತೋರಿಸುವ ಸಲುವಾಗಿ ಯಾವುದೇ ದಾಖಲೆಗಳು ಇರುವುದಿಲ್ಲ.

(ಸಿ) ನಮಗೆ ಒದಗಿಸಲಾದಂತಹ ಮಾಹಿತಿಯಂತೆ ಹಾಗೂ ನಮಗೆ ನೀಡಲಾದ ವಿವರಣೆಗಳಂತೆ, ಯಾವುದೇ ಸ್ಥಿರಾಸ್ತಿಗಳನ್ನು (ಕಂಪನಿಯು ಗುತ್ತಿಗೆದಾರನಾಗಿರುವ ಹಾಗೂ ಗುತ್ತಿಗೆ ಒಡಂಬಡಿಕೆಗಳನ್ನು ಗುತ್ತಿಗೆದಾರರ ಪರವಾಗಿ ತಕ್ಕುದಾದ ರೀತಿಯಲ್ಲಿ ಮಾಡಿಕೊಳ್ಳಲಾಗಿರುವ ಆಸ್ತಿಗಳನ್ನು ಹೊರತುಪಡಿಸಿದಂತೆ) ಕಂಪನಿಯ ಹೆಸರಿನಲ್ಲಿ ಹೊಂದಿರುವುದಿಲ್ಲ.

(ಡಿ) ಕಂಪನಿಯು ತನ್ನ ಭೂಮಿ, ಕಟ್ಟಡ ಮುಂತಾದ ಆಸ್ತಿಗಳು, ಸ್ಥಾವರ, ಯಂತ್ರಗಳು ಹಾಗೂ ಉಪಕರಣಗಳನ್ನು (ಉಪಯೋಗಿಸಿಕೊಳ್ಳಲು ಹಕ್ಕನ್ನು ಹೊಂದಿರುವಂತಹ ಆಸ್ತಿಗಳನ್ನು ಒಳಗೊಂಡಂತೆ) ಮರು–ಮೌಲ್ಯಮಾಪನ ಮಾಡಿರುವುದಿಲ್ಲ.

(ಇ) ನಮಗೆ ಒದಗಿಸಲಾದಂತಹ ಮಾಹಿತಿಯಂತೆ ಹಾಗೂ ನಮಗೆ ನೀಡಲಾದ ವಿವರಣೆಗಳಂತೆ, ಬೇನಾಮಿ ವ್ಯವಹಾರಗಳ (ಪ್ರತಿಬಂಧನೆ) ಅಧಿನಿಯಮ, 1988 (1988ರ 45)) ಹಾಗೂ ಅವುಗಳ ಅಡಿಯಲ್ಲಿ

ರೂಪಿಸಲಾಗಿರುವಂತಹ ನಿಯಮಗಳ ಅಡಿಯಲ್ಲಿ ಬೇನಾಮಿ ಆಸ್ತಿಗಳನ್ನು ಹೊಂದಿರುವುದಕ್ಕಾಗಿ 31 ಮಾರ್ಚ್ 2022ರಲ್ಲಿದ್ದಂತೆ ಯಾವುದೇ ವಿಚಾರಣಾ ನಡೆವಳಿಗಳನ್ನು ಕೈಗೊಂಡಿರಲಿಲ್ಲ ಅಥವಾ ಅಂತಹವುಗಳು ಬಾಕಿಯಿರಲಿಲ್ಲ.

2. (ಎ) ಕಂಪನಿ ಯಾವುದೇ ದಾಸ್ತಾನು ಹೊಂದಿಲ್ಲದ ಕಾರಣ ಈ ಷರತ್ತು ಅನ್ವಯಿಸುವುದಿಲ್ಲ.

3. ಪ್ರಸಕ್ತ ಸಾಲಿನಲ್ಲಿ ಕಂಪನಿಯು ಯಾವುದೇ ಹೂಡಿಕೆಗಳನ್ನು ಮಾಡಿರುವುದಿಲ್ಲ, ಯಾವುದೇ ಖಾತರಿಗಳನ್ನು ಅಥವಾ ಭದ್ರತೆಗಳನ್ನು ನೀಡಿರುವುದಿಲ್ಲ ಅಥವಾ ಕಂಪನಿಗಳಿಗೆ, ಸಂಸ್ಥೆಗಳಿಗೆ, ನಿಯಮಿತ ಜವಾಬ್ದಾರಿ ಪಾಲುದಾರಿಕೆ ಸಂಸ್ಥೆಗಳಿಗೆ ಅಥವಾ ಇತರೆ ಯಾವುದೇ ತಂಡಗಳಿಗೆ ಭದ್ರತೆಯಿಂದ ಕೂಡಿದ ಅಥವಾ ಭದ್ರತೆಯಿಂದ ಕೂಡಿರದ ಸಾಲಗಳನ್ನು ನೀಡಿರುವುದಿಲ್ಲ.

4. ನಮಗೆ ಒದಗಿಸಲಾದಂತಹ ಮಾಹಿತಿಯಂತೆ ಹಾಗೂ ನೀಡಲಾದಂತಹ ವಿವರಣೆಗಳಂತೆ, ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 185 ಮತ್ತು 186ರ ಅನುವುಗಳನ್ನು ಅನುಸರಿಸಬೇಕಾದಂತಹ ಯಾವುದೇ ಸಾಲಗಳನ್ನು, ಖಾತರಿಗಳನ್ನು ಅಥವಾ ಭದ್ರತೆಗಳನ್ನು ನೀಡಿರುವುದಿಲ್ಲ.

5. ಕಂಪನಿಯು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ಅಡಿಯಲ್ಲಿ ಹಾಗೂ ಅನ್ವಯಿಗೊಳ್ಳುವೆಡೆಗಳಲ್ಲಿ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದಗಳು 73ರಿಂದ 76ರ ಅನುವುಗಳು ಹಾಗೂ ಅವುಗಳ ಅಡಿಯಲ್ಲಿ ರೂಪಿಸಲಾಗಿರುವಂತಹ ನಿಯಮಗಳು ಅಥವಾ ಯಾವುದೇ ಇತರೆ ಸಂಬಂಧಿತ ಅನುವುಗಳನ್ನು ಆಕರ್ಷಿಸುವಂತಹ ಠೇವಣಿಗಳು ಅಥವಾ ಮೊತ್ತಗಳನ್ನು ಸ್ವೀಕರಿಸಿರುವುದಿಲ್ಲ. ಅದರಂತೆಯೇ ಆದೇಶದ ಷರತ್ತು 3(v)ರ ಅನುವುಗಳು ಅನ್ವಯಿಗೊಳ್ಳುವುದಿಲ್ಲ.

6. ನಮ್ಮ ಅತ್ಯುತ್ತಮ ಅರಿವಿನಂತೆ ಹಾಗೂ ನಾವು ಹೊಂದಿರುವ ವಿಶ್ವಾಸದಂತೆ, ಕೇಂದ್ರ ಸರ್ಕಾರವು ಕಂಪನಿಯ ಉತ್ಪನ್ನಗಳು/ಸೇವೆಗಳಿಗೆ ಸಂಬಂಧಿಸಿದಂತೆ, ಅಧಿನಿಯಮದ ಪರಿಚ್ಛೇದ 148ರ ಉಪ-ಪರಿಚ್ಛೇದ (1)ರ ಅಡಿಯಲ್ಲಿ ವೆಚ್ಚಮೌಲ್ಯ ದಾಖಲೆಗಳ ನಿರ್ವಹಣೆಯನ್ನು ನಿರ್ದಿಷ್ಟಪಡಿಸಿರುವುದಿಲ್ಲ. ಅದರಂತೆಯೇ, ಆದೇಶದ ಷರತ್ತು 3(vi)ರ ಅನುವುಗಳು ಅನ್ವಯಿಗೊಳ್ಳುವುದಿಲ್ಲ.

7. (ಎ) ಕಂಪನಿಯು ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ, ಭವಿಷ್ಯ ನಿಧಿ, ಉದ್ಯೋಗಿಗಳ ರಾಜ್ಯ ವಿಮೆ, ಮಾರಾಟಗಳ ಮೇಲಿನ ತೆರಿಗೆ, ಸೇವಾ ತೆರಿಗೆ, ಸೀಮಾ ಸುಂಕ, ಅಬಕಾರಿ ಸುಂಕ, ಮೌಲ್ಯ ವರ್ಧಿತ ತೆರಿಗೆ, ಉಪ-ಕರ/ಸೆಸ್, ಇವುಗಳನ್ನು ಒಳಗೊಂಡಂತೆ ಅವಿವಾಧಿತ ಶಾಸನಬದ್ಧ ಬಾಕಿಗಳನ್ನು ಹಾಗೂ ಅನ್ವಯಿಗೊಳ್ಳುವಂತಹ ಇತರೆ ಯಾವುದೇ ಶಾಸನಬದ್ಧ ಬಾಕಿಗಳನ್ನು ಪಾವತಿಸುವಲ್ಲಿ ನಿಯತವಾಗಿದ್ದಿತು. ಮುಂದುವರೆದು, ಅವುಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾದ ಅವಿವಾಧಿತ ಮೊತ್ತಗಳು ಅವುಗಳನ್ನು ಪಾವತಿಸಲು ಇದ್ದಂತಹ ನಿಗದಿತ ದಿನಾಂಕದಿಂದ ಆರು ತಿಂಗಳುಗಳನ್ನು ಮೀರಿದ ಅವಧಿಗೆ ಬಾಕಿಯಿರಲಿಲ್ಲ. (ಬಿ) ಸೇವಾ ತೆರಿಗೆ, ಸೀಮಾ ಸುಂಕ, ಅಬಕಾರಿ ಸುಂಕ, ಮೌಲ್ಯ ವರ್ಧಿತ ತೆರಿಗೆ, ಉಪ-ಕರ/ಸೆಸ್, ಇವುಗಳನ್ನು ಒಳಗೊಂಡಂತೆ ಅವಿವಾಧಿತ ಶಾಸನಬದ್ಧ ಬಾಕಿಗಳನ್ನು ಹಾಗೂ ಅನ್ವಯಿಗೊಳ್ಳುವಂತಹ ಇತರೆ ಯಾವುದೇ ಶಾಸನಬದ್ಧ ಬಾಕಿಗಳಿಗೆ ಸಂಬಂಧಿಸಿದಂತೆ

ಯಾವುದೇ ವಿವಾದಗಳ ಕಾರಣ ಸಂಬಂಧಿತ ಅಧಿಕಾರಿಗಳಿಗೆ/ಇಲಾಖೆಗೆ ಪಾವತಿಸದೇ ಇರುವಂತಹ ಬಾಕಿಗಳು ಇರಲಿಲ್ಲ.

8. ನಮಗೆ ಒದಗಿಸಲಾದ ಮಾಹಿತಿಯಂತೆ ಮತ್ತು ನೀಡಲಾದ ವಿವರಣೆಗಳಂತೆ, ಹಾಗೂ ನಾವು ಕಂಪನಿಯ ದಾಖಲೆಗಳನ್ನು ಪರಿಶೀಲಿಸಿರುವಂತೆ, ಆದಾಯ ತೆರಿಗೆ ಅಧಿನಿಯಮ, 1961ರ ಅಡಿಯಲ್ಲಿ ತೆರಿಗೆ ನಿರ್ಧಾರಣೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಆದಾಯ ಎಂಬುದಾಗಿ ಬಿಟ್ಟುಕೊಡಲಾಗಿರುವಂತಹ ಅಥವಾ ಬಹಿರಂಗಪಡಿಸಲಾಗಿರುವಂತಹ ಈ ಹಿಂದಿನ ದಾಖಲೆಗಳಲ್ಲಿ ನಮೂದಿಸದಿರುವುದಕ್ಕೆ ಸಂಬಂಧಿತ ಯಾವುದೇ ವ್ಯವಹಾರಗಳೂ ಇರಲಿಲ್ಲ.

9. ನಮ್ಮ ಅಭಿಪ್ರಾಯದಲ್ಲಿ, ಕಂಪನಿಯು ಯಾವುದೇ ಸಾಲಗಳನ್ನು ಪಡೆದುಕೊಂಡಿರುವುದಿಲ್ಲ, ಆದ್ದರಿಂದ ಪ್ರಸಕ್ತ ಸಾಲಿನಲ್ಲಿ ಯಾವುದೇ ಸಾಲದಾತರಿಗೆ ಸಾಲಗಳು ಅಥವಾ ಇತರೆ ಋಣಗಳು ಅಥವಾ ಅವುಗಳ ಮೇಲಿನ ಬಡ್ಡಿ ಪಾವತಿ ಮಾಡುವಲ್ಲಿ ತಪ್ಪಿತಸ್ತಗೊಂಡಿರುವುದಿಲ್ಲ; (ಬಿ) ಯಾವುದೇ ಬ್ಯಾಂಕು ಅಥವಾ ಹಣಕಾಸು ಸಂಸ್ಥೆ ಅಥವಾ ಯಾವುದೇ ಸಾಲದಾತರು ಕಂಪನಿಯನ್ನು ಸಾಲ ಮರುಪಾವತಿಯಲ್ಲಿ ಉದ್ದೇಶಪೂರ್ವಕ ತಪ್ಪಿತಸ್ತ ಎಂಬುದಾಗಿ ಘೋಷಿಸಿರುವುದಿಲ್ಲ, (ಸಿ) ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನಮಗೆ ನೀಡಲಾದ ವಿವರಣೆಗಳಂತೆ, ಯಾವುದೇ ಅವಧಿ ಸಾಲಗಳನ್ನು ಮಂಜೂರು ಮಾಡಲಾಗಿರುವುದಿಲ್ಲ, ಆದ್ದರಿಂದ ಷರತ್ತು ಅನ್ವಯಿಗೊಳ್ಳುವುದಿಲ್ಲ, (ಡಿ) ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನಮಗೆ ನೀಡಲಾದ ವಿವರಣೆಗಳಂತೆ, ಅಲ್ಪಾವಧಿ ಆಧಾರದ ಮೇರೆಗೆ ಪಡೆದುಕೊಳ್ಳಲಾದ ಹಣಕಾಸನ್ನು ದೀರ್ಘಾವಧಿ ಉದ್ದೇಶಗಳಿಗಾಗಿ ಉಪಯೋಗಿಸಿಕೊಂಡಿರುವುದಿಲ್ಲ, (ಇ) ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನಮಗೆ ನೀಡಲಾದ ವಿವರಣೆಗಳಂತೆ, ಕಂಪನಿಯು ತನ್ನ ಉಪ-ಕಂಪನಿಗಳು, ಸಹ-ಕಂಪನಿಗಳು ಅಥವಾ ಜಂಟಿ ಸಾಹಸೋದ್ಯಮ ಕಂಪನಿಗಳ ಬದ್ಧತೆಗಳನ್ನು ಪೂರೈಸುವ ಸಲುವಾಗಿ ಯಾವುದೇ ಸಂಸ್ಥೆಯಿಂದ ಅಥವಾ ವ್ಯಕ್ತಿಯಿಂದ ಯಾವುದೇ ಹಣಕಾಸನ್ನು ಪಡೆದುಕೊಂಡಿರುವುದಿಲ್ಲ, (ಎಫ್) ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನಮಗೆ ನೀಡಲಾದ ವಿವರಣೆಗಳಂತೆ, ಕಂಪನಿಯು ಪ್ರಸಕ್ತ ಸಾಲಿನಲ್ಲಿ ತನ್ನ ಉಪ-ಕಂಪನಿಗಳು, ಸಹ-ಕಂಪನಿಗಳು ಅಥವಾ ಜಂಟಿ ಸಾಹಸೋದ್ಯಮ ಕಂಪನಿಗಳಲ್ಲಿ ಹೊಂದಿರುವ ತನ್ನ ಭದ್ರತೆಗಳನ್ನು ಅಡಾ ಇಡುವ ಮೂಲಕ ಸಾಲಗಳನ್ನು ಪಡೆದುಕೊಂಡಿರುವುದಿಲ್ಲ.

10. (ಎ) ಕಂಪನಿಯು ಪ್ರಸಕ್ತ ಸಾಲಿನಲ್ಲಿ ಸಾರ್ವಜನಿಕರಿಗೆ ಪ್ರಾರಂಭಿಕ ಷೇರು ನೀಡಿಕೆ ಅಥವಾ ಹೆಚ್ಚುವರಿ ಷೇರು ನೀಡಿಕೆ (ಋಣ ಸಾಧನಗಳೂ ಸೇರಿದಂತೆ) ಮೂಲಕ ಯಾವುದೇ ಹಣಕಾಸನ್ನು ಪಡೆದುಕೊಂಡಿರುವುದಿಲ್ಲ; (ಬಿ)ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನಮಗೆ ನೀಡಲಾದ ವಿವರಣೆಗಳಂತೆ, ಕಂಪನಿಯು ಷೇರುಗಳ ಯಾವುದೇ ಆದ್ಯತೆಯ ಅಥವಾ ಷೇರುಗಳ ಖಾಸಗಿ ಹಂಚಿಕೆಯನ್ನು ಅಥವಾ ಪರಿವರ್ತಿಸಬಹುದಾದ ಡಿಬೆಂಚರುಗಳನ್ನು (ಸಂಪೂರ್ಣವಾಗಿ, ಭಾಗಶ:ವಾಗಿ ಅಥವಾ ಆಯ್ಕೆಯ ಮೂಲಕ ಪರಿವರ್ತಿಸಬಹುದಾದ) ನೀಡಿರುವುದಿಲ್ಲ.

11. (ಎ) ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನಮಗೆ ನೀಡಲಾದ ವಿವರಣೆಗಳಂತೆ, ಪ್ರಸಕ್ತ ಸಾಲಿನಲ್ಲಿ ಕಂಪನಿಯು ಯಾವುದೇ ವಂಚನೆಯನ್ನು ಮಾಡಿರುವುದಿಲ್ಲ ಅಥವಾ ಕಂಪನಿಗೆ ಯಾವುದೇ ವಂಚನೆಯು ಆಗಿರುವುದಿಲ್ಲ, (ಬಿ) ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನಮಗೆ ನೀಡಲಾದ ವಿವರಣೆಗಳಂತೆ, ಕಂಪನಿಗಳ ಅಧಿನಿಯಮದ ಪರಿಚ್ಛೇದ 143 ಉಪ-ಪರಿಚ್ಛೇದ (12)ರ ಅಡಿಯಲ್ಲಿ ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರುಗಳು) ನಿಯಮಗಳು, 2014ರ ನಿಯಮ 13ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ನಮೂನೆ

ಎಡಿಟಿ-4ರಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ; (ಸಿ) ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನಮಗೆ ನೀಡಲಾದ ವಿವರಣೆಗಳಂತೆ, ಕಂಪನಿಯು ಪ್ರಸಕ್ತ ಸಾಲಿನಲ್ಲಿ ಯಾವುದೇ ವಿಸಲ್ ಬ್ಲೋಯರ್ ದೂರುಗಳನ್ನು ಸ್ವೀಕರಿಸಿರುವುದಿಲ್ಲ.

12. ಕಂಪನಿಯು ಒಂದು ನಿಧಿ ಕಂಪನಿ ಆಗಿರುವುದಿಲ್ಲ. ಅದರಂತೆಯೇ, ಆದೇಶದ ಕಂಡಿಕೆ 3ರ ಷರತ್ತು (xii) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

13. ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನಮಗೆ ನೀಡಲಾದ ವಿವರಣೆಗಳಂತೆ ಸಂಬಂಧಿತ ತಂಡಗಳೊಂದಿಗಿನ ಎಲ್ಲಾ ವ್ಯವಹಾರಗಳು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 177 ಹಾಗೂ ಪರಿಚ್ಛೇದ 188ರ ಅನುಸಾರವೇ ಆಗಿರುತ್ತದೆ ಹಾಗೂ ವಿವರಗಳನ್ನು ಅನ್ವಯಗೊಳ್ಳುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅಗತ್ಯತೆಯಂತೆ ಹಣಕಾಸು ತ:ಖ್ತೆಗಳಲ್ಲಿ ಬಹಿರಂಗಪಡಿಸಲಾಗಿರುವುದು.

14. ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನಮಗೆ ನೀಡಲಾದ ವಿವರಣೆಗಳಂತೆನಮಗೆ ಒದಗಿಸಲಾದ ಮಾಹಿತಿ ಹಾಗೂ ವಿವರಣೆಗಳ ಆಧಾರದ ಮೇರೆಗೆ ಹಾಗೂ ನಮ್ಮ ಅಭಿಪ್ರಾಯದಲ್ಲಿ ಕಂಪನಿಯು ತನ್ನ ವ್ಯವಹಾರದ ಗಾತ್ರ ಮತ್ತು ಸ್ವರೂಪಕ್ಕೆ ಅನುಗುಣವಾದಂತಹ ಆಂತರಿಕ ಲೆಕ್ಕಪರಿಶೋಧನಾ ವ್ಯವಸ್ಥೆಯನ್ನು ಹೊಂದಿರುವುದಿಲ್ಲ. ಪರಿಚ್ಛೇದ 138 ಅನ್ವಯಗೊಳ್ಳುವುದಿಲ್ಲ; (ಬಿ) ಆದ್ದರಿಂದ ಪರಿಗಣಿಸಬೇಕಾದಂತಹ ಆಂತರಿಕ ಲೆಕ್ಕಪರಿಶೋಧನಾ ವರದಿಗಳು ಇರುವುದಿಲ್ಲ.

15. ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನಮಗೆ ನೀಡಲಾದ ವಿವರಣೆಗಳಂತೆ ಕಂಪನಿಯು ತನ್ನ ನಿರ್ದೇಶಕರುಗಳು ಅಥವಾ ಅವರಿಗೆ ಸಂಬಂಧಿಸಿರುವಂತಹ ವ್ಯಕ್ತಿಗಳೊಂದಿಗೆ ನಗದೇತರ ವ್ಯವಹಾರಗಳನ್ನು ಮಾಡಿರುವುದಿಲ್ಲ ಎಂಬ ಅಭಿಪ್ರಾಯವನ್ನು ನಾವು ಹೊಂದಿರುವೆವು, ಅದರಂತೆಯೇ, ಆದೇಶದ ಕಂಡಿಕೆ 3ರ ಷರತ್ತು (xv) ಕಂಪನಿಗೆ ಅನ್ವಯಗೊಳ್ಳುವುದಿಲ್ಲ.

16. ನಮಗೆ ಒದಗಿಸಲಾದ ಮಾಹಿತಿಯಂತೆ, ವ್ಯವಸ್ಥಾಪನೆಯು ನಮಗೆ ನೀಡಲಾದ ವಿವರಣೆಗಳಂತೆ, ಕಂಪನಿಯು ಭಾರತೀಯ ರಿಸರ್ವ್ ಬ್ಯಾಂಕು ಅಧಿನಿಯಮ, 1934ರ ಪರಿಚ್ಛೇದ 45 1ಎ ಅಡಿಯಲ್ಲಿ ನೋಂದಣಿ ಮಾಡಿಸುವ ಅಗತ್ಯತೆಯಿರುವುದಿಲ್ಲ ಹಾಗೂ ಕಂಪನಿಯು ಭಾರತೀಯ ರಿಸರ್ವ್ ಬ್ಯಾಂಕು ಮಾಡಿರುವಂತಹ ನಿಯಂತ್ರಣಗಳಲ್ಲಿ ವಿವರಿಸಿರುವ ರೀತಿಯಲ್ಲಿ ಒಂದು ಪ್ರಮುಖ ಹೂಡಿಕೆ ಕಂಪನಿ ಆಗಿರುವುದಿಲ್ಲ ಎಂಬ ಅಭಿಪ್ರಾಯವನ್ನು ನಾವು ಹೊಂದಿರುವೆವು, ಅದರಂತೆಯೇ, ಆದೇಶದ ಷರತ್ತು 3(xvi)ರ ಅನುವುಗಳು ಅನ್ವಯಗೊಳ್ಳುವುದಿಲ್ಲ.

17. ನಮಗೆ ಒದಗಿಸಲಾದ ಮಾಹಿತಿಯಂತೆ, ವ್ಯವಸ್ಥಾಪನೆಯು ನಮಗೆ ನೀಡಲಾದ ವಿವರಣೆಗಳಂತೆ ಹಾಗೂ ನಾವು ನಡೆಸಲಾದಂತಹ ಲೆಕ್ಕಪರಿಶೋಧನಾ ಕಾರ್ಯವಿಧಾನಗಳ ಆಧಾರದ ಮೇರೆಗೆ, ಕಂಪನಿಯು ಪ್ರಸಕ್ತ ಹಣಕಾಸು ಸಾಲಿನಲ್ಲಿ ಹಾಗೂ ತತ್‌ಕ್ಷಣದ ಹಿಂದಿನ ಹಣಕಾಸು ಸಾಲಿನಲ್ಲಿ ಯಾವುದೇ ನಗದು ನಷ್ಟಗಳನ್ನು ಅನುಭವಿಸಿರುವುದಿಲ್ಲ ಎಂಬ ಅಭಿಪ್ರಾಯವನ್ನು ನಾವು ಹೊಂದಿರುವೆವು.

18. ಪ್ರಸಕ್ತ ಸಾಲಿನಲ್ಲಿ ಯಾವುದೇ ಶಾಸನಬದ್ಧ ಲೆಕ್ಕಪರಿಶೋಧಕರುಗಳು ರಾಜೀನಾಮೆ ನೀಡಿರುವುದಿಲ್ಲ ಆದ್ದರಿಂದ, ಆದೇಶದ ಷರತ್ತು 3(xviii)ರ ಅನುವುಗಳು ಅನ್ವಯಿಗೊಳ್ಳುವುದಿಲ್ಲ.

19. ಪರಿಷ್ಕೃತ ಷೆಡ್ಯೂಲು IIIರ ಅನುಸಾರ ಈ ಕೆಳಗಿನ ಅನುಪಾತಗಳನ್ನು ಕಂಪನಿಯ ಹಣಕಾಸು ತ:ಖ್ತೆಗಳಲ್ಲಿ ಅಳವಡಿಸಿಕೊಂಡಿರುವುದಿಲ್ಲ. ಕಂಪನಿಯು ಈ ಕೆಳಗಿನ ಅನುಪಾತಗಳನ್ನು ವರದಿ ಮಾಡುವುದನ್ನು ಬಿಟ್ಟುಬಿಟ್ಟಿರುವುದು. ಅದನ್ನು ನಾವು ಈ ಕೆಳಗಿನಂತೆ ಲೆಕ್ಕಹಾಕಿರುವೆವು:

ಅನುಪಾತಗಳು	ಅಂಶ	ಅಪವರ್ತ್ಯ	ಚಾಲ್ತಿ ವರದಿಯು ವ್ಯಾಪಿಸಿರುವ ಅವಧಿ	ಹಿಂದಿನ ವರದಿಯು ವ್ಯಾಪಿಸಿರುವ ಅವಧಿ	%ವಾರು ಬದಲಾವಣೆ
ಚಾಲ್ತಿ ಅನುಪಾತ	ಚಾಲ್ತಿ ಆಸ್ತಿಗಳು	ಚಾಲ್ತಿ ಜವಾಬ್ದಾರಿಗಳು	87.02	169.71	49%
ಸಾಲ ಈಕ್ವಿಟಿ ಅನುಪಾತ	ಸಾಲ ಬಂಡವಾಳ	ಷೇರುದಾರರ ಈಕ್ವಿಟಿ	–	–	–
ಸಾಲ ಸೇವೆಗಳ ವ್ಯಾಪ್ತಿಯ ಅನುಪಾತ	ಇಬಿಐಟಿಡಿಎ-ಸಿಎಪಿಇಎಕ್ಸ್	ಸಾಲ ಸೇವೆ (ಬಡ್ಡಿ+ಅಸಲು)	–	–	–
ನಿವ್ವಳ ಲಾಭ ಅನುಪಾತ (%)	ನಿವ್ವಳ ಲಾಭ	ಮಾರಾಟಗಳು	–	–	–
ಈಕ್ವಿಟಿ ಅನುಪಾತದ ಮೇಲಿನ ಪ್ರತಿಫಲ	ಪ್ರಸಕ್ತ ಸಾಲಿನ ಗಳಿಕೆಗಳು	ಸರಾಸರಿ ಷೇರುದಾರರ ಈಕ್ವಿಟಿ	0.18	0.16	18%
ಹೂಡಿಕೆ ಮಾಡಾಲಾಗಿರುವ ಬಂಡವಾಳದ ಮೇಲಿನ ಪ್ರತಿಫಲ (%)	ಬಡ್ಡಿ ಪಾವತಿ ಮತ್ತು ತೆರಿಗೆ ಪಾವತಿಗೆ ಮುಂಚಿನ ಗಳಿಕೆಗಳು	ಹೂಡಿಕೆ ಮಾಡಲಾಗಿರುವ ಅನುಪಾತ	0.18	0.16	17%
ಹೂಡಿಕೆಗಳ ಮೇಲಿನ ಪ್ರತಿಫಲ	ನಿವ್ವಳ ಲಾಭ	ಹೂಡಿಕೆ (ಷೇರುದಾರರ ಹಣಕಾಸು)	0.18	0.16	18%
ಸರಕುಸಾಮಗ್ರಿ ವಹಿವಾಟು ಅನುಪಾತ	ಸಿಒಜಿಎಸ್	ಸರಾಸರಿ ಸರಕುಸಾಮಗ್ರಿಗಳ	–	–	–
ವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳ ವಹಿವಾಟು ಅನುಪಾತ	ನಿವ್ವಳ ಮಾರಾಟಗಳು	ವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳ ಅಂತಿಮ ಶಿಲ್ಕು	–	–	–
ವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾದವುಗಳ ವಹಿವಾಟು ಅನುಪಾತ	ಒಟ್ಟಾರೆ ಖರೀದಿಗಳು (ಇಂಧ ವೆಚ್ಚಗಳು + ಇತರೆ ವೆಚ್ಚಗಳು+ಅಂತಿಮ ದಾಸ್ತಾನು ಸರಕುಸಾಮಗ್ರಿ ಪ್ರಾರಂಭಿಕ ಸರಕುಸಾಮಗ್ರಿ	ವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾದವುಗಳ ಅಂತಿಮ ಶಿಲ್ಕು	–	–	–
ನಿವ್ವಳ ಬಂಡವಾಳ ವಹಿವಾಟು ಅನುಪಾತ	ಮಾರಾಟಗಳು	ಕಾರ್ಯೋದ್ಯುಕ್ತ ಬಂಡವಾಳ (ಸಿಎ-ಸಿಎಲ್)	–	–	–

ಹಣಕಾಸು ಅನುಪಾತಗಳು, ಹಣಕಾಸು ಆಸ್ತಿಗಳು ಕಳೆದಿರುವ ಅವಧಿ ಹಾಗೂ ಅವುಗಳಿಂದ ನಿರೀಕ್ಷಿಸಲಾಗಿರುವ ಪ್ರತಿಫಲಗಳನ್ನು ಪಡೆಯಬಹುದಾದ ಅವಧಿ, ಹಣಕಾಸು ತ:ಖ್ತೆಗಳ ಜೊತೆಯಲ್ಲಿ ಇರುವಂತಹ ಇತರೆ ಮಾಹಿತಿ ಹಾಗೂ ನಿರ್ದೇಶಕರುಗಳ ಮಂಡಳಿಯ ಬಗ್ಗೆ ಹಾಗೂ ವ್ಯವಸ್ಥಾಪನೆಯಿಂದ ಮಾಡಿರುವಂತಹ ಪೂರ್ವಭಾವಿ ಯೋಜನೆಗಳ ಬಗ್ಗೆ

ನಮಗಿರುವಂತಹ ಅರಿವು, ಇವುಗಳ ಆಧಾರದ ಮೇರೆಗೆ ಹಾಗೂ ನಮ್ಮ ಊಹಾತ್ಮಕತೆಗಳಿಗೆ ಬೆಂಬಲವಾಗಿರುವಂತಹ ಸಾಕ್ಷಾಧಾರಗಳನ್ನು ನಾವು ಮಾಡಿದ ಪರಿಶೀಲನೆಯ ಆಧಾರದ ಮೇರೆಗೆ, ಆಸ್ತಿ-ಜವಾಬ್ದಾರಿ ತ:ಖ್ತೆಯ ದಿನಾಂಕದಲ್ಲಿದ್ದಂತೆ ಇರುವಂತಹ ತನನ ಜವಾಬ್ದಾರಿಗಳನ್ನು ಪೂರೈಸುವಲ್ಲಿ ಕಂಪನಿಯು ಶಕ್ತವಾಗಿರುವುದಿಲ್ಲ ಎಂಬುದನ್ನು ಸೂಚಿಸುವಂತಹ ಯಾವುದೇ ವಿಷಯಿಕ ಅನಿಶ್ಚಿತತೆಗಳು ಲೆಕ್ಕಪರಿಶೋಧನಾ ವರದಿಯ ದಿನಾಂಕದಲ್ಲಿದ್ದಂತೆ ಇರುವುದಾಗಿ ನಾವು ನಂಬಲು ಕಾರಣವಾಗುವಂತಹ ಯಾವುದೇ ಅಂಶಗಳು ನಮ್ಮ ಗಮನಕ್ಕೆ ಬರಲಿಲ್ಲ. ಆದಾಗ್ಯೂ, ಇದು ಕಂಪನಿಯ ಭವಿಷ್ಯದಲ್ಲಿನ ಕಾರ್ಯಸಾಧ್ಯತೆಯ ಬಗ್ಗೆ ನಮ್ಮ ಭರವಸೆಯಾಗಿರುವುದಿಲ್ಲ ಎಂಬುದಾಗಿಯೂ ನಾವು ಈ ಮೂಲಕ ತಿಳಿಸುತ್ತಿರುವೆವು. ನಮ್ಮ ವರದಿಯು ನಮ್ಮ ಲೆಕ್ಕಪರಿಶೋಧನಾ ವರದಿಯ ದಿನಾಂಕದವರೆಗಿನ ವಾಸ್ತವಾಂಶಗಳ ಮೇರೆಗೆ ಆಗಿರುವುದು ಎಂಬುದಾಗಿಯೂ ನಾವು ಈ ಮೂಲಕ ತಿಳಿಸುತ್ತಿರುವೆವು ಹಾಗೂ ಆಸ್ತಿ-ಜವಾಬ್ದಾರಿ ದಿನಾಂಕದಿಂದ ಒಂದು ವರ್ಷದ ಅವಧಿಯ ಒಳಗೆ ಬರುವಂತಹ ಎಲ್ಲಾ ಜವಾಬ್ದಾರಿಗಳನ್ನೂ ಅವು ಇತ್ಯರ್ಥಪಡಿಸಲು ಬಾಕಿಯಾದಂತೆಲ್ಲಾ ಕಂಪನಿಯು ಇತ್ಯರ್ಥಪಡಿಸುತ್ತಾ ಹೋಗುವುದು ಎಂಬುದಾಗಿ ನಾವು ಭರವಸೆಯನ್ನೂ ನೀಡುವುದಿಲ್ಲ.

20. ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗೆ ಸಂಬಂಧಿಸಿದಂತೆ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 135ರ ಅನುವುಗಳು ಕಂಪನಿಗೆ ಅನ್ವಯಿಗೊಳ್ಳುವುದಿಲ್ಲ. ಆದ್ದರಿಂದ; ಆದೇಶದ ಕಂಡಿಕೆ 3 (xx) ಕಂಪನಿಗೆ ಅನ್ವಯಿಗೊಳ್ಳುವುದಿಲ್ಲ.

21. ಕಂಪನಿಯ ಪ್ರತ್ಯೇಕ ಹಣಕಾಸು ತ:ಖ್ತೆಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಷರತ್ತು (xxi)ರ ಅಡಿಯಲ್ಲಿ ವರದಿಯನ್ನು ಸಲ್ಲಿಸುವುದು ಅನ್ವಯಿಗೊಳ್ಳುವುದಿಲ್ಲ. ಅದರಂತೆಯೇ, ಈ ಷರತ್ತಿಗೆ ಸಂಬಂಧಿಸಿದಂತೆ ಈ ವರದಿಯ ಅಡಿಯಲ್ಲಿ ಯಾವುದೇ ಟೀಕೆಟಿಪ್ಪಣಿಯನ್ನು ಮಾಡಿರುವುದಿಲ್ಲ.

ಎಫ್ ಎನ್ ಹೊನ್ನಬಿಂಡರಿ ಅಂಡ್ ಕಂಪನಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಎಫ್ ಆರ್‌ಎನ್ : 007301ಎಸ್

-ಸಹಿ ಮಾಡಲಾಗಿದೆ-
ಎಫ್‌ಎನ್ ಹೊನ್ನಬಿಂಡರಿ
ಮಾಲೀಕರು
ಸದಸ್ಯತ್ವ ಸಂಖ್ಯೆ 205041
ಯುಡಿಐಎನ್ ಸಂಖ್ಯೆ: 22205041AZLOQL4376

ಸ್ಥಳ : ಹುಬ್ಬಳ್ಳಿ
ದಿನಾಂಕ : 12.10.2022

ಸ್ವತಂತ್ರ ಲೆಕ್ಕಪರಿಶೋಧಕರುಗಳ ಪರಿಷ್ಕೃತ ವರದಿಗೆ ಅನುಬಂಧ–ಬಿ

ಹುಬ್ಬಳ್ಳಿ ಧಾರವಾಡ ಸ್ಮಾರ್ಟ್ ಸಿಟಿ ನಿಯಮಿತದ ಸದಸ್ಯರುಗಳಿಗೆ ನಮ್ಮ ಅದೇ ದಿನಾಂಕದ ವರದಿಯ 'ಇತರೆ ಕಾನೂನಾತ್ಮಕ ಮತ್ತು ನಿಯಂತ್ರಕ ಅಗತ್ಯತೆಗಳ ಅಡಿಯಲ್ಲಿ ಕಂಡಿಕೆ 2(ಎಫ್)ನಲ್ಲಿ ಉಲ್ಲೇಖಿಸಿರುವಂತೆ)

ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143ರ ಉಪ–ಪರಿಚ್ಛೇದ 3ರ ಷರತ್ತು (i)ರ ಅಡಿಯಲ್ಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲಿನ ವರದಿ

"ಹುಬ್ಬಳ್ಳಿ–ಧಾರವಾಡ ಸ್ಮಾರ್ಟ್ ಸಿಟಿ ನಿಯಮಿತದ" 31 ಮಾರ್ಚ್ 2022ರಲ್ಲಿದ್ದಂತೆ ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳನ್ನು, ಅದೇ ದಿನಾಂಕಕ್ಕೆ ಅಂತ್ಯಗೊಂಡ ಸಾಲಿಗೆ ಕಂಪನಿಯ ಹಣಕಾಸು ತ:ಖ್ತೆಗಳ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಪರಿಶೋಧನೆ ಮಾಡಿರುವೆವು.

ಆಂತರಿಕ ಹಣಕಾಸು ನಿಯಂತ್ರಣಗಳಿಗಾಗಿ ಆಡಳಿತ ಮಂಡಳಿಯ ಜವಾಬ್ದಾರಿ

ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅತ್ಯಗತ್ಯ ಭಾಗಗಳನ್ನು ಪರಿಗಣಿಸಿದಂತೆ ನಿಗಮದಿಂದ ಸ್ಥಾಪಿಸಲಾಗಿರುವ ಹಣಕಾಸು ವರದಿಯ ಮಾನದಂಡದ ಮೇಲೆ ಆಂತರಿಕ ನಿಯಂತ್ರಣವನ್ನು ಆಧರಿಸಿದಂತೆ ಆಂತರಿಕ ನಿಯಂತ್ರಣವನ್ನು ಸ್ಥಾಪಿಸುವುದು ಮತ್ತು ನಿರ್ವಹಿಸಿಕೊಂಡು ಹೋಗುವುದು ನಿಗಮದ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಗಳು, ನಿಗಮದ ಕಾರ್ಯನೀತಿಗಳಿಗೆ ಬದ್ಧತೆಯಿಂದ ಕೂಡಿರುವುದನ್ನೂ ಒಳಗೊಂಡಂತೆ ತನ್ನ ವ್ಯಾಪಾರವ್ಯವಹಾರವನ್ನು ನಿಯಮಗಳ ಅನುಸಾರ ಮತ್ತು ದಕ್ಷತೆಯಿಂದ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಪರಿಣಾಮಕಾರಿತ್ವದಿಂದ ಕಾರ್ಯಚರಣೆಗೊಳ್ಳುತ್ತಿದ್ದ ಸಮರ್ಪಕವಾದಂತಹ ಆಂತರಿಕ ಹಣಕಾಸು ನಿಯಂತ್ರಣದ ವಿನ್ಯಾಸ, ಕಾರ್ಯಗತಗೊಳಿಸುವಿಕೆ ಮತ್ತು ನಿರ್ವಹಣೆ, ತನ್ನ ಆಸ್ತಿಗಳನ್ನು ಸಂರಕ್ಷಿಸುವುದು, ವಂಚನೆಗಳು ಮತ್ತು ತಪ್ಪುಗಳು ಸಂಭವಿಸುವುದನ್ನು ತಡೆಯುವುದು ಮತ್ತು ಅಂತಹ ಪ್ರಕರಣಗಳನ್ನು ಪತ್ತೆಹಚ್ಚುವುದು, ಲೆಕ್ಕವನ್ನಿಡುವಿಕೆಯ ದಾಖಲೆಗಳ ಯಥಾರ್ಥತೆ ಮತ್ತು ಪರಿಪೂರ್ಣತೆ ಹಾಗೂ ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ಅಗತ್ಯತೆಯಿರುವಂತೆ ವಿಶ್ವಸನೀಯತೆಯಿಂದ ಕೂಡಿದ ಹಣಕಾಸಿಗೆ ಸಂಬಂಧಿತ ಮಾಹಿತಿಯನ್ನು ಸಮಯೋಚಿತವಾಗಿ ತಯಾರಿಸುವುದು ಇತ್ಯಾದಿಗಳನ್ನು ಒಳಗೊಂಡಿರುತ್ತವೆ.

ಲೆಕ್ಕಪರಿಶೋಧಕರ ಜವಾಬ್ದಾರಿ

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಕಂಪನಿಯ ಹಣಕಾಸು ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲೆ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿದೆ. ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143 (10)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದೆ ಎಂಬುದಾಗಿ ಭಾವಿಸಲಾಗಿರುವ ಹಾಗೂ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಅನ್ವಯಗೊಳ್ಳುವ ಹಾಗೂ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ

ಸಂಸ್ಥೆಯಿಂದ ನೀಡಲ್ಪಟ್ಟಿರುವ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯಗೊಳ್ಳುವಷ್ಟರ ಮಟ್ಟಿಗೆ, ನಾವು ನಮ್ಮ ಲೆಕ್ಕಪರಿಶೋಧನೆಯನ್ನು ನಡೆಸಿರುವೆವು. ನೈತಿಕತೆಯ ಅಗತ್ಯತೆಗಳನ್ನು ಅನುಸರಿಸುವುದನ್ನು ಹಾಗೂ ಹಣಕಾಸು ತ:ಖ್ತೆಗಳು ವಿಷಯಕ ತಪ್ಪು ಹೇಳಿಕೆಗಳಿಂದ ಮುಕ್ತವಾಗಿವೆಯೇ ಎಂಬುದರ ಬಗ್ಗೆ ನ್ಯಾಯಸಮ್ಮತ ಭರವಸೆಯನ್ನು ಪಡೆಯುವುದಕ್ಕಾಗಿ ಲೆಕ್ಕಪರಿಶೋಧನಾ ವಿಧಾನವನ್ನು ಪೂರ್ವಭಾವಿಯಾಗಿ ಯೋಜಿಸುವುದು ಹಾಗೂ ಅದನ್ನು ಕಾರ್ಯಗತಗೊಳಿಸುವ ಅಗತ್ಯತೆಯನ್ನು ಆ ಮಾನದಂಡಗಳು ಹಾಗೂ ಮಾರ್ಗಸೂಚಿ ಹೊಂದಿರುತ್ತವೆ

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ವ್ಯವಸ್ಥೆಯ ಸಮರ್ಪಕತೆ ಹಾಗೂ ಅವುಗಳ ಕಾರ್ಯಾಚರಣೆಯ ಪರಿಣಾಮಕಾರಿತ್ವದ ಬಗ್ಗೆ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳನ್ನು ಪಡೆದುಕೊಳ್ಳುವುದಕ್ಕಾಗಿ ಕಾರ್ಯಾಚರಣೆಗಳನ್ನು ನಡೆಸುವುದನ್ನು ನಮ್ಮ ಲೆಕ್ಕಪರಿಶೋಧನೆಯು ಒಳಗೊಂಡಿರುತ್ತದೆ. ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣದ ನಮ್ಮ ಲೆಕ್ಕಪರಿಶೋಧನೆಯು, ಹಣಕಾಸು ವರದಿಯ ಮೇಲೆ ಆಂತರಿಕ ನಿಯಂತ್ರಣಗಳನ್ನು ಅರ್ಥ ಮಾಡಿಕೊಳ್ಳುವುದು, ವಂಚಿಸುವ ಉದ್ದೇಶದಿಂದಲೇ ಆಗಲಿ ಅಥವಾ ತಪ್ಪುಗಳಿಂದಲೇ ಆಗಲಿ, ಇರಬಹುದಾದ ವಿಷಯಕ ದುರ್ಬಲತೆಯ ಸಂಭಾವ್ಯ ಅಪಾಯವನ್ನು ನಿರ್ಧಾರಣೆ ಮಾಡುವುದು ಹಾಗೂ ನಿರ್ಧಾರಣೆ ಮಾಡಲಾದ ಸಂಭಾವ್ಯ ಅಪಾಯದ ಆಧಾರದ ಮೇರೆಗೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಾಚರಣೆಯ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡುವುದನ್ನು ಒಳಗೊಂಡಿರುತ್ತದೆ.

ನಾವು ಪಡೆದುಕೊಂಡಂತಹ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳು ನಿಗಮದ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯ ಮೇಲೆ ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ದೃಷ್ಟಿಯಿಂದ ಒಂದು ಆಧಾರವನ್ನು ಒದಗಿಸುವುದಕ್ಕಾಗಿ ಸಮರ್ಪಕವಾಗಿವೆ ಹಾಗೂ ಸೂಕ್ತವಾಗಿವೆ ಎಂಬ ವಿಶ್ವಾಸವು ನಮಗಿದೆ.

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ತಾತ್ಪರ್ಯ/ಪ್ರಾಮುಖ್ಯತೆ

ಹಣಕಾಸು ವರದಿಯ ಮೇಲೆ ಒಂದು ನಿಗಮದ ಆಂತರಿಕ ಹಣಕಾಸು ನಿಯಂತ್ರಣವು, ಹಣಕಾಸು ವರದಿಯ ವಿಶ್ವಸನೀಯತೆಯನ್ನು ಒಂದು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದಕ್ಕಾಗಿ ವಿನ್ಯಾಸಗೊಳಿಸುವ ಹಾಗೂ ಒಂದು ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಬಾಹ್ಯ ಉದ್ದೇಶಗಳಿಗಾಗಿ ಹಣಕಾಸು ತ:ಖ್ತೆಗಳನ್ನು ತಯಾರಿಸುವ ಒಂದು ಪ್ರಕ್ರಿಯೆಯಾಗಿರುತ್ತದೆ. (1)ಕಂಪನಿಯ ಆಸ್ತಿಗಳ ವ್ಯವಹಾರಗಳು ಮತ್ತು ವಿನ್ಯಾಸ/ವ್ಯವಸ್ಥೆಯನ್ನು ನ್ಯಾಯಸಮ್ಮತವಾದಂತಹ ಮತ್ತು ಯಥಾರ್ಥತೆಯಿಂದ ಕೂಡಿದ ರೀತಿಯಲ್ಲಿ ತೋರಿಸುವುದು. (2) ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ತಯಾರಿಸುವಲ್ಲಿ ಅನುಮತಿ ನೀಡುವ ಸಲುವಾಗಿ ಅಗತ್ಯವಿರುವಂತೆ ವ್ಯವಹಾರಗಳನ್ನು ದಾಖಲಿಸಲಾಗಿದೆ ಹಾಗೂ ಕಂಪನಿಯ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ನಿಗಮದ ವ್ಯವಸ್ಥಾಪನೆ/ಆಡಳಿತ ಮಂಡಳಿಯ ಮತ್ತು ನಿರ್ದೇಶಕರುಗಳ ಅನುಮತಿಯ ಅನುಸಾರವೇ ಮಾಡಲಾಗಿದೆ ಎಂಬುದರ ಬಗ್ಗೆ ಒಂದು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದು. (3) ಪ್ರತ್ಯೇಕ ಹಣಕಾಸು ತ:ಖ್ತೆಗಳ ಮೇಲೆ ಒಂದು ವಿಷಯಕ ಪ್ರಭಾವವನ್ನು ಹೊಂದಿರುವಂತಹ ನಿಗಮದ ಆಸ್ತಿಗಳ ಅನಧಿಕೃತ ಸ್ವಾಧೀನತೆ, ಬಳಕೆ ಅಥವಾ ವಿಲೆವಾರಿಯನ್ನು ತಡೆಯುವುದು ಅಥವಾ ಸಮಯೋಚಿತವಾಗಿ ಪತ್ತೆಹಚ್ಚುವುದನ್ನು ಒಳಗೊಂಡಿರುತ್ತದೆ.

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ಗತ ಇತಿಮಿತಿಗಳು

ವಂಚನೆ/ಒಳಸಂಚಿನ ಸಂಭಾವ್ಯತೆ ಅಥವಾ ಸಮರ್ಪಕ ಆಡಳಿತವು ನಿಯಂತ್ರಣಗಳನ್ನು ಕಡೆಗಣಿಸುವುದು, ಇವುಗಳನ್ನೂ ಒಳಗೊಂಡಂತೆ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ಗತ ಇತಿಮಿತಿಗಳ ಕಾರಣ ವಿಷಯಕ ತಪ್ಪು ಹೇಳಿಕೆಗಳು ಅಥವಾ ವಂಚನೆಗಳು ಸಂಭವಿಸಬಹುದು ಹಾಗೂ ಅವುಗಳನ್ನು ಪತ್ತೆ ಹಚ್ಚಲು ಸಾಧ್ಯವಾಗದಿರಬಹುದು. ಅಲ್ಲದೆಯೇ, ಭವಿಷ್ಯದ ಅವಧಿಗಳಿಗೆ ಸಂಬಂಧಿತ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಯಾವುದೇ ಮೌಲ್ಯಮಾಪನವನ್ನು ಪ್ರಕ್ಷೇಪಿಸುವುದು ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣವು ಸ್ಥಿತಿಗತಿಗಳಲ್ಲಿನ ಬದಲಾವಣೆ ಅಥವಾ ಕಾರ್ಯನೀತಿಗಳು ಅಥವಾ ಕಾರ್ಯವಿಧಾನಗಳು ಹಾಳಾಗುವುದರ ಕಾರಣ ಅಸಮರ್ಪಕಗೊಳ್ಳುವ ಸಂಭಾವ್ಯ ಅಪಾಯದ ಷರತ್ತಿಗೆ ಒಳಪಟ್ಟಿರುತ್ತದೆ.

ನಮ್ಮ ಅಭಿಪ್ರಾಯ

ನಮ್ಮ ಅಭಿಪ್ರಾಯದಂತೆ, ಕಂಪನಿಯು ಎಲ್ಲಾ ವಿಷಯಕ ಅಂಶಗಳಲ್ಲಿ, ಹಣಕಾಸು ವರದಿಯ ಮೇಲೆ ಒಂದು ಸಮರ್ಪಕ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯನ್ನು ಹೊಂದಿರುವುದು ಹಾಗೂ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ನೀಡಿರುವ ಆಂತರಿಕ ನಿಯಂತ್ರಣದ ಅತ್ಯಗತ್ಯ ಭಾಗಗಳನ್ನು ಪರಿಗಣಿಸಿದಂತೆ ಕಂಪನಿಯು ಸ್ಥಾಪಿಸಿದ್ದಂತಹ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಮಾನದಂಡದ ಆಧಾರದ ಮೇರೆಗೆ, 31 ಮಾರ್ಚ್ 2022ರಲ್ಲಿದ್ದಂತೆ ಅಂತಹ ಹಣಕಾಸು ವರದಿಯ ಮೇಲಿನ ಒಂದು ಸಮರ್ಪಕ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯು ಪರಿಣಾಮಕಾರಿತ್ವದಿಂದ ಕಾರ್ಯಾಚರಣೆಗೊಂಡಿತ್ತು.

ಎಫ್ ಎನ್ ಹೊನ್ನಬಿಂಡರಿ ಅಂಡ್ ಕಂಪನಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಎಫ್ ಆರ್‌ಎನ್ : 007361ಎಸ್

–ಸಹಿ ಮಾಡಲಾಗಿದೆ–
ಎಫ್‌ಎನ್ ಹೊನ್ನಬಿಂಡರಿ

ಮಾಲೀಕರು

ಸದಸ್ಯತ್ವ ಸಂಖ್ಯೆ 205041

ಯುಡಿಐಎನ್ ಸಂಖ್ಯೆ: 22205041AZLOQL4376

ಸ್ಥಳ : ಹುಬ್ಬಳ್ಳಿ
ದಿನಾಂಕ : 12.10.2022

ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143 (5) ಅಡಿಯಲ್ಲಿನ ನಿರ್ದೇಶನಗಳಿಗೆ ಅನುಪಾಲನಾ ಕ್ರಮಗಳ 'ಅನುಬಂಧ ಸಿ'

ಹುಬ್ಬಳ್ಳಿ ಧಾರವಾಡ ಸ್ಮಾರ್ಟ್ ಸಿಟಿ ನಿಯಮಿತ

ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143 (5) ಅಡಿಯಲ್ಲಿನ ನಿರ್ದೇಶನಗಳು

1. ಲೆಕ್ಕವನ್ನಿಡುವಿಕೆಯ ಎಲ್ಲಾ ವ್ಯವಹಾರಗಳನ್ನು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಮೂಲಕ ಸಂಸ್ಕರಿಸುವ ಸಲುವಾಗಿ ಕಂಪನಿಯು ಒಂದು ವ್ಯವಸ್ಥೆಯನ್ನು ಹೊಂದಿರುವುದೆ? ಹೌದು ಎಂದಾದಲ್ಲಿ ಲೆಕ್ಕವನ್ನಿಡುವಿಕೆಯ ವ್ಯವಹಾರಗಳನ್ನು ಮಾಹಿತಿ ತಂತ್ರಜ್ಞಾನದ ಮೂಲಕವಲ್ಲದೆಯೇ ಅನ್ಯ ಮಾರ್ಗದಲ್ಲಿ ಸಂಸ್ಕರಿಸಿದಲ್ಲಿ ಲೆಕ್ಕಪತ್ರಗಳ ಸಮಗ್ರತೆಯ ಮೇಲೆ ಆಗಬಹುದಾದ ಪರಿಣಾಮಗಳನ್ನು ಹಣಕಾಸಿನ ಪರಿಣಾಮಗಳು ಯಾವುದಾದರೂ ಇದ್ದಲ್ಲಿ, ಅವುಗಳ ಜೊತೆಯಲ್ಲಿ ತಿಳಿಸುವುದು.

ಹೌದು, ಲೆಕ್ಕವನ್ನಿಡುವಿಕೆಯ ಎಲ್ಲಾ ವ್ಯವಹಾರಗಳನ್ನೂ ಮಾಹಿತಿ ತಂತ್ರಜ್ಞಾನ ತಂತ್ರಾಂಶ ಅನ್ವಯ ಟ್ಯಾಲಿ ಮೂಲಕ ಮಾಡಲಾಗುತ್ತಿರುವುದು.

2. ಹೊರಗಿನ ಸಾಲಗಾರರು ಕಂಪನಿಗೆ ನೀಡಲಾಗಿರುವಂತಹ ಹಾಗೂ ಪ್ರಸ್ತುತ ಇರುವಂತಹ ಸಾಲಗಳ ಪುನರ್-ರಚನೆ ಅಥವಾ ಸಾಲ/ಋಣ/ಬಡ್ಡಿ, ಇತ್ಯಾದಿಗಳನ್ನು ಕಂಪನಿಯು ಮರುಪಾವತಿಸಲು ಸಾಧ್ಯವಾಗದೆಯೇ ಮನ್ನಾ ಮಾಡಲಾಗಿರುವ, ದಾಖಲೆಗಳಿಂದ ತೆಗೆದುಹಾಕಲಾಗಿರುವ (ರೈಟ್ ಆಫ್) ಪ್ರಕರಣಗಳು ಯಾವುದಾದರೂ ಇರುವವೆ? ಹೌದು ಎಂದಾದಲ್ಲಿ ಹಣಕಾಸು ಸ್ಥಿತಿಗತಿಗಳ ಮೇಲೆ ಅವುಗಳ ಪ್ರಭಾವವನ್ನು ತಿಳಿಸುವುದು.

ಯಾವುದೇ ಸಾಲಗಳನ್ನೂ ಆ ರೀತಿಯಲ್ಲಿ ಪುನರ್-ರಚಿಸಿರುವುದಿಲ್ಲ.

3. ಕೇಂದ್ರ/ರಾಜ್ಯ ಸರ್ಕಾರ/ಸಂಸ್ಥೆಗಳಿಂದ ನಿರ್ದಿಷ್ಟ ಯೋಜನೆಗಳಿಗಾಗಿ ಸ್ವೀಕರಿಸಲಾಗಿರುವ/ಸ್ವೀಕರಿಸಬೇಕಾಗಿರುವ ಹಣಕಾಸನ್ನು ಷರತ್ತುಗಳು ಮತ್ತು ನಿಬಂಧನೆಗಳ ಅನುಸಾರ ಸಮರ್ಪಕವಾಗಿ ಲೆಕ್ಕವನ್ನಿಡಲಾಗಿರುವುದೆ/ಬಳಸಿಕೊಳ್ಳಲಾಗಿರುವುದೆ? ಮಾರ್ಗಾಂತರಣ ಪ್ರಕರಣಗಳ ಪಟ್ಟಿಯನ್ನು ನೀಡುವುದು.

ಹೌದು, ಸರ್ಕಾರದಿಂದ ಸ್ವೀಕರಿಸಲಾದಂತಹ ಹಣಕಾಸನ್ನು ಸಮರ್ಪಕವಾಗಿ ಲೆಕ್ಕವನ್ನಿಡಲಾಗಿರುವುದು ಹಾಗೂ ಷರತ್ತುಗಳು ಮತ್ತು ನಿಬಂಧನೆಗಳ ಅನುಸಾರ ಉಪಯೋಗಿಸಲಾಗುತ್ತಿರುವುದು.

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143 (5)ರ ಅಡಿಯಲ್ಲಿ ಕಂಪನಿಗೆ ಸಂಬಂಧಿತ ನಿರ್ದಿಷ್ಟ ನಿರ್ದೇಶನಗಳು

1. ಅನುಬಂಧದಲ್ಲಿ ಲಗತ್ತಿಸಲಾಗಿರುವಂತಹ ನಗದು ಮತ್ತು ಬ್ಯಾಂಕು ಶಿಲ್ಕುಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧಕರು ಎಲ್ಲಾ ಐಟಂಗಳನ್ನು ಪರಿಶೀಲಿಸಿರುವರೆ. ಅನುಸರಿಸಿರದಿರುವಂತಹ ನಿರ್ದಿಷ್ಟ ಅಂಶಗಳಿದ್ದಲ್ಲಿ, ಅವುಗಳ ಬಗ್ಗೆ ವರದಿಯಲ್ಲಿ ತಿಳಿಸಿರುವರೆ?

ಯಾವುದೇ ಲೋಪದೋಷಗಳು ಗಮನಕ್ಕೆ ಬಂದಿರುವುದಿಲ್ಲ.

2. ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ ಹಾಗೂ ಅವುಗಳಿಗೆ ಪ್ರಮಾಣಾನುಗುಣವಾಗಿ ಒಡಂಬಡಿಕೆಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ಮೈಲಿಕಲ್ಲುಗಳನ್ನು ಹಾಗೂ ವೆಚ್ಚ/ಮೌಲ್ಯ ಹೆಚ್ಚಳದ ಪ್ರಭಾವ, ಯಾವುದಾದರೂ ಇದ್ದಲ್ಲಿ, ಅವುಗಳನ್ನು

ಮೇಲ್ವಿಚಾರಣೆ ಮಾಡುವ ವ್ಯವಸ್ಥೆಯು ಇರುವುದೆ, ಗುತ್ತಿಗೆದಾರರುಗಳಿಂದ ವರಮಾನಗಳ ಗುತ್ತಿಗೆಗಳು, ಇತ್ಯಾದಿಗಳನ್ನು ಲೆಕ್ಕಪತ್ರ ಪುಸ್ತಕಗಳಲ್ಲಿ ಸಮರ್ಪಕವಾಗಿ ಲೆಕ್ಕವನ್ನಿಡಲಾಗಿರುವುದೆ:

ಹೌದು, ಈ ನಿಟ್ಟಿನಲ್ಲಿ ವ್ಯವಸ್ಥೆಯು ಇರುವುದು.

3. ವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳು, ವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾದವುಗಳು, ಮುಂಗಡಗಳು ಹಾಗೂ ಅಂತಹುದೇ ಸ್ವರೂಪದ ಶಿಲ್ಕುಗಳನ್ನು ಖಚಿತಪಡಿಸಿಕೊಳ್ಳುವ ವ್ಯವಸ್ಥೆಯನ್ನು ಕಂಪನಿಯು ಹೊಂದಿರುವುದೆ ಎಂಬುದರ ಬಗ್ಗೆ ಟೀಕೆಟಿಪ್ಪಣಿ ಮಾಡುವುದು.

ಗುತ್ತಿಗೆದಾರರುಗಳಿಗೆ ತಾವು ಕಾರ್ಯಗತಗೊಳಿಸುವ ಕಾಮಗಾರಿಗಳಿಗೆ ಸಜ್ಜುಗೊಳ್ಳುವ ಸಲುವಾಗಿ ನೀಡಲಾಗುವ ಮುಂಗಡಗಳನ್ನು (ಮೊಬಿಲಿಸೇಷನ್ ಅಡ್ವಾನ್ಸ್) ಹೊರತುಪಡಿಸಿದಂತೆ ಅಂತಹ ಮತ್ಯಾವುದೇ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳು, ವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾದವುಗಳು ಇರುವುದಿಲ್ಲ.

4. ಕೈಬಿಡಲಾಗಿರುವ ಯೋಜನೆಗಳ ಮೇಲಿನ ವೆಚ್ಚಮೌಲ್ಯವನ್ನು ಗುರುತಿಸುವ ಹಾಗೂ ದಾಖಲೆಗಳಿಂದ ತೆಗೆದುಹಾಕುವುದನ್ನು (ರೈಟ್ ಆಫ್) ಖಚಿತಪಡಿಸಿಕೊಳ್ಳುವ ವ್ಯವಸ್ಥೆಯನ್ನು ಕಂಪನಿಯು ಹೊಂದಿರುವುದೆ :

ಅಂತಹ ವ್ಯವಸ್ಥೆಯು ಇರುವುದಿಲ್ಲ.

5.ಕಂಪನಿಯು ತನ್ನದೇ ಆದಂತಹ ವರಮಾನ ಮೂಲವನ್ನು ಸೃಷ್ಟಿಸಿರುವುದೆ ಹಾಗೂ ವರಮಾನ ವೆಚ್ಚ, ಎ ಅಂಡ್ ಒಇ, ಯೋಜನಾ ಅನುದಾನಗಳನ್ನು ಸ್ಮಾರ್ಟ್ ಸಿಟಿ ಮಾರ್ಗಸೂಚಿಗಳ ಅನುಸಾರ ಲೆಕ್ಕವನ್ನಿಟ್ಟಿರುವುದೆ. ಯೋಜನೆಗಳಿಗೆ ಸಂಬಂಧಿಸಿದಂತೆ ಯಾವುದಾದರೂ ವರಮಾನವು ಸಂಚಿತಗೊಂಡಿದ್ದಲ್ಲಿ, ಅದನ್ನು ಕಂಪನಿಯ ಒಂದು ವರಮಾನ ಎಂಬುದಾಗಿ ಪರಿಗಣಿಸಲಾಗಿರುವುದೇ ಎಂಬುದರ ಬಗ್ಗೆಯೂ ಲೆಕ್ಕಪರಿಶೋಧಕರು ಟೀಕೆಟಿಪ್ಪಣಿ ಮಾಡುವುದು : ಈ ನಿಟ್ಟಿನಲ್ಲಿ ನಿರ್ದಿಷ್ಟ ನಿಯಮಗಳನ್ನು ಅನುಸರಿಸದಿರುವಂತಹ ನಿರ್ದಿಷ್ಟ ಪ್ರಕರಣಗಳನ್ನು ತಿಳಿಸುವುದು.

2021-22 ಹಣಕಾಸು ಸಾಲಿಗೆ ಅಂತಹ ಯಾವುದೇ ವರಮಾನ ಉತ್ಪಾದನಾ ಮೂಲವೂ ಇರಲಿಲ್ಲ.

ಎಫ್ ಎನ್ ಹೊನ್ನಬಿಂಡಗಿ ಅಂಡ್ ಕಂಪನಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಎಫ್ ಆರ್‌ಎನ್ : 007341ಎಸ್
-ಸಹಿ ಮಾಡಲಾಗಿದೆ-
ಎಫ್‌ಎನ್ ಹೊನ್ನಬಿಂಡಗಿ
ಮಾಲೀಕರು
ಸದಸ್ಯತ್ವ ಸಂಖ್ಯೆ 205041
ಯುಡಿಐಎನ್ ಸಂಖ್ಯೆ: 22205041AZLOQL4376

ಸ್ಥಳ : ಹುಬ್ಬಳ್ಳಿ

ದಿನಾಂಕ : 12.10.2022

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ನಿರ್ದೇಶನಗಳಿಗೆ ಅನುಸರಣಾ ಕ್ರಮಗಳಿಗೆ ಸಂಬಂಧಿತ 'ಅನುಬಂಧ ಸಿ'

ಅನುಬಂಧ I

ಆಂತರಿಕ ಹಣಕಾಸು ನಿಯಂತ್ರಣದ ಮೇಲೆ ಪರಿಶೀಲಿಸಲು ಅಗತ್ಯತೆಯಿರುವ ಐಟಂಗಳ ಪಟ್ಟಿ : ನಗದು ಮತ್ತು ಶಿಲ್ಕುಗಳನ್ನು ಒಳಗೊಂಡಂತೆ ಪೂರಕ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಪರೀಕ್ಷಾ-ಪರಿಶೀಲನೆ ಮಾಡಲಾಗುವ ಪ್ರಕರಣಗಳು

ಕ್ರಮ ಸಂಖ್ಯೆ	ಪರಿಶೀಲಿಸಲು ಅಗತ್ಯತೆಯಿರುವ ಐಟಂಗಳ ಪಟ್ಟಿ	ಹೌದು	ಇಲ್ಲ	ಅನ್ವಯ ಗೊಳ್ಳುವುದಿಲ್ಲ	ಷರಾ
1	ಎಲ್ಲಾ ಬ್ಯಾಂಕು ಖಾತೆಗಳನ್ನು/ನಿಶ್ಚಿತ ಅವಧಿ ಠೇವಣಿಗಳನ್ನು ಬ್ಯಾಂಕುಗಳಲ್ಲಿ ತೆರೆಯಲಾಗಿರುವುದೆ ಹಾಗೂ ಮೇಲೆ ತಿಳಿಸಲಾಗಿರುವಂತಹ ಪ್ರದತ್ತವಾಗಿರುವ ಅಧಿಕಾರಗಳ ಅನುಸಾರ ಸಮರ್ಪಕ ಅನುಮತಿ ಹಾಗೂ ಅನುಮೋದನೆಗಳನ್ನು ನೀಡಲಾಗಿರುವುದೆ.	ಹೌದು			
2	ಬ್ಯಾಂಕು ಖಾತೆಗಳ ಸಮನ್ವಯಗೊಳಿಸುವಿಕೆ ತ:ಖ್ತೆಯನ್ನು ತಯಾರಿಸುವ ಸಲುವಾಗಿ ಒಂದು ನಿಯತಕಾಲಿಕ ವ್ಯವಸ್ಥೆ/ಕಾರ್ಯಕ್ರಮವು ಇದ್ದಿತೆ ಹಾಗೂ ಅವುಗಳನ್ನು ಲೆಕ್ಕಪರಿಶೋಧನೆಯ ಪರಿಶೀಲನೆಗಾಗಿ ಸಲ್ಲಿಸಲ್ಪಟ್ಟವೆ?	ಹೌದು			
3	ಪ್ರಧಾನ ಖಾತೆ ಹಾಗೂ ಎಲ್ಲಾ ಉಪ-ಬ್ಯಾಂಕು ಖಾತೆಗಳ ನಡುವೆ ಬ್ಯಾಂಕು ಖಾತೆಗಳ ಸಮನ್ವಯಗೊಳಿಸುವಿಕೆಯನ್ನು ಮಾಡಲಾಗಿದ್ದಿತೆ	ಹೌದು			
4	ಬ್ಯಾಂಕು ಖಾತೆಗಳ ಕಾರ್ಯಾಚರಣೆಗಾಗಿ ಓರ್ವ ಏಕೈಕ ಸಹಿ ಮಾಡುವ ವ್ಯಕ್ತಿಗೆ ನೀಡಲಾಗಿದ್ದಿತೆ?	ಹೌದು			
5	ನಿಶ್ಚಿತ ಅವಧಿ ಠೇವಣಿಗಳ್ಳ ಸಂಪೂರ್ಣ ಅವಧಿಗೆ ಬಡ್ಡಿಯನ್ನು ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿರುವುದೆ?	ಹೌದು			
6	ಕಚೇರಿಯಲ್ಲಿರುವ ನಗದನ್ನು ನಿಯತಕಾಲಿಕವಾಗಿ ಭೌತಿಕ ಪರಿಶೀಲನೆ ಮಾಡಲಾಗಿರುವುದೆ?			ಅನ್ವಯ ಗೊಳ್ಳುವುದಿಲ್ಲ	ಕಂಪನಿಯು ಕಚೇರಿಯಲ್ಲಿ ಯಾವುದೇ ನಗದನ್ನೂ ಹೊಂದಿರುವುದಿಲ್ಲ
7	ಆಸ್ತಿ-ಜವಾಬ್ದಾರಿ ತ:ಖ್ತೆಯಲ್ಲಿ ತೋರಿಸಿರುವಂತಹ ಕಚೇರಿಯಲ್ಲಿರುವ ನಗದು ನಗದಿನ ಭೌತಿಕ ಪರಿಶೀಲನೆಯ ಪ್ರಮಾಣದಲ್ಲಿ ತೋರಿಸಿರುವುದಕ್ಕೆ ತಾಳೆ ಹೊಂದಿರುವುದೆ?			ಅನ್ವಯ ಗೊಳ್ಳುವುದಿಲ್ಲ	ಕಂಪನಿಯು ಕಚೇರಿಯಲ್ಲಿ ಯಾವುದೇ ನಗದನ್ನೂ ಹೊಂದಿರುವುದಿಲ

8	ಮೊತ್ತಗಳು, ಅವಧಿ ಮುಕ್ತಾಯವಾಗುವ ದಿನಾಂಕಗಳು, ಬಡ್ಡಿ ದರಗಳೂ ಹಾಗೂ ಬಡ್ಡಿ ಪಾವತಿಗೆ ದಿನಾಂಕಗಳು, ಈ ವಿವರಗಳನ್ನು ತೋರಿಸುವ ನಿಶ್ಚಿತ ಅವಧಿ ಠೇವಣಿಗಳ ರಿಜಿಸ್ಟರನ್ನು ನಿರ್ವಹಿಸಲಾಗಿರುವುದೆ?	**ಹೌದು**			
9.	ನಿಶ್ಚಿತ ಅವಧಿ ಠೇವಣಿಗಳ ಮೇಲಿನ ಬಡ್ಡಿಯನ್ನು ನಿಗದಿತ ದಿನಾಂಕಗಳಲ್ಲಿ ಸ್ವೀಕರಿಸಿರುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಅನುಸರಣಾ ಕ್ರಮಗಳ ವ್ಯವಸ್ಥೆಯು ಇರುವುದೆ?	**ಹೌದು**			**ಈ ವ್ಯವಸ್ಥೆಯು ಬ್ಯಾಂಕಿನಿಂದ ನಿರ್ವಹಿಸಲ್ಪಡುತ್ತಿದೆ.**
10.	ನಿಶ್ಚಿತ ಅವಧಿ ಠೇವಣಿಗಳ ಅವಧಿ ಮುಕ್ತಾಯಗೊಂಡಿರುವವುಗಳಿಗೆ ಸಂಬಂಧಿಸಿದಂತೆ ಮೊತ್ತವನ್ನು ಯಾವುದೇ ವಿಳಂಬವಿಲ್ಲದೆಯೇ ವರ್ಗಾಯಿಸಿರುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಅನುಸರಣಾ ಕ್ರಮಗಳ ವ್ಯವಸ್ಥೆಯು ಇರುವುದೆ?	**ಹೌದು**			**ಈ ವ್ಯವಸ್ಥೆಯು ಬ್ಯಾಂಕಿನಿಂದ ನಿರ್ವಹಿಸಲ್ಪಡುತ್ತಿದೆ.**
11.	ಎಲ್ಲಾ ಬ್ಯಾಂಕು ಖಾತೆಗಳು ಅಂದರೆ : ಉಳಿತಾಯ ಖಾತೆಗಳು, ಚಾಲ್ತಿ ಖಾತೆಗಳು ಹಾಗೂ ನಿಶ್ಚಿತ ಅವಧಿ ಖಾತೆಗಳಿಂದ ಬ್ಯಾಂಕು ಖಚಿತಪಡಿಸಿಕೊಳ್ಳುವಿಕೆ ತ:ಖ್ತೆಗಳನ್ನು ನಿಯತವಾಗಿ ಸ್ವೀಕರಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಅನುಸರಣಾ ಕ್ರಮಗಳ ವ್ಯವಸ್ಥೆಯು ಇರುವುದೆ?	**ಹೌದು**			
12.	ಎಲ್ಲ ಬ್ಯಾಂಕು ಶಿಲ್ಕುಗಳಿಗೆ ಸಂಬಂಧಿಸಿದಂತೆ ಶಿಲ್ಕುಗಳ ಖಚಿತಪಡಿಸಿಕೊಳ್ಳುವಿಕೆಗಳು ಬ್ಯಾಂಕು ತ:ಖ್ತೆಗಳ ಜೊತೆಯಲ್ಲಿ ತಾಳೆ ಹೊಂದುವವೆ?	**ಹೌದು**			
13.	ನಿಶ್ಚಿತ ಅವಧಿ ಠೇವಣಿಗಳ ರಿಜಿಸ್ಟರಿನ ಅನುಸಾರ ನಿಶ್ಚಿತ ಅವಧಿ ಠೇವಣಿಗಳು ಹಾಗೂ ಬಡ್ಡಿಗಳು ಬ್ಯಾಂಕುಗಳು ನೀಡಿರುವಂತಹ ಖಚಿತಪಡಿಸಿಕೊಳ್ಳುವಿಕ/ಪ್ರಮಾಣಪತ್ರಗಳ ಜೊತೆಯಲ್ಲಿ ತಾಳೆ ಹೊಂದುವವೆ?	**ಹೌದು**			
14.	ಬ್ಯಾಂಕುಗಳಿಂದ ಸ್ವೀಕರಿಸಲಾಗಿರುವ ಖಚಿತಪಡಿಸಿಕೊಳ್ಳುವಿಕೆ/ಪ್ರಮಾಣಪತ್ರಗಳು ಬ್ಯಾಂಕು ದೃಢೀಕರಿಸಿರುವುದೆ ಹಾಗೂ ಅದು ಬ್ಯಾಂಕಿನ ಲೆಟರ್ ಹೆಡ್‌ನಲ್ಲಿ ಇರುವುದೆ?	**ಹೌದು**			
15.	ಮೇಲೆ ತಿಳಿಸಲಾದ ಪರೀಕ್ಷಣೆಗಳಲ್ಲಿ ಯಾವುದಾದರೂ ವ್ಯತ್ಯಾಸಗಳನ್ನು ಗಮನಿಸಿದಲ್ಲಿ, ಅದನ್ನು ತದನಂತರದ ಸಾಲಿನಲ್ಲಿ ಹೊಂದಾಣಿಕೆ ಮಾಡಲಾಗಿರುವುದೆ?			**ಅನ್ವಯ ಗೊಳ್ಳುವುದಿಲ್ಲ**	
16.	ಪರೀಕ್ಷಾ-ಪರಿಶೀಲನೆ ಮಾಡಲಾದ ಪ್ರಕರಣಗಳಲ್ಲಿ ಬ್ಯಾಂಕುಗಳಿಂದ ಬಾಹ್ಯ ಖಚಿತಪಡಿಸಿಕೊಳ್ಳುವಿಕೆಗಳನ್ನು	**ಹೌದು**			**ಪಡೆದು ಕೊಳ್ಳಲಾಗಿದೆ**

	ಪಡೆದುಕೊಳ್ಳಲಾಗಿರುವುದೆ?				
17.	ಲೋಪದೋಷಗಳನ್ನು ಶಾಸನಬದ್ಧ ಲೆಕ್ಕಪರಿಶೋಧಕರು ಆಂತರಿಕ ಹಣಕಾಸು ನಿಯಂತ್ರಣಗಳ ಮೇಲಿನ ವರದಿಯಲ್ಲಿ ಸ್ಪಷ್ಟಪಡಿಸಿರುವರೆ, ಇಲ್ಲವಾದಲ್ಲಿ ಈ ನಿಟ್ಟಿನಲ್ಲಿ ಲೆಕ್ಕಪರಿಶೋಧನಾ ಪ್ರಶ್ನಾವಳಿಯನ್ನು ನೀಡಲಾಗಿರುವುದೆ?			**ಅನ್ವಯ ಗೊಳ್ಳುವುದಿಲ್ಲ**	

ಎಫ್ ಎನ್ ಹೊನ್ನಬಿಂಡಗಿ ಅಂಡ್ ಕಂಪನಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಎಫ್ ಆರ್‌ಎನ್ : 007361ಎಸ್
-ಸಹಿ ಮಾಡಲಾಗಿದೆ-
ಎಫ್‌ಎನ್ ಹೊನ್ನಬಿಂಡಗಿ

ಮಾಲೀಕರು

ಸದಸ್ಯತ್ವ ಸಂಖ್ಯೆ 205041

ಯುಡಿಐಎನ್ ಸಂಖ್ಯೆ: 22205041AZLOQL4376

ಸ್ಥಳ : ಹುಬ್ಬಳ್ಳಿ
ದಿನಾಂಕ : 12.10.2022

1. ಸಾಮಾನ್ಯ ಮಾಹಿತಿ

ಹುಬ್ಬಳ್ಳಿ-ಧಾರವಾಡ ಸ್ಮಾರ್ಟ್ ಸಿಟಿ ನಿಯಮಿತವನ್ನು ಕಂಪನಿಗಳ ಅಧಿನಿಯಮ, 2013ರ ಅನುವುಗಳ ಅಡಿಯಲ್ಲಿ 10.03.2017ರಂದು ಸ್ಥಾಪಿಸಲಾಯಿತು. ಕಂಪನಿಯು ಭಾರತ ಸರ್ಕಾರದ ಸ್ಮಾರ್ಟ್ ಸಿಟಿ ಅಭಿಯಾನದ (ಮಿಷನ್) ಅಡಿಯಲ್ಲಿ ಒಂದು ವಿಶೇಷ ಉದ್ದೇಶದ ವಾಹಕವಾಗಿದ್ದು ಅವಳಿ ನಗರಗಳಾದ ಹುಬ್ಬಳ್ಳಿ-ಧಾರವಾಡದಲ್ಲಿ ಸ್ಮಾರ್ಟ್ ಸಿಟಿ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ನಿರತವಾಗಿರುತ್ತದೆ.

2. ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಗಮನಾರ್ಹ ಕಾರ್ಯನೀತಿಗಳು

ಲೆಕ್ಕಪತ್ರಗಳ ತಯಾರಿಕೆಗೆ ಮತ್ತು ಮಂಡನೆಗೆ ಆಧಾರ

ಹಣಕಾಸು ತ:ಖ್ತೆಗಳನ್ನು ಸಾಂಪ್ರದಾಯಿಕ ಮೂಲ ಬೆಲೆಯಲ್ಲಿ ಹಾಗೂ ಭಾರತದಲ್ಲಿ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ತಯಾರಿಸಲಾಗಿರುವುದು. ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳು ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 7ರ ಜೊತೆಯಲ್ಲಿ ಜೊತೆಯಲ್ಲಿ ಓದಲ್ಪಡುವಂತಹ ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 133ರಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಡ್ಡಾಯ ಮಾನದಂಡಗಳನ್ನು ಒಳಗೊಂಡಿರುತ್ತದೆ.

ಎಲ್ಲಾ ಆಸ್ತಿಗಳು ಮತ್ತು ಜವಾಬ್ದಾರಿಗಳನ್ನು ಕಂಪನಿಯ ಸಾಮಾನ್ಯ ಕಾರ್ಯಾಚರಣೆಗಳ ಆವರ್ತನೆಯ ಅನುಸಾರ ಹಾಗೂ ಕಂಪನಿಗಳ ಅಧಿನಿಯಮ, 2013ರ ಷೆಡ್ಯೂಲು –IIIರಲ್ಲಿ ನಿರ್ದಿಷ್ಟಪಡಿಸಲಾಗಿರುವ ಮಾನದಂಡಗಳ ಅನುಸಾರ ಚಾಲ್ತಿ ಅಥವಾ ಚಾಲ್ತಿಯೇತರ ಆಸ್ತಿಗಳು ಎಂಬುದಾಗಿ ವರ್ಗೀಕರಿಸಲಾಗಿರುವುದು.

2.2 ಅಂದಾಜುಗಳ ಬಳಕೆ

ಹಣಕಾಸು ತ:ಖ್ತೆಗಳ ಮಂಡನೆಯು ಹಣಕಾಸು ತ:ಖ್ತೆಗಳ ದಿನಾಂಕದಂದು ಆಸ್ತಿಗಳು ಮತ್ತು ಜವಾಬ್ದಾರಿಗಳ ಮೌಲ್ಯಗಳ ಮೇಲೆ ಪರಿಣಾಮವನ್ನು ಬೀರುವಂತಹ ಹಾಗೂ ವರದಿಯು ಸಂಬಂಧಿಸಿರುವ ಅವಧಿಯಲ್ಲಿನ ವರಮಾನಗಳುಮತ್ತು ವೆಚ್ಚಗಳಿಗೆ ಸಂಬಂಧಿಸಿದಂತೆ ವರದಿ ಮಾಡಲ್ಪಟ್ಟಿರುವ ಮೌಲ್ಯಗಳ ಅಂದಾಜುಗಳು ಹಾಗೂ ಊಹೆಗಳನ್ನು/ಪರಿಕಲ್ಪನೆಗಳ ಅಗತ್ಯತೆಯನ್ನು ಹೊಂದಿರುತ್ತದೆ. ವಾಸ್ತವಿಕ ಫಲಿತಾಂಶಗಳು ಹಾಗೂ ಅಂದಾಜುಗಳ ನಡುವಿನ ವ್ಯತ್ಯಾಸಗಳನ್ನು ಫಲಿತಾಂಶಗಳು ತಿಳಿದುಬಂದ/ಸಾಕಾರಗೊಂಡ ಅವಧಿಯಲ್ಲಿ ಪರಿಗಣಿಸಲಾಗುವುದು.

2.3 ಭೂಮಿ/ಕಟ್ಟಡ ಮುಂತಾದ ಆಸ್ತಿಗಳು, ಸ್ಥಾವರ/ಯಂತ್ರಗಳು ಮತ್ತು ಉಪಕರಣಗಳು ಹಾಗೂ ಸವಕಳಿ:

ಭೂಮಿ/ಕಟ್ಟಡ ಮುಂತಾದ ಆಸ್ತಿಗಳು, ಸ್ಥಾವರ/ಯಂತ್ರಗಳು ಮತ್ತು ಉಪಕರಣಗಳಿಗೆ ಸಂಬಂಧಿಸಿದಂತೆ ಮೌಲ್ಯವನ್ನು ಅವುಗಳ ಖರೀದಿಗೆ ನೇರವಾಗಿ ಕಾರಣವಾಗಿರಬಹುದಾದ ಸಾರಿಗೆ/ಕೂಲಿ ವೆಚ್ಚ ಮುಂತದವುಗಳು ಸೇರಿದಂತೆ ಮೂಲ ಬೆಲೆಯಲ್ಲಿ ತಿಳಿಸಲಾಗುವುದು.

ಆಸ್ತಿಗಳ ಮೇಲಿನ ಸವಕಳಿಯನ್ನು ಕಂಪನಿಗಳ ಅಧಿನಿಯಮ, 2013ರ ಷೆಡ್ಯೂಲು – IIರಲ್ಲಿ ನಿರ್ದಿಷ್ಟಪಡಿಸಿರುವ ಆಸ್ತಿಗಳ ಬಳಸಬಹುದಾದ ಅವಧಿಯ ಅನುಸಾರ ಪ್ರತೀ ವರ್ಷವೂ ಒಂದು ನಿರ್ದಿಷ್ಟ ಶೇಕಡಾವಾರು ದರಗಳಲ್ಲಿ ತಗ್ಗಿಸಿದ ಬೆಲೆಯಲ್ಲಿ ಅನುವು ಮಾಡಲಾಗಿರುವುದು.

ಆಸ್ತಿಗಳ ಸ್ವರೂಪ	ಬಳಸಬಹುದಾದ ಅವಧಿ – ವರ್ಷಗಳು
ಪೀಠೋಪಕರಣಗಳು ಮತ್ತು ನೆಲೆವಸ್ತುಗಳು	10
ಕಚೇರಿ ಉಪಕರಣ	15
ಕಟ್ಟಡಗಳು (ತಾತ್ಕಾಲಿಕ ನಿರ್ಮಾಣ)	3
ಗಣಕಯಂತ್ರ ಉಪಕರಣ	3

2.4 ವರಮಾನವನ್ನು ಪರಿಗಣಿಸುವಿಕೆ

ವರಮಾನವನ್ನು ಲೆಕ್ಕವನ್ನಿಡುವಿಕೆಯ ಸಂಚಿತ ಪದ್ಧತಿಯ ಆಧಾರದ ಮೇರೆಗೆ ಪರಿಗಣಿಸಲಾಗುವುದು.

ಒಂದು ಹಣಕಾಸು ಸಂಬಂಧಿತ ಆಸ್ತಿಯಿಂದ ಬರುವ ಬಡ್ಡಿ ವರಮಾನವನ್ನು ಕಂಪನಿಗೆ ಆರ್ಥಿಕ ಪ್ರಯೋಜನಗಳು ಹರಿದು ಬರುತ್ತವೆ ಎಂಬ ಸಾಧ್ಯತೆಯು ಇದ್ದಲ್ಲಿ ಹಾಗೂ ವರಮಾನದ ಮೊತ್ತವನ್ನು ವಿಶ್ವಸನೀಯವಾಗಿ ಲೆಕ್ಕಹಾಕಬಹುದಾದಲ್ಲಿ ಪರಿಗಣಿಸಲಾಗುವುದು. ಬಡ್ಡಿ ವರಮಾನವು ಒಂದು ಸಮಯದ ಆಧಾರದ ಮೇರೆಗೆ, ಬಾಕಿಯಿರುವ ಅಸಲು ಹಾಗೂ ಜಾರಿಯಲ್ಲಿರುವ ಬಡ್ಡಿ ದರ, ಇವುಗಳನ್ನು ಉಲ್ಲೇಖಿಸಿದಂತೆ ಸಂಚಿತಗೊಳ್ಳುವುದು, ಅದು ಪರಿಗಣಿಸಲ್ಪಟ್ಟಿರುವ ಮೂಲ ಮೌಲ್ಯದ ಮೇಲೆ ಆ ಮೌಲ್ಯವು ಪ್ರಸಕ್ತ ಹೊಂದಿರುವ ಮೌಲ್ಯಕ್ಕೆ ಹಣಕಾಸು ಸಂಬಂಧಿತ ಆಸ್ತಿಯ ನಿರೀಕ್ಷಿತ ಅವಧಿಯ ಮೂಲಕ ಅಂದಾಜು ಮಾಡಲ್ಪಟ್ಟ ಭವಿಷ್ಯದ ನಗದು ಸ್ವೀಕೃತಿಯ ದರವನ್ನು ನಿಖರವಾಗಿ ನ್ಯೂನಗೊಳಿಸುವ ದರವಾಗಿರುತ್ತದೆ.

ಸ್ಮಾರ್ಟ್ ಸಿಟಿ ಅನುದಾನಗಳ ಪೈಕಿ ಬ್ಯಾಂಕುಗಳಲ್ಲಿ ಮಾಡಲಾಗಿರುವ ಹೂಡಿಕೆಗಳ ಮೇಲೆ ಗಳಿಸಲಾದ ಬಡ್ಡಿಗಳನ್ನು, ನಿರ್ವಹಿಸಲಾಗಿರುವ ಏಕೈಕ ಬ್ಯಾಂಕು ಖಾತೆಯ ಕಾರಣ ಈ ಕೆಳಗೆ ನೀಡಿರುವಂತೆ ಸ್ಮಾರ್ಟ್ ಸಿಟಿ ಯೋಜನೆಗಳ ಅನುದಾನಗಳು ಮತ್ತು ಸ್ಮಾರ್ಟ್ ಸಿಟಿ (ಎ ಮತ್ತು ಒಇ)) ಅನುದಾನಗಳ ಅನುಪಾತದಲ್ಲಿ ಹಂಚಿಕೆ ಮಾಡಲಾಗುವುದು.

ಅನುದಾನ ಸ್ವೀಕರಿಸಲಾದ ಅನುಪಾತದಲ್ಲಿ ಬ್ಯಾಂಕು ಬಡ್ಡಿ ಹಂಚಿಕೆ/ವಿನಿಯೋಜನೆ

ಅನುದಾನ ಸ್ವೀಕರಿಸಲಾದ ಅನುಪಾತದಲಿಬ್ಯಾಂಕು ಬಡ್ಡಿ ಹಂಚಿಕೆ/ವಿನಿಯೋಜನೆ

ವಿವರಗಳು	2021–22	2020–21
ಅನುದಾನಗಳು	**ಮೊತ್ತ (ರೂ)**	**ಮೊತ್ತ (ರೂ)**
ಬಂಡವಾಳ ಅನುದಾನ (ಅಭಿಯಾನ ಅನುದಾನ)	**5,58,91,71,610**	**3,71,90,00,000**
ವರಮಾನ ಅನುದಾನ (ಎಅಂಡ್ಓಇ ಅನುದನ)	**25,07,00,095**	**14,00,00,000**

ಒಟ್ಟು	5,83,98,71,705	3,85,90,00,000

ವಿವರಗಳು	ಮೊತ್ತ (ರೂ)	ಮೊತ್ತ (ರೂ)
ಸ್ವೀಕರಿಸಲಾದ ಒಟ್ಟಾರೆ ಬ್ಯಾಂಕು ಬಡ್ಡಿ	5,84,54,606	22,22,95,652
ಬಂಡವಾಳೀಕರಿಸಲಾದ ಬಡ್ಡಿ	5,59,45,205	21,42,31,026
ವರಮಾನವೆಂಬುದಾಗಿ ಪರಿಗಣಿಸಲಾದ ಬಡ್ಡಿ	25,09,400	80,64,626

2.5 ಅನುವುಗಳು ಮತ್ತು ಆಕಸ್ಮಿಕ ಜವಾಬ್ದಾರಿಗಳು

ಅನುವುಗಳನ್ನು , ಈ ಹಿಂದಿನ ಘಟನೆಗಳ ಕಾರಣ ಪ್ರಸಕ್ತ ಕಾನೂನಾತ್ಮಕ ಅಥವಾ ರಚನಾತ್ಮಕ ಬದ್ಧತೆಯನ್ನು ಹೊಂದಿದ್ದಲ್ಲಿ ಹಾಗೂ ಬದ್ಧತೆಗಳನ್ನು ಇತ್ಯರ್ಥಪಡಿಸುವ ಸಲುವಾಗಿ ಸಂಪನ್ಮೂಲಗಳ ಹೊರಹರಿಯುವಿಕೆಯ ಅಗತ್ಯತೆಯಿರುತ್ತದೆ ಹಾಗೂ ಅಂತಹ ಮೊತ್ತವನ್ನು ವಿಶ್ವಸನೀಯವಾಗಿ ಅಂದಾಜು ಮಾಡಬಹುದು ಎಂಬ ಸಾಧ್ಯತೆಯಿದ್ದಲ್ಲಿಪರಿಗಣಿಸಲಾಗುವುದು, ಅನುವುಗಳನ್ನು ಅವುಗಳ ಪ್ರಸ್ತುತ ಇರುವಂತಹ ಮೌಲ್ಯಗಳಿಗೆ ತಗ್ಗಿಸುವುದಿಲ್ಲ ಹಾಗೂ ಆಸ್ತಿ-ಜವಾಬ್ದಾರಿ ತ:ಖ್ತೆಯ ದಿನಾಂಕದಂದು ಬದ್ಧತೆಯನ್ನು ಇತ್ಯರ್ಥಪಡಿಸುವ ಸಲುವಾಗಿ ಅಗತ್ಯವಿರುವ ಅತ್ಯುತ್ತಮ ಅಂದಾಜುಗಳ ಆಧಾರದ ಮೇರೆಗೆ ನಿರ್ಧಾರಣೆ ಮಾಡಲಾಗುವುದು. ಇವುಗಳನ್ನು ಪ್ರತೀ ಆಸ್ತಿ-ಜವಾಬ್ದಾರಿ ತ:ಖ್ತೆಯ ದಿನಾಂಕದಂದು ಸಮೀಕ್ಷಿಸಲಾಗುವುದು ಹಾಗೂ ಪ್ರಸಕ್ತ ಅತ್ಯುತ್ತಮ ಅಂದಾಜನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಹೊಂದಾಣಿಕೆ ಮಾಡಲಾಗುವುದು. ಎಲ್ಲೆಲ್ಲಿ ವಿಷಯಕ ಅನುವುಗಳನ್ನು ಮಾಡಲಾಗಿರುವುದೋ ಅಂತಹ ಕಡೆಗಳಲ್ಲೆಲ್ಲಾ ಎಲ್ಲಾ ಅರಿತಿರುವಂತಹ ಜವಾಬ್ದಾರಿಗಳನ್ನು ಅನುವು ಮಾಡಲಾಗುವುದು, ವಿಷಯಕವಾಗಿರುವಂತಹ ಹಾಗೂ ಅವುಗಳ ಪರಿಣಾಮಗಳನ್ನು ಒಂದು ನ್ಯಾಯಸಮ್ಮತ ಖಚಿತತೆಯೊಂದಿಗೆ ಖಚಿತಪಡಿಸಿಕೊಳ್ಳಲು ಸಾಧ್ಯವಿರದ ಜವಾಬ್ದಾರಿಗಳನ್ನು ಆಕಸ್ಮಿಕ ಜವಾಬ್ದಾರಿಗಳು ಎಂಬುದಾಗಿ ಪರಿಗಣಿಸಲಾಗುವುದು ಹಾಗೂ ಲೆಕ್ಕಪತ್ರಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳಲ್ಲಿ ಅವುಗಳ ಬಗ್ಗೆ ಬಹಿರಂಗಪಡಿಸಲಾಗುವುದು.

2.6 ಸರ್ಕಾರಿ ಅನುದಾನಗಳು

ಸರ್ಕಾರಿ ಅನುದಾನಗಳನ್ನು ಕಂಪನಿಯು ಅಂತಹ ಅನುದಾನಗಳಿಗೆ ಹೊಂದಿಕೊಂಡಂತಿರುವ ಷರತ್ತುಗಳನ್ನು ಪೂರೈಸುವುದು ಹಾಗೂ ಅಂತಹ ಅನುದಾನಗಳನ್ನು ಸ್ವೀಕರಿಸಲಾಗುವುದು ಎಂಬುದರ ಬಗ್ಗೆ ಒಂದು ನ್ಯಾಯಸಮ್ಮತ ಭರವಸೆಯು ಇರದ ಹೊರತು ಪರಿಗಣಿಸುವುದಿಲ್ಲ.

ಯೋಜನೆಗಳಿಗೆ ಸಂಬಂಧಿತ ವೆಚ್ಚಗಳನ್ನು ಸ್ಮಾರ್ಟ್ ಸಿಟಿ ಯೋಜನಾ ಅನುದಾನಗಳಿಂದ ಕಳೆಯಲಾಗುವುದು ಹಾಗೂ ಆಡಳಿತಾತ್ಮಕ ಮತ್ತು ಕಚೇರಿ ವೆಚ್ಚಗಳನ್ನು ಸ್ಮಾರ್ಟ್ ಸಿಟಿ (ಎಅಂಡ್ಒಇ) ಅನುದಾನದಿಂದ ಕಳೆಯಲಾಗುವುದು.

2.7 ಉದ್ಯೋಗಿಗಳಿಗೆ ಸಂಬಂಧಿತ ಪ್ರಯೋಜನಗಳು

ಉದ್ಯೋಗಿಗಳ ಅಲ್ಪಾವಧಿ ಪ್ರಯೋಜನಗಳು

ಉದ್ಯೋಗಿಗಳ ಸೇವೆಗಳನ್ನು ಸ್ವೀಕರಿಸಿದ ಹನ್ನೆರಡು ತಿಂಗಳುಗಳ ಒಳಗೆ ಸಂಪೂರ್ಣವಾಗಿ ಪಾವತಿಸಬೇಕಾದ ಪ್ರಯೋಜನಗಳನ್ನು ಉದ್ಯೋಗಿಗಳ ಅಲ್ಪಾವಧಿ ಪ್ರಯೋಜನಗಳು ಎಂಬುದಾಗಿ ವರ್ಗೀಕರಿಸಲಾಗುವುದು. ಈ ಪ್ರಯೋಜನಗಳು ಸಂಬಳಗಳು ಮತ್ತು ಕೂಲಿಗಳು, ಬೋನಸ್ಸು ಮತ್ತು ಎಕ್ಸ್-ಗ್ರಾಷಿಯಾ ಪಾವತಿಗಳನ್ನು ಒಳಗೊಂಡಿರುತ್ತವೆ. ಉದ್ಯೋಗಿಗಳು ನೀಡುವ ಸೇವೆಗಳಿಗೆ ವಿನಿಮಯವಾಗಿ ಪಾವತಿಸಬೇಕಾದ ಉದ್ಯೋಗಿಗಳ ಅಲ್ಪಾವಧಿ ಪ್ರಯೋಜನಗಳ ತಗ್ಗಿಸದ ಮೊತ್ತಗಳನ್ನು, ಸಂಬಂಧಿತ ಸೇವೆಯನ್ನು ಉದ್ಯೋಗಿಗಳು ನೀಡಿರುವುದರಿಂದ ವೆಚ್ಚಗಳು ಎಂಬುದಾಗಿ ಪರಿಗಣಿಸಲಾಗುವುದು.

ಉದ್ಯೋಗದನಂತರದ ಹಾಗೂ ಉದ್ಯೋಗಿಗಳ ಇತರೆ ದೀರ್ಘಾವಧಿ ಪ್ರಯೋಜನಗಳು

ಕಂಪನಿಯು ಉದ್ಯೋಗದನಂತರದ ಹಾಗೂ ಉದ್ಯೋಗಿಗಳ ಇತರೆ ಯಾವುದೇ ದೀರ್ಘಾವಧಿ ಪ್ರಯೋಜನಗಳಿಗೆ ಅನುವು ಮಾಡಿರುವುದಿಲ್ಲ ಹಾಗೂ ಅನುವು ಮಾಡಬೇಕಾದ ನಿರೀಕ್ಷೆಯಲ್ಲಿಯೂ ಇರುವುದಿಲ್ಲ.

2.8 ತೆರಿಗೆ

ಆದಾಯ ತೆರಿಗೆ ವೆಚ್ಚವು ಚಾಲ್ತಿ ತೆರಿಗೆ ವೆಚ್ಚ ಹಾಗೂ ಪ್ರಸಕ್ತ ಸಾಲಿನ ಮುಂದುಡಲ್ಪಟ್ಟಿರುವ ತೆರಿಗೆ ಆಸ್ತಿ ಅಥವಾ ಜವಾಬ್ದಾರಿ, ಇವುಗಳಲ್ಲಿನ ನಿವ್ವಳ ಬದಲಾವಣೆಯನ್ನು ಒಳಗೊಂಡಿರುತ್ತದೆ. ಚಾಲ್ತಿ ಹಾಗೂ ಮುಂದೂಡಲ್ಪಟ್ಟಿರುವ ತೆರಿಗೆಯನ್ನು, ಚಾಲ್ತಿ ಮತ್ತು ಮುಂದೂಡಲ್ಪಟ್ಟಿರುವ ತೆರಿಗೆಗಳನ್ನೂ ಸಹ ಅನುಕ್ರಮವಾಗಿ ಇತರೆ ಸಮಗ್ರ ವರಮಾನ ಅಥವಾ ನೇರವಾಗಿ ಈಕ್ವಿಟಿಯಲ್ಲಿ ಪರಿಗಣಿಸಲಾಗುವವುಗಳನ್ನು ಹೊರತುಪಡಿಸಿದಂತೆ ಲಾಭ ಮತ್ತು ನಷ್ಟ ತಃಖ್ತೆಯಲ್ಲಿ ಪರಿಗಣಿಸಲಾಗುವುದು. ಆದಾಯ ತೆರಿಗೆ ವೆಚ್ಚಗಳು ಪ್ರಸ್ತುತ ಸಾಲಿನಲ್ಲಿ ಪಾವತಿಸಬೇಕಾದ ಹಾಗೂ ಮುಂದೂಡಲ್ಪಟ್ಟಿರುವ ತೆರಿಗೆ ಪಾವತಿಯನ್ನು ಪ್ರತಿನಿಧಿಸುತ್ತವೆ.

ಮುಂದೂಡಲ್ಪಟ್ಟಿರುವ ತೆರಿಗೆ ಜವಾಬ್ದಾರಿಯನ್ನು ಪ್ರಸಕ್ತ ಸಾಲಿನಲ್ಲಿ ಪರಿಗಣಿಸಲಾಗುವುದು.

2.9 ಅಗೋಚರ ಆಸ್ತಿಗಳು

ಪ್ರತ್ಯೇಕವಾಗಿ ಖರೀದಿಸಲಾಗಿರುವಂತಹ ಒಂದು ನಿರ್ದಿಷ್ಟ ಬಳಸಬಹುದಾದ ಅವಧಿಗಳೊಂದಿಗಿನ ಅಗೋಚರ ಆಸ್ತಿಗಳನ್ನು ಅವುಗಳ ದುರ್ಬಲತೆಯ ಕಾರಣ ಕ್ರಮೇಣ ತಗ್ಗಿಸಲಾಗುವ ಕ್ರೋಡೀಕೃತ ಮೌಲ್ಯವನ್ನು (ಅಮಾರ್ಟಿಸೇಷನ್) ಕಳೆದನಂತರದ ನಿವ್ವಳ ಮೂಲ ಬೆಲೆಯಲ್ಲಿ ಪರಿಗಣಿಸಲಾಗುವುದು. ದುರ್ಬಲತೆಯ ಕಾರಣ ಕ್ರಮೇಣ ತಗ್ಗಿಸಲಾಗುವ ಮೌಲ್ಯವನ್ನು (ಅಮಾರ್ಟಿಸೇಷನ್) ಆಸ್ತಿಗಳ ಆರ್ಥಿಕ ಪ್ರಯೋಜನಗಳನ್ನು ಉಪಯೋಗಿಸಿಕೊಳ್ಳಲಾಗುವ ಮಾದರಿಯನ್ನು ಪ್ರತಿನಿಧಿಸುವ ಆಸ್ತಿಗಳ ಬಳಸಬಹುದಾದ ಅಂದಾಜು ಅವಧಿಯಲ್ಲಿ ನೇರ ಗೆರೆ ಪದ್ಧತಿಯಲ್ಲಿ (ಸ್ಟ್ರೈಟ್ ಲೈನ್ ಮೆಥಡ್) ಪರಿಗಣಿಸಲಾಗುವುದು. ಅಂದಾಜು ಮಾಡಲ್ಪಟ್ಟಂತಹ ಬಳಸಬಹುದಾದ ಅವಧಿ, ದುರ್ಬಲತೆಯ ಕಾರಣ ಕ್ರಮೇಣ ತಗ್ಗಿಸಲಾಗುವ ಮೌಲ್ಯ (ಅಮಾರ್ಟಿಸೇಷನ್) ದುರ್ಬಲತೆಯ ಕಾರಣ ಮೌಲ್ಯವನ್ನು ಕ್ರಮೇಣ ತಗ್ಗಿಸಬಹುದಾದ (ಅಮಾರ್ಟಿಸೇಷನ್) ಅವಧಿಯನ್ನು ವರದಿಗೆ ಸಂಬಂಧಿತ ಪ್ರತೀ ಸಾಲಿನ ಅಂತ್ಯದಲ್ಲಿ ಸಮೀಕ್ಷಿಸಲಾಗುವುದು ಹಾಗೂ ಭವಿಷ್ಯದ ದಿನಾಂಕದಿಂದ ಜಾರಿಗೆ ಬರುವ ಆಧಾರದ ಮೇರೆಗೆ ಅಂದಾಜುಗಳಲ್ಲಿನ ಯಾವುದೇ ಬದಲಾವಣೆಗಳನ್ನು ಜಾರಿಗೊಳಿಸಲಾಗುವುದು.

ಆಸ್ತಿಯ ಸ್ವರೂಪ	ಬಳಸಬಹುದಾದ ಅವಧಿ
ತಂತ್ರಾಂಶ ಅನ್ವಯಗಳು	3 ವರ್ಷಗಳು

ಒಂದು ಅಗೋಚರ ಆಸ್ತಿಯನ್ನು ವಿಲೇವಾರಿ ಮಾಡಿದಾಗ ಅಥವಾ ಅದನ್ನು ಬಳಸುವುದರಿಂದ ಭವಿಷ್ಯದಲ್ಲಿ ಆರ್ಥಿಕ ಪ್ರಯೋಜನಗಳು ದೊರೆಯುವುದಿಲ್ಲ ಎಂಬುದನ್ನು ನಿರೀಕ್ಷಿದಂದು ಪರಿಗಣಿಸುವುದಿಲ್ಲ. ಒಂದು ಅಗೋಚರ ಆಸ್ತಿಯ ಪರಿಗಣಿಸುವಿಕೆಯನ್ನು ನಿಲ್ಲಿಸಿದ ಕಾರಣ ಉದ್ಭವಿಸುವ ಲಾಭ ಅಥವಾ ನಷ್ಟವನ್ನು ವಿಲೇವಾರಿಯಿಂದ ಸ್ವೀಕರಿಸಲಾದ ಪ್ರತಿಫಲ ಹಾಗೂ ಅಂತಹ ಆಸ್ತಿಯು ಹೊಂದಿದ್ದ ಮೌಲ್ಯದ ನಿವ್ವಳ ವ್ಯತ್ಯಾಸದ ಆಧಾರದ ಮೇರೆಗೆ ಲೆಕ್ಕಹಾಕಲಾಗುವುದು ಹಾಗೂ ಆ ರೀತಿ ಪರಿಗಣನೆಯನ್ನು ಹಿಂಪಡೆದಾಗ ಅಂತಹ ಲಾಭ ಅಥವಾ ನಷ್ಟವನ್ನು ಲಾಭ ಮತ್ತು ನಷ್ಟ ತ:ಖ್ತೆಯಲ್ಲಿ ಪರಿಗಣಿಸಲಾಗುವುದು.

2.10 ನಗದು ಮತ್ತು ನಗದಿಗೆ ಸಮಾನವಾದವುಗಳು

ನಗದಿನ ಅರಿವಿರುವ ಮೊತ್ತಕ್ಕೆ ತತ್‌ಕ್ಷಣವೇ ಪರಿವರ್ತಿಸಬಹುದಾದ ಎಲ್ಲಾ ಅಧಿಕ ಪ್ರಮಾಣದಲ್ಲಿ ನಗದೀಕರಣಗೊಳ್ಳುವ ಸಾಮರ್ಥ್ಯವಿರುವ ಹಾಗೂ ಮೌಲ್ಯದಲ್ಲಿನ ಬದಲಾವಣೆಯ ಗಮನಾರ್ಹವಲ್ಲದ ಸಂಭಾವ್ಯ ಅಪಾಯದ ಷರತ್ತಿಗೆ ಒಳಪಟ್ಟಿರುವ ಹಾಗೂ ಅಂತಹ ಸಾಧನಗಳನ್ನು ಖರೀದಿಸಿದ ದಿನಾಂಕದಿಂದ ಮೂರು ತಿಂಗಳು ಮತ್ತು ಅದಕ್ಕೂ ಕಡಿಮೆ ಅವಧಿಯ ವಾಯಿದೆ ಮುಕ್ತಾಯ ದಿನಾಂಕವನ್ನು ಹೊಂದಿರುವ ಎಲ್ಲಾ ಹಣಕಾಸಿನ ಸಾಧನಗಳನ್ನು ನಗದಿಗೆ ಸಮಾನವಾದವುಗಳು ಎಂಬುದಾಗಿ ಪರಿಗಣಿಸಲಾಗುವುದು. ನಗದು ಮತ್ತು ನಗದಿಗೆ ಸಮಾನವಾದವುಗಳು ಬ್ಯಾಂಕು ಖಾತೆಗಳಲ್ಲಿರುವ ಹಾಗೂ ಹಿಂಪಡೆಯಲು ಮತ್ತು ಬಳಸಿಕೊಳ್ಳಲು ಯಾವುದೇ ನಿಬಂಧನೆಗಳನ್ನು ಹೊಂದಿರದ ಶಿಲ್ಕುಗಳನ್ನು ಒಳಗೊಂಡಿರುತ್ತವೆ.

2.11 ಸಂಭಾವನೆ ಕಾರ್ಯನೀತಿ

ವ್ಯವಸ್ಥಾಪಕ ನಿರ್ದೇಶಕರಾದಂತಹ ಶ್ರೀ ಸಿ.ಡಬ್ಲ್ಯು ಶಕೀಲ್ ಅಹ್ಮದ್, ಇವರಿಗೆ 31 ಮಾರ್ಚ್ 2022ಕ್ಕೆ ಅಂತ್ಯಗೊಂಡಂತಹ ಹಣಕಾಸು ಸಾಲಿಗೆ ಪಾವತಿಸಲಾದಂತಹ ಸಂಭಾವನೆಯು ರೂ.11,35,587.00 ಆಗಿರುತ್ತದೆ.

2.12 ಸಂಬಂಧಿತ ತಂಡಗಳ ಜೊತೆಗಿನ ವ್ಯವಹಾರಗಳು

ಪ್ರಸಕ್ತ ಸಾಲಿನಲ್ಲಿ , ಕಂಪನಿಯು ಪರಿಚ್ಛೇದ 188(1)ರ ಅನುವುಗಳನ್ನು ಆಕರ್ಷಿಸುವ ರೀತಿಯಲ್ಲಿ ಸಂಬಂಧಿತ ತಂಡಗಳೊಂದಿಗೆ ಯಾವುದೇ ಗುತ್ತಿಗೆ ಅಥವಾ ವ್ಯವಸ್ಥೆಗಳನ್ನು ಮಾಡಿಕೊಂಡಿರುವುದಿಲ್ಲ. ಆದ್ದರಿಂದ ನಮೂನೆ ಎಒಸಿ-2ರಲ್ಲಿ ಬಹಿರಂಗಪಡಿಸುವಿಕೆಯ ಅಗತ್ಯತೆಯು ಇರುವುದಿಲ್ಲ.

2.13. ಪೂರ್ವಭಾವಿ ಮತ್ತು ಯೋಜನಾ ವೆಚ್ಚಗಳಿಂದ ಸವೆತ/ದುರ್ಬಲತೆಯ ಕಾರಣ ಕ್ರಮೇಣ ತಗ್ಗಿಸಲಾಗುವ ಮೌಲ್ಯ (ಅಮಾರ್ಟಿಸೇಷನ್)

ಪೂರ್ವಭಾವಿ ವೆಚ್ಚಗಳನ್ನು 5 ವರ್ಷಗಳ ಅವಧಿಯಲ್ಲಿ ಪ್ರತೀ ವರ್ಷವೂ 1/5ರ ದರದಲ್ಲಿ ದಾಖಲೆಗಳಿಂದ ತೆಗೆದು ಹಾಕಲಾಗುವುದು (ರಿಟನ್ ಆಫ್)

ಪೂರ್ವ ಭಾವಿ ವೆಚ್ಚಗಳು

ವಿವರಗಳು	31 ಮಾರ್ಚ್ 2022ರಲ್ಲಿದ್ದಂತೆ ಮೊತ್ತ (ರೂಪಾಯಿಗಳು)	31 ಮಾರ್ಚ್ 2021ರಲ್ಲಿದ್ದಂತೆ ಮೊತ್ತ (ರೂಪಾಯಿಗಳು)
ಕಂಪನಿ ರಚನೆಯ ವೆಚ್ಚಗಳು (ವಿಶೇಷ ಉದ್ದೇಶದ ವಾಹಕದ ನೋಂದಣಿ)	54,08,443	1,08,16,887
ಕಳೆಯುವುದು : ಪ್ರಸಕ್ತ ಸಾಲಿನಲ್ಲಿ ದಾಖಲೆಗಳಿಂದ ತೆಗೆದುಹಾಕಲಾದ (ರಿಟನ್ ಆಫ್) 1/5 ಭಾಗ	54,08,443	54,08,444
ಒಟ್ಟು		**54,08,443**

ಯೋಜನೆಗಳಿಗೆ ಸಂಬಂಧಿತ ವೆಚ್ಚಗಳು

ವಿವರಗಳು	**31 ಮಾರ್ಚ್ 2022ರಲ್ಲಿದ್ದಂತೆ ಮೊತ್ತ (ರೂಪಾಯಿಗಳು)**	**31 ಮಾರ್ಚ್ 2021ರಲ್ಲಿದ್ದಂತೆ ಮೊತ್ತ (ರೂಪಾಯಿಗಳು)**
ಜಾಹೀರಾತು ವೆಚ್ಚಗಳು	10,60,751	19,82,067
ಬೆಂಗೇರಿ ಮಾರುಕಟ್ಟೆ	4,70,81,926	1,27,27,872
ಬಿಆರ್‌ಟಿಎಸ್ ಬೂಮ್ ಬ್ಯಾರಿಯರ್	2,11,92,467	–
ಬಿಎಸ್‌ಯುಪಿ ಪ್ಯಾಕೇಜು-01	4,17,03,214	13,10,62,523
ಬಿಎಸ್‌ಯುಪಿ ಪ್ಯಾಕೇಜು-02	19,90,23,915	5,45,95,731
ಬಿಎಸ್‌ಯುಪಿ ಪ್ಯಾಕೇಜು-03	7,33,22,470	13,93,23,282
ಸಿಸಿ ಟಿವಿ	8,45,476	29,23,756
ಚಿತಗುಪ್ಪಿ ಆಸ್ಪತ್ರೆ	3,61,36,133	80,56,337
ಕಮಾಂಡ್ ಅಂಡ್ ಕಂಟ್ರೋಲ್ ಕೇಂದ್ರ	–	1,71,37,904
ಸಲಹಾ ಶುಲ್ಕಗಳು	–	5,58,715
ಸಲಹಾ ಶುಲ್ಕಗಳು (ಪಿಡಬ್ಲ್ಯುಸಿ)	3,00,17,671	3,63,27,858
ಬದಲಾವಣೆಗಾಗಿ ಸೈಕಲ್ಲುಗಳು	22,52,716	–
ಡಿಜಿಟಲ್ ಡಿಸ್‌ಪ್ಲೆ ಬೋರ್ಡ್	1,22,36,000	–
ಇ ಶೌಚಾಲಯ ಓ ಅಂಡ್ ಎಂ	2,82,914	2,02,081
ವಿದ್ಯುತ್ ಚಿತಾಗಾರ	1,63,63,034	–
ಮೀನು ಮಾರುಕಟ್ಟೆಗಳು	4,27,70,061	57,95,094
ಗಾಜಿನ ಮನೆ	77,88,509	90,53,642
ಜಿಪಿಎಸ್ ಟ್ರಾಕರ್	2,80,000	–
ಐಸಿಸಿಸಿ	21,82,77,135	64,28,981
ಐಸಿಸಿಸಿ ಕಟ್ಟಡ	1,51,45,485	3,36,35,412

ಐಸಿಸಿಸಿ ಆಂತರಿಕ ಅಲಂಕರಣ	26,79,800	2,20,40,353
ಜನತಾ ಬಜಾರ್ ಮಾರುಕಟ್ಟೆ – ಪುನರ್ವಸತಿ	5,80,57,803	2,25,01,646
ಜೆಟ್ಟಿಂಗ್ ಯಂತ್ರ	–	1,14,28,164
ಕಿಮ್ಸ್ ಗೇಟು	17,32,703	–
ಮೇದರ ಓಣಿ	1,78,22,411	31,24,440
ಎಂಜಿ ಉದ್ಯಾನವನ	2,87,92,003	5,05,04,895
ಸಂಚಾರಿ ವಾಚನಾಲಯ ವ್ಯಾನು	19,64,000	–
ಎಂಎಸ್‌ಎಂಇ ಕೈಗಾರಿಕಾ ಪ್ರದೇಶ ಪ್ಯಾಕೇಜು – 01	47,44,780	10,69,74,516
ನೆಹರೂ ಕ್ರೀಡಾಂಗಣ	4,68,91,380	30,93,494
ಹಳೆಯ ಬಸ್ಸು ನಿಲ್ದಾಣ	5,58,79,011	–
ಹಳೆಯ ಹುಬ್ಬಳ್ಳಿ ಮಾರುಕಟ್ಟೆ	46,50,752	12,41,897
ಯೋಜನಾ ವೆಚ್ಚಗಳು – ಕೋವಿಡ್ – 19		
ತಂತ್ರಾಂಶ ಅನ್ವಯ ವೆಚ್ಚಗಳು	–	3,55,532
ಯೋಜನಾ ವೆಚ್ಚಗಳು – ಎಚ್‌ಡಿಎಂಸಿಗೆ ವಾಹನ ಸರಬರಾಜು	–	5,70,105
